# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.

(ಕರ್ನಾಟಕ ಸರ್ಕಾರದ ಅಂಗಸಂಸ್ಥೆ)

**ದಿನಾಂಕ:24-05-2016 ರಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರ ಅಧ್ಯಕ್ಷತೆಯಲ್ಲಿ ನಡೆದ 66ನೇ ಆಡಳಿತ ಮಂಡಳಿ ಸಭೆಯ ನಡವಳಿ**

## ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

**ದಿನಾಂಕ:24-05-2016ರಂದು ಸಂಜೆ 4.00 ಗಂಟೆಗೆ ಸನ್ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರು ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ 66ನೇ ಆಡಳಿತ ಮಂಡಳಿ ಸಭೆಯ ನಡವಳಿ:**

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಶ್ರೀ.ಹೆಚ್. ಆಂಜನೇಯ,<br>ಮಾನ್ಯ ಸಮಾಜ ಕಲ್ಯಾಣ & ಹಿಂದುಳಿದ ವರ್ಗಗಳ ಇಲಾಖೆಗಳ ಸಚಿವರು<br>ಹಾಗೂ ಅಧ್ಯಕ್ಷರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು. | ಅಧ್ಯಕ್ಷರು |
| 2. | ಶ್ರೀ.ಗಂಗಾರಾಮ್ ಬಡೇರಿಯಾ ಐ.ಎ.ಎಸ್.<br>ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು. | ಉಪಾಧ್ಯಕ್ಷರು |
| 3. | ಶ್ರೀ.ನವೀನ್‌ರಾಜ್ ಸಿಂಗ್ ಐ.ಎ.ಎಸ್.<br>ಸರ್ಕಾರದ ಕಾರ್ಯದರ್ಶಿ,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಶ್ರೀ.ರಿತೇಶ್ ಕುಮಾರ್ ಸಿಂಗ್ ಐ.ಎ.ಎಸ್.,<br>ಸರ್ಕಾರದ ಕಾರ್ಯದರ್ಶಿ,ಆರ್ಥಿಕ ಇಲಾಖೆ(ವೆಚ್ಚ), ಬೆಂಗಳೂರು | ಸದಸ್ಯರು |
| 4. | ಶ್ರೀಮತಿ. ಎಂ.ವಿ.ಸಾವಿತ್ರಿ , ಐ.ಎ.ಎಸ್.,<br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 5. | ಶ್ರೀ.ಎಂ.ಆರ್.ಹಿರೇಮಠ್ ಕೆ.ಎ.ಎಸ್.,<br>ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, | ಸದಸ್ಯ ಕಾರ್ಯದರ್ಶಿ |
| 6. | ಶ್ರೀ.ಇ.ವೆಂಕಟಯ್ಯ ಐ.ಎ.ಎಸ್.,<br>ಎಸ್‌ಸಿಪಿ ಟಿಎಸ್‌ಪಿ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ | ವಿಶೇಷ ಆಹ್ವಾನಿತರು |
| | **ಸದಸ್ಯರ ಬದಲಿಗೆ ಹಾಜರಾದವರು** | |
| 1 | ಶ್ರೀ.ಕೆ.ಆನಂದ<br>ನಿರ್ದೇಶಕರು (ಪ್ರಾಥಮಿಕ), ಸಾರ್ವಜನಿಕ ಶಿಕ್ಷಣ ಇಲಾಖೆ | ಪ್ರತಿನಿಧಿ |
| 2. | ಶ್ರೀ.ರಮೇಶ್ ಬಾಬು<br>ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| 3. | ಶ್ರೀ.ಅಶೋಕ್ ಕುಮಾರ್<br>ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಪ್ರತಿನಿಧಿ |
| 4. | ಶ್ರೀಮತಿ.ಲಲಿತಾ ಸಿರಿಯಣ್ಣನವರ್<br>ಉಪ ನಿರ್ದೇಶಕರು,<br>ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು | ಪ್ರತಿನಿಧಿ |

ಕಾರ್ಯನಿರ್ವಾಹಕ ನಿರ್ದೇಶಕರು, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಿಗೆ, ಸಂಘದ ಉಪಾಧ್ಯಕ್ಷರು, ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರುಗಳಿಗೆ ಹಾಗೂ ಆಡಳಿತ ಮಂಡಳಿಯ ಇತರೆ ಸದಸ್ಯರುಗಳಿಗೆ ಹಾರ್ಥಿಕ ಸ್ವಾಗತವನ್ನು ಬಯಸುತ್ತಾ, ಮಾನ್ಯ ಸಚಿವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

**ವಿಷಯ ಸಂಖ್ಯೆ: 1**

**ದಿನಾಂಕ: 19-01-2016 ರಂದು ನಡೆದ 65ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸುವುದು.**

**ತೀರ್ಮಾನ:**

ದಿನಾಂಕ: 19-01-2016 ರಂದು ನಡೆದ 65ನೇ ಆಡಳಿತ ಮಂಡಳಿ ಸಭೆಯ ನಡವಳಿಗಳನ್ನು ಓದಿ ಅನುಮೋದಿಸಲಾಯಿತು.

**ವಿಷಯ ಸಂಖ್ಯೆ: 2**

**ದಿನಾಂಕ:19-01-2016 ರಂದು ನಡೆದ 65ನೇ ಆಡಳಿತ ಮಂಡಳಿ ಸಭೆಯ ತೀರ್ಮಾನಗಳ ಮೇಲೆ ತೆಗೆದುಕೊಂಡ ಕ್ರಮವನ್ನು ಅನುಮೋದಿಸುವ ಬಗ್ಗೆ:**

ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 65ನೇ ಆಡಳಿತ ಮಂಡಳಿಯ ಸಭೆಯ ತೀರ್ಮಾನಗಳನ್ನು ಅವಲೋಕಿಸಿ, ಈ ಕೆಳಕಡಂಡ ಕ್ರಮಗಳ ಬಗ್ಗೆ ತೀರ್ಮಾನ ನೀಡಿತು.

1. ಸಂಘದ 65ನೇ ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ, ಪಠ್ಯಪುಸ್ತಕಗಳನ್ನು ಪೂರೈಕೆ ಮಾಡುವ ಸಂಬಂಧ ಸಂಘವು ಕೈಗೊಂಡ ಕ್ರಮವನ್ನು ಅವಲೋಕಿಸಿ, 2016-17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಶಿಕ್ಷಣ ಇಲಾಖೆಯಿಂದ ಖರೀದಿಸಿ, ಸಕಾಲದಲ್ಲಿ ಪೂರೈಕೆ ಮಾಡುವ ಸಂಬಂಧ ಒಟ್ಟು ರೂ. 3,59,91,630/-ಗಳ ಅನುದಾನವನ್ನು ವಸತಿ ಶಾಲೆಗಳಿಗೆ ಸಂಘವು ಬಿಡುಗಡೆ ಮಾಡಿದ ಕ್ರಮವನ್ನು ಅನುಮೋದಿಸಿತು.
2. ವಸತಿ ಶಾಲೆಗಳಿಗೆ ಬಿಡುಗಡೆ ಮಾಡಿದ CBSE ಪಠ್ಯ ಕ್ರಮವನ್ನು ಅಳವಡಿಸಿಕೊಳ್ಳುವ ಬಗ್ಗೆ ಸಂಘವು ತೆಗೆದುಕೊಂಡ ಕ್ರಮವನ್ನು ಚರ್ಚಿಸಿತು. ತತ್ಸಂಬಂಧವಾಗಿ ಸಂಘದ ಅಧಿಕಾರಿಗಳು ಸಿಬಿಎಸ್ಇ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರದ ನಿಯಮಾವಳಿ, ಮಾನದಂಡಗಳ ಮತ್ತು ಮೂಲಭೂತ ಸೌಕರ್ಯಗಳ ಅಗತ್ಯತೆ ಬಗ್ಗೆ ಪರಿಶೀಲಿಸಿ, ಹೊಸದಾಗಿ ಪ್ರಾರಂಭವಾಗುವ ವಸತಿ ಶಾಲೆಗಳ ಪೈಕಿ ಜಿಲ್ಲೆಗೆ ಒಂದು ವಸತಿ ಶಾಲೆಗೆ CBSE ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ಪಡೆಯುವಂತೆ ತೀರ್ಮಾನಿಸಲಾಯಿತು.
3. ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 224 ಬಿಎಂಎಸ್ 2016, ದಿನಾಂಕ:18-03-2016ರ ಆದೇಶದನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ 2016-17ನೇ ಸಾಲಿನಲ್ಲಿ ಸಿಧ್ಧಪಡಿಸಿದ ಸಮವಸ್ತ್ರಗಳನ್ನು ಖರೀದಿಸಿ, ಸರಬರಾಜು ಮಾಡಲು ಸಂಘವು ಮೆ|| ಕರ್ನಾಟಕ ಕೈಮಗ್ಗ ಅಭಿವೃಧ್ಧಿ ನಿಗಮ ನಿಯಮಿತಕ್ಕೆ ಕಾರ್ಯಾದೇಶ ನೀಡಿದ್ದುದನ್ನು ಸಭೆಯು ಅವಲೋಕಿಸಿತು. ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ(ವೆಚ್ಚ)ರವರು ಈ ಬಗ್ಗೆ ಮಾತಾನಾಡುತ್ತಾ, ಸಂಘವು ಪ್ರಸ್ತಾಪಿಸಿದ ಸಿಧ್ಧಪಡಿಸಿದ ಸಮವಸ್ತ್ರಗಳ ವೆಚ್ಚವು ರೂ.21.29 ಕೋಟಿಗಳಾಗಿದ್ದು, ಈ ಬಗ್ಗೆ ಸಂಘವು ಸಚಿವ ಸಂಪುಟದ ಘಟನೋತ್ತರ ಅನುಮೋದನೆ ಪಡೆಯುವುದು ಅಗತ್ಯವೆಂದು ತಿಳಿಸಿದರು ಹಾಗೂ ಸಚಿವ ಸಂಪುಟದ ಅನುಮೋದನೆ ಪಡೆಯಲು ಸರ್ಕಾರಕ್ಕೆ ಸಂಘವು ಸೂಕ್ತ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿತು.

**ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು**

4. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನ ಅಧೀನದ 332 ಖಾಯಂ ಸಮಾಜ ವಿಜ್ಞಾನ ಶಿಕ್ಷಕರುಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಸಂವಹನ ಕೌಶಲ ತರಬೇತಿಗೆ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಸೌತ್ ಇಂಡಿಯಾ ಬೆಂಗಳೂರು ಇಲ್ಲಿಗೆ ನಿಯೋಜಿಸಿದ ಕ್ರಮವನ್ನು ಅವಲೋಕಿಸಿದ ಆಡಳಿತ ಮಂಡಳಿಯು ಸಮಾಜ ವಿಜ್ಞಾನ ಶಿಕ್ಷಕರುಗಳ ತರಬೇತಿಯ ಉಪಯುಕ್ತತೆ ಬಗ್ಗೆ ಕಾರ್ಯನಿರ್ವಾಹಕ ನಿರ್ದೇಶಕರಿಗೆ ತರಬೇತಿ ಕೇಂದ್ರಕ್ಕೆ ಬೇಟಿ ಮಾಡಿ ಪರಿಶೀಲನೆ ನಡೆಸಲು ತೀರ್ಮಾನಿಸಲಾಯಿತು.

5. 65ನೇ ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ, ಕೃತ್ರಿಮ ಎಂದು ಕಂಡುಬಂದಿದ್ದ 27 ಅಭ್ಯರ್ಥಿಗಳಿಗೆ ಸಂಘವು ಹಿಂಬರಹ ನೀಡಿ, ಈ ಬಗ್ಗೆ ಸಂಘವು ಕೈಗೊಂಡ ಕ್ರಮವನ್ನು ಅನುಮೋದಿಸಿತು. ಈ ಬಗ್ಗೆ ಮಾನ್ಯ ಸಲಹೆಗಾರರು, ಎಸ್‌ಸಿಪಿ ಮತ್ತು ಟಿಎಸ್‌ಪಿ ರವರಿಂದ ಮತ್ತೊಮ್ಮೆ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲು ತೀರ್ಮಾನಿಸಿತು,

6. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 405 ವಸತಿ ಶಾಲೆಗಳಿಗೆ ಬಯೊಮೆಟ್ರಿಕ್ ಹಾಜರಾತಿ ಪದ್ಧತಿಯನ್ನು ಜಾರಿಗೊಳಿಸಿರುವುದನ್ನು ಶ್ಲಾಘಿಸಿ, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ಪ್ರತಿನಿತ್ಯದ ಹಾಜರಾತಿಯನ್ನು ಆನ್‌ಲೈನ್‌ನಲ್ಲಿ ವೀಕ್ಷಣೆ ಮಾಡಿ, ಅದರಂತೆ ಸಂಘವು ಪ್ರತಿ ಮಾಹೆಯ ಆಹಾರ ಮತ್ತು ಇತರೆ ನಿರ್ವಹಣಾ ವೆಚ್ಚಕ್ಕೆ ಸಂಬಂಧಿಸಿದ ಅನುದಾನವನ್ನು ವಸತಿ ಶಾಲೆಗಳಿಗೆ ಬಿಡುಗಡೆ ಮಾಡಲು ತೀರ್ಮಾನಿಸಿತು.

7. ಆಡಳಿತ ಮಂಡಳಿಯು 402 ವಸತಿ ಶಾಲೆಗಳಿಗೆ ಮೆ॥ ಬಿಎಸ್‌ಎನ್‌ಎಲ್ ಸಂಸ್ಥೆಯ ವತಿಯಿಂದ ULD Combo-1091 Broadband with land line Telephone ಸೌಲಭ್ಯವನ್ನು ಒದಗಿಸಲು ಸಂಘವು ತೆಗೆದುಕೊಂಡ ಕ್ರಮವನ್ನು ಹಾಗೂ ತತ್ಸಂಬಂಧವಾಗಿ ಭರಿಸಿದ **ರೂ.16.41** ಲಕ್ಷಗಳ ವೆಚ್ಚವನ್ನು ಅನುಮೋದಿಸಿತು.

8. 2016-17ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿಗಳ ಮಾಸಿಕ ವೆಚ್ಚವನ್ನು ರೂ.1400/- ಗಳಿಗೆ ಹೆಚ್ಚಿಸಲು ಸರ್ಕಾರವು ಆದೇಶ ಹೊರಡಿಸಲು ಕ್ರಮವಹಿಸಿರುವುದನ್ನು ಸಭೆಯು ಅವಗಾಹಿಸಿತು. ಪರಿಷ್ಕೃತ ಬೋಜನಾ ವೆಚ್ಚದ ದರಗಳಿಗೆ ಅನುಗುಣವಾಗಿ ವಸತಿ ಶಾಲೆಗಳ ಮೇನುಚಾರ್ಟನ್ನು ಪರಿಷ್ಕರಿಸಿ ಸರ್ಕಾರದ ಆದೇಶ ಪಡೆಯುವಂತೆ ತೀರ್ಮಾನಿಸಲಾಯಿತು.

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

**ವಿಷಯ ಸಂಖ್ಯೆ: 3**

**2016-17ನೇ ಸಾಲಿನ ಆಯವ್ಯಯದಲ್ಲಿ ಸಂಘಕ್ಕೆ ನಿಗಧಿಪಡಿಸಿದ ಅನುದಾನ, ಬಿಡುಗಡೆ, ಖರ್ಚು ಹಾಗೂ ಶಿಲ್ಕಿನ ವಿವರಗಳು**

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ 2016-17ನೇ ಸಾಲಿನ ಆಯವ್ಯಯದಲ್ಲಿ ನಿಗಧಿಗೊಳಿಸಿದ ಅನುದಾನ, ಬಿಡುಗಡೆ, ವೆಚ್ಚ ಮತ್ತು ದಿನಾಂಕ:30-04-2016ರ ಅಂತ್ಯಕ್ಕೆ ಆದ ವೆಚ್ಚ ಹಾಗೂ ಉಳಿಕೆಯಾದ ಅನುದಾನದ ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ. ವಿಷಯವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ಮಂಡಿಸಲಾಗಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳ ಕಟ್ಟಡ ನಿರ್ಮಾಣ ಮತ್ತು ವಸತಿ ಶಾಲೆಗಳ ನಿರ್ವಹಣೆಗಾಗಿ 2016-17ನೇ ಸಾಲಿನ ಆಯವ್ಯಯದಲ್ಲಿ ನಿಗಧಿಗೊಳಿಸಿದ ಅನುದಾನ, ಬಿಡುಗಡೆ, ವೆಚ್ಚ ಮತ್ತು ದಿನಾಂಕ:30-04-2016ರ ಅಂತ್ಯಕ್ಕೆ ಆದ ವೆಚ್ಚ ಹಾಗೂ ಉಳಿಕೆಯಾದ ಅನುದಾನದ ವಿವರಗಳನ್ನು ಅವಗಾಹಿಸಿತು.**

**ವಿಷಯ ಸಂಖ್ಯೆ: 4**

**2014-15ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಅನುಮೋದಿಸಿ ವಾರ್ಷಿಕ ಸರ್ವ ಸಾಮಾನ್ಯ ಸದಸ್ಯರ ಮಹಾಸಭೆಯಲ್ಲಿ ಮಂಡಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2014-15ನೇ ಸಾಲಿನ ಲೆಕ್ಕ ಪತ್ರಗಳನ್ನು ಚಾರ್ಟೆಡ್ ಅಕೌಂಟೆಂಟ್‌ರವರಾದ **ಮೆ|| ಪೂಜಾರಿ ಮತ್ತು ಅಸೋಸಿಯೇಟ್ಸ್, ಬೆಂಗಳೂರು** ರವರು ಪರಿಶೀಲನೆ ನಡೆಸಿರುತ್ತಾರೆ. 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಸಂಘದ ಆರ್ಥಿಕ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ತೋರಿಸಲಾಗಿದೆ. 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಆಡಳಿತ ಮಂಡಳಿಯಲ್ಲಿ ಅನುಮೋದಿಸಿದಂತೆ, ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 2014-15ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಅವಗಾಹಿಸಿ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಗೆ ಮಂಡಿಸಿ ಅನುಮೋದನೆ ಪಡೆಯಲು ತೀರ್ಮಾನಿಸಲಾಯಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 5**

**ಹುಡ್ಕೊ ಸಂಸ್ಥೆಯು ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣಗಳ ನಿರ್ಮಾಣಕ್ಕೆ ನೀಡಿದ ಸಾಲದ ನೆರವಿನ ಮೇಲೆ 2015-16ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿಸಬೇಕಾದ ಗ್ಯಾರಂಟಿ ಕಮೀಷನ್ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2000-01ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಒಟ್ಟು 53 ವಸತಿ ಶಾಲೆಗಳಿಗೆ ಹುಡ್ಕೋ ಸಂಸ್ಥೆಯಿಂದ ಸರ್ಕಾರದ ಭದ್ರತೆ (ಗ್ಯಾರಂಟಿ)ಯೊಂದಿಗೆ ರೂ.76.30 ಕೋಟಿ ಸಾಲದ ನೆರವನ್ನು ಪಡೆದಿದೆ. ಈ ಸಾಲವನ್ನು 15 ವರ್ಷಗಳಲ್ಲಿ ಅಸಲು ಮತ್ತು ಬಡ್ಡಿಯೊಂದಿಗೆ ಮರು ಪಾವತಿಸಲಾಗುತ್ತಿದೆ. ಸರ್ಕಾರದ ನಿಬಂಧನೆಯಂತೆ ಪ್ರತಿ ವರ್ಷ ಹುಡ್ಕೋ ಸಂಸ್ಥೆಗೆ ಪಾವತಿಸಬೇಕಾದ ಬಾಕಿ ಉಳಿಯುವ ಮೊತ್ತದ ಮೇಲೆ ಶೇ.1%ರಷ್ಟು ಗ್ಯಾರಂಟಿ ಕಮೀಷನ್‌ನ್ನು ಈ ಕೆಳಕಂಡಂತೆ ಸರ್ಕಾರಕ್ಕೆ ಪಾವತಿಸಬೇಕಾಗಿದ್ದು, ಸಂಘವು ಅಲ್ಪಾವಧಿ ಠೇವಣಿಗಳ ಮೇಲೆ ಗಳಿಸಿದ ಬಡ್ಡಿ ಹಣದಲ್ಲಿ ಪಾವತಿಸುತ್ತಿದೆ.

| ವರ್ಷ | ಹುಡ್ಕೊ ಸಂಸ್ಥೆಗೆ ಪಾವತಿಸಿದ ಬಾಕಿ ಮೊತ್ತ (ರೂ.ಗಳಲ್ಲಿ) | ಸರ್ಕಾರಕ್ಕೆ ಪಾವತಿಸಬೇಕಾದ ಗ್ಯಾರಂಟಿ ಕಮಿಷನ್‌ನ ಮೊತ್ತ (ರೂ.ಗಳಲ್ಲಿ) |
|---|---|---|
| 2015-16 | 3,81,90,685/- | 1,78,463/- |

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸುತ್ತಾ 2015-16ನೇ ಸಾಲಿನಲ್ಲಿ ಹುಡ್ಕೊ ಸಂಸ್ಥೆಗೆ ಪಾವತಿಸಿದ ಬಾಕಿ ಮೊತ್ತದ ಶೇ.1%ರಷ್ಟು ಗ್ಯಾರಂಟಿ ಕಮಿಷನ್ ಮೊತ್ತ ರೂ. 1,78,463/- ಗಳನ್ನು ಸಂಘವು ಅಲ್ಪಾವಧಿ ಠೇವಣಿಗಳ ಮೇಲೆ ಗಳಿಸಿದ ಬಡ್ಡಿ ಹಣದಲ್ಲಿ ಪಾವತಿಸಲು ಅನುಮೋದನೆ ಕೋರಿದೆ.

**ತೀರ್ಮಾನ:**

**2015-16ನೇ ಸಾಲಿನಲ್ಲಿ ಮೆ|| ಹುಡ್ಕೊ ಸಂಸ್ಥೆಗೆ ಸಂಘವು ಪಾವತಿಸಿದ ಬಾಕಿ ಮೊತ್ತದ ಮೇಲೆ ಶೇ.1 ರಷ್ಟು ಗ್ಯಾರಂಟಿ ಕಮಿಷನ್ ಮೊತ್ತ ರೂ.1.78,463/-ನ್ನು ಸರ್ಕಾರಕ್ಕೆ ಪಾವತಿಸಲು ಹಾಗೂ ಈ ವೆಚ್ಚವನ್ನು ಬಡ್ಡಿ ಹಣದಲ್ಲಿ ಭರಿಸಲು ಆಡಳಿತ ಮಂಡಳಿಯು ಅನುಮೋದಿಸಿತು.**

**ವಿಷಯ ಸಂಖ್ಯೆ: 6**

**2015-16ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ ಬಿಡುಗಡೆಯಾದ ಅನುದಾನವನ್ನು ನಿಶ್ಚಿತ ಠೇವಣಿ/ಉಳಿತಾಯ ಖಾತೆಯಲ್ಲಿ ಹೂಡಿಕೆ ಮಾಡಿರುವ ಮೊತ್ತ ಮತ್ತು ಗಳಿಸಿದ ಬಡ್ಡಿಯ ವಿವರಗಳು.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಿವಿಧ ಕಾರ್ಯಕ್ರಮಗಳಿಗೆ ಇಲಾಖಾವಾರು ಬಿಡುಗಡೆಯಾಗಿ ತಕ್ಷಣ ಉಪಯೋಗವಾಗದೇ ಇರುವ ಅನುದಾನವನ್ನು ಹೂಡಿಕೆ ಮಾಡಲು ಸಂಘದ 63ನೇ ಆಡಳಿತ ಮಂಡಳಿಯು ಅನುಮೋದಿಸಿದ ಹೂಡಿಕೆ ಸಮಿತಿಯ ತೀರ್ಮಾನದಂತೆ, ನಿಶ್ಚಿತ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ನಿಶ್ಚಿತ ಠೇವಣಿಯಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ಇರಿಸಲಾಗಿದೆ. ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿರುವ ಮೊತ್ತ ಮತ್ತು ಬ್ಯಾಂಕ್‌ಗಳ ವಿವರಗಳನ್ನು ಅನುಬಂಧ-1 ರಲ್ಲಿ ತೋರಿಸಿದೆ.

ಈ ನಿಶ್ಚಿತ ಠೇವಣಿ ಹಾಗೂ ಸಂಘದ ಉಳಿತಾಯ ಖಾತೆಗಳ ಮೇಲೆ ದಿನಾಂಕ:18.05.2016 ರವರೆಗೆ ಗಳಿಸಿದ ಬಡ್ಡಿ ಹಣದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

| Sl. No. | Category | FD Interest | | | SB interest | Grand total |
|---|---|---|---|---|---|---|
| | | Maintenance | Construction | Total | | |
| 1 | S C | 16,911,507 | 99,279,544 | 116,191,051 | 21198320 | 137,389,371 |
| 2 | S T | 614,904 | 6,764,603 | 7,379,507 | 8859170 | 16,238,677 |
| 3 | B C | 4,919,781 | - | 4,919,781 | 12,307,038 | 17,226,819 |
| 4 | MC | - | - | - | 713,039 | 713,039 |
| 5 | EMD/FSD | | | 5,464,384 | - | 5,464,384 |
| 6 | KREIS Office Maintenance | | | 24,464,028 | 19948398 | 44,412,426 |
| 7 | SC/ST Dept.Grant | | | 175,391,784 | 11378907 | 186,770,691 |
| | **TOTAL** | | | **333,810,534** | **74,404,872** | **408,215,406** |

ಮೇಲ್ಕಂಡಂತೆ ಸಂಘವು ಹೂಡಿಕೆ ಮೇಲೆ ರೂ.40,82,15,406/-ಗಳ ಬಡ್ಡಿಯನ್ನು ಗಳಿಸಿದ್ದು, ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸುತ್ತಾ, ಸಂಘದ ಹೂಡಿಕೆ ಸಮಿತಿಯ ಮೂಲಕ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿರುವ ಸಂಘದ ಕ್ರಮಕ್ಕೆ ಅನುಮೋದನೆ ಕೋರಿದೆ.

**<u>ತೀರ್ಮಾನ:</u>**

**ಆಡಳಿತ ಮಂಡಳಿಯು 2015-16ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಂದ ಬಿಡುಗಡೆಯಾದ ಅನುದಾನವನ್ನು ನಿಶ್ಚಿತ ಠೇವಣಿ/ಉಳಿತಾಯ ಖಾತೆಯಲ್ಲಿ ಹೂಡಿಕೆ ಮಾಡಿರುವ ಮೊತ್ತ ಮತ್ತು ಗಳಿಸಿದ ಬಡ್ಡಿಯ ವಿವರಗಳನ್ನು ಅವಲೋಕಿಸಿ ಅನುಮೋದಿಸಿತು. ಅಲ್ಲದೇ, ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ)ರವರು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ(KUIDFC) ಕಛೇರಿಯಲ್ಲಿ ನಿಶ್ಚಿತ ಠೇವಣಿ/ಉಳಿತಾಯ ಖಾತೆಯಲ್ಲಿ ಹಣ ಹೂಡಿಕೆ ಮಾಡಲು ಇ-ಆಡಳಿತ ಇಲಾಖೆಯ e-proc ವೆಬ್‌ಸೈಟ್‌ನ e-auction ನ್ನು ಅಳವಡಿಸಿಕೊಂಡು ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ. ಈ ಬಗ್ಗೆ ಪರಿಶೀಲಿಸಿ, ಅದೇ ಪದ್ಧತಿಯನ್ನು ಸಂಘದಲ್ಲಿಯೂ ಸಹ ಅನುಷ್ಠಾನಗೊಳಿಸಬಹುದಾಗಿದೆಯೆಂದು ಸಭೆಗೆ ತಿಳಿಸಿದರು. ಆಡಳಿತ ಮಂಡಳಿಯು ಸದರಿಯವರ ಅಭಿಪ್ರಾಯವನ್ನು ಸಮ್ಮತಿಸಿ, ಸಂಘವು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ತೀರ್ಮಾನಿಸಿತು.**

**<u>ವಿಷಯ ಸಂಖ್ಯೆ: 7</u>**

**<u>ವಸತಿ ಶಾಲಾ/ಕಾಲೇಜುಗಳ ನಿರ್ವಹಣೆಗಾಗಿ ಅನುದಾನ ಒದಗಿಸಲು 2016-17ನೇ ಸಾಲಿನ ಕ್ರಿಯಾಯೋಜನೆ ಅನುಮೋದಿಸುವ ಬಗ್ಗೆ.</u>**

ರಾಜ್ಯದಲ್ಲಿನ ಒಟ್ಟು 505 ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ ವಸತಿ ಶಾಲೆಗಳು ಹಾಗೂ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ 2016-17ನೇ ಸಾಲಿಗೆ ಪ್ರತಿ ವಸತಿ ಶಾಲೆಗೆ ವಿವಿಧ ಬಾಬ್ತುಗಳಿಗೆ ಲೆಕ್ಕಾಚಾರ ಮಾಡಿ ಕ್ರಿಯಾಯೋಜನೆ

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ತಯಾರಿಸಲಾಗಿದೆ. ಈ ರೀತಿ ವಸತಿ ಶಾಲೆಗಳ ನಿರ್ವಹಣೆಗಾಗಿ ಮತ್ತು ಕಟ್ಟಡಗಳ ನಿರ್ಮಾಣಕ್ಕಾಗಿ 2016-17ನೇ ಸಾಲಿಗೆ ಪ್ರಸ್ತಾಪಿಸಿದ ಅಂದಾಜು ಕ್ರಿಯಾಯೋಜನೆಯಲ್ಲಿ ಶಾಲಾವಾರು ಮತ್ತು ಇಲಾಖಾವಾರು ನಿಗಧಿಪಡಿಸಿದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, 2016-17ನೇ ಸಾಲಿಗೆ ಪ್ರಸ್ತಾಪಿಸಿರುವ ಕ್ರಿಯಾಯೋಜನೆಯನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2016-17ನೇ ಸಾಲಿಗೆ ಸಂಘದ ಆಯವ್ಯಯಕ್ಕನುಗುಣವಾಗಿ ತಯಾರಿಸಲಾದ ಕ್ರಿಯಾಯೋಜನೆಯನ್ನು ಅವಲೋಕಿಸಿ ಅನುಮೋದಿಸಿತು.**

**ವಿಷಯ ಸಂಖ್ಯೆ : 8**

**ವಸತಿ ಶಾಲಾ/ಕಾಲೇಜುಗಳ 2016-17 ನೇ ಸಾಲಿನ ನಿರ್ವಹಣಾ ಕ್ರಿಯಾಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲಾ ಕಾಲೇಜುಗಳ ಪ್ರಾಂಶುಪಾಲರು 2016-17 ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಕೆಲವೊಂದು ಸೌಲಭ್ಯಗಳಿಗೆ ನಿಗಧಿಪಡಿಸಿದ ದರಗಳನ್ನು ಪರಿಷ್ಕರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಪ್ರಾಂಶುಪಾಲರುಗಳ ಕೋರಿಕೆಯಂತೆ, ಸದರಿ ಕ್ರಿಯಾಯೋಜನೆಯನ್ನು ಪರಿಷ್ಕರಿಸುವುದು ಅವಶ್ಯಕವಾಗಿದ್ದು, ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

| ಕ್ರ.ಸಂ. | ಹಾಲಿ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡ ಸೌಲಭ್ಯಗಳ ವಿವರ | | ಪರಿಷ್ಕರಿಸಬೇಕಾದ ಮೊತ್ತ (ರೂ.ಗಳಲ್ಲಿ) | ಹೆಚ್ಚುವರಿ ಮೊತ್ತ (ರೂ.ಗಳಲ್ಲಿ) | 505 ವಸತಿ ಶಾಲೆಗಳಿಗೆ ಭರಿಸಬೇಕಾದ ಹೆಚ್ಚುವರಿ ವಾರ್ಷಿಕ ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|---|---|
| | ವಿವರ | ಮೊತ್ತ (ರೂ.ಗಳಲ್ಲಿ) | | | |
| 1 | ಕ್ರೀಡಾ ಮತ್ತು ಸಾಂಸ್ಕೃತಿಕ ವೆಚ್ಚ (ಪ್ರತಿ ಶಾಲೆಗೆ) | 10000 | 20000 | 10000 | 50.50 |
| 2 | ಕಟ್ಟಡಗಳ ಸಣ್ಣಪುಟ್ಟ ರಿಪೇರಿ ವೆಚ್ಚಕ್ಕಾಗಿ (ಬಾಡಿಗೆ/ಬಾಡಿಗೆ ರಹಿತ) | 20000 | 50000 | 30000 | 51.00 |
| 3 | ರಾಷ್ಟ್ರೀಯ ಹಬ್ಬಗಳ ದಿನಾಚರಣೆಯ ವೆಚ್ಚಕ್ಕಾಗಿ | 7500 | 10000 | 2500 | 12.63 |
| 4 | ಕ್ಷೌರ ವೆಚ್ಚಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ರೂ. 20/- ರಂತೆ ವಾರ್ಷಿಕ (ಬಾಲಕರಿಗೆ) | 20 | 30 | 10 | 61.49 |
| 5 | ಪ್ರತಿ ವಸತಿ ಶಾಲೆಗೆ ವೈದ್ಯಕೀಯ ವೆಚ್ಚ | 20000 | 25000 | 5000 | 25.25 |
| 6 | ಪ್ರಯಾಣ ಭತ್ಯೆ/ದಿನ ಭತ್ಯೆ (ವಾರ್ಷಿಕ) | 10000 | 15000 | 5000 | 25.25 |
| | **ಒಟ್ಟು (ಅ)** | **67520** | **120030** | **52510** | **226.12** |

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

## ಹಾಲಿ ಕ್ರಿಯಾಯೋಜನೆಯಲ್ಲಿ ಹೊಸದಾಗಿ ಅಳವಡಿಸಿಕೊಳ್ಳಲು ಪ್ರಸ್ತಾಪಿಸಿದ ಸೌಲಭ್ಯಗಳ ವಿವರ

| ಕ್ರ..ಸಂ | ವಿವರ | ಮೊತ್ತ (ರೂ.ಗಳಲ್ಲಿ ) | 505 ವಸತಿ ಶಾಲೆಗಳಿಗೆ ಭರಿಸಬೇಕಾದ ಹೆಚ್ಚುವರಿ ವಾರ್ಷಿಕ ವೆಚ್ಚ (ರೂ. ಲಕ್ಷಗಳಲ್ಲಿ) |
|---|---|---|---|
| 1 | ಘಟಕ ಪರೀಕ್ಷೆ/ಕಿರುಪರೀಕ್ಷೆಗಳ ಪೇಪರ್ ಮತ್ತು ಪ್ರಶ್ನೆ ಪತ್ರಿಕೆಗಳ ಜೆರಾಕ್ಸ್ ಬಾಬ್ತು | 10000 | 50.50 |
| 2 | ಶುಚಿ ಸಾಮಗ್ರಿಗಳು (ಫೆನಾಯಿಲ್, ಬ್ಲೀಚಿಂಗ್ ಪೌಡರ್ ಇತರೆ | 20000 | 101.00 |
| 3 | 10 ಮತ್ತು 12 ನೇ ತರಗತಿ ವಿದ್ಯಾರ್ಥಿಗಳನ್ನು ಪರೀಕ್ಷಾ ಕೇಂದ್ರಕ್ಕೆ ಪ್ರಯಾಣ ಮಾಡಲು ಭರಿಸಬೇಕಾದ ಪ್ರಯಾಣ ವೆಚ್ಚಕ್ಕೆ ಮೀಸಲಿಟ್ಟ ಅನುದಾನ (ಒಟ್ಟು 487 ವಸತಿ ಶಾಲಾ/ಕಾಲೇಜುಗಳು) | 10000 | 25.00 |
| 4 | ವಿದ್ಯುತ್‌ನ ಹೆಚ್.ಟಿ.ಘಟಕ ತಪಾಸಣಾ ವೆಚ್ಚ (ಒಟ್ಟು 334 ಸ್ವಂತ ಕಟ್ಟಡಗಳಿಗೆ) | 3000 | 10.02 |
| | ಒಟ್ಟು (ಆ) | 43000 | 186.52 |
| | ಒಟ್ಟು (ಅ) +(ಆ) | | 412.64 |

ಮೇಲ್ಕಂಡಂತೆ 2016-17ನೇ ಸಾಲಿಗೆ ಕ್ರಿಯಾಯೋಜನೆಯಲ್ಲಿ ಹೊಸದಾಗಿ ಕೆಲವು ಐಟಂಗಳನ್ನು ಸೇರ್ಪಡೆ ಮಾಡಿಕೊಂಡು ದರಗಳನ್ನು ಪರಿಷ್ಕರಿಸಿದಲ್ಲಿ ಹೆಚ್ಚುವರಿಯಾಗಿ ರೂ. 412.64 ಲಕ್ಷಗಳ ವೆಚ್ಚವನ್ನು ಭರಿಸಬೇಕಾಗುತ್ತದೆ. ಸದರಿ ಹೆಚ್ಚುವರಿ ವೆಚ್ಚವನ್ನು 2016-17 ನೇ ಸಾಲಿನ ಆಯವ್ಯಯದಲ್ಲಿ ವಸತಿ ಶಾಲೆ ಮತ್ತು ಕಾಲೇಜುಗಳ ನಿರ್ವಹಣೆಗೆ ನಿಗದಿಪಡಿಸಲಾದ ಅನುದಾನದಲ್ಲೇ ಭರಿಸಲಾಗುವುದು.

ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ ಹಾಲಿ ಕ್ರಿಯಾಯೋಜನೆಯಲ್ಲಿ ಹೊಸದಾಗಿ ಕೆಲವು ಐಟಂಗಳನ್ನು ಸೇರ್ಪಡೆ ಮಾಡಿ ದರಗಳ ಪರಿಷ್ಕರಿಸಲು ಹಾಗೂ ಹೆಚ್ಚುವರಿ ವೆಚ್ಚ ರೂ.412.64 ಲಕ್ಷಗಳನ್ನು ಸಂಘವು ಭರಿಸಲು ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಸತಿ ಶಾಲಾ/ಕಾಲೇಜುಗಳ 2016-17ನೇ ಸಾಲಿನ ಕ್ರಿಯಾಯೋಜನೆಯನ್ನು ಪರಿಷ್ಕರಿಸುವ ಬಗ್ಗೆ ದೀರ್ಘವಾಗಿ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಲಾಯಿತು.**

**ಅ) ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಕ್ರಿಯಾಯೋಜನೆಯಲ್ಲಿ ಪ್ರಸ್ತಾಪಿಸಿದ ದರಗಳನ್ನು ಅನುಮೋದಿಸಿ, ಪ್ರತಿ ವಿದ್ಯಾರ್ಥಿಗೆ ಪ್ರಸ್ತಾಪಿಸಿದ ಕ್ಷೌರ ದರ ರೂ.30/-ನ್ನು 2 ತಿಂಗಳಿಗೊಮ್ಮೆ ವೆಚ್ಚ ಭರಿಸಲು ಅನುಮೋದಿಸಿತು.**

**ಆ) 2016-17ನೇ ಸಾಲಿನ ಕ್ರಿಯಾಯೋಜನೆಗೆ ಪ್ರಸ್ತಾಪಿಸಿದ ಪರಿಷ್ಕೃತ ದರಗಳನ್ನು ಅನುಮೋದಿಸಿತು.**

**ಇ) ಸದರಿ ಕ್ರಿಯಾಯೋಜನೆಯಲ್ಲಿ ಸೇರ್ಪಡೆಗೆ ಪ್ರಸ್ತಾಪಿಸಿದ ಐಟಂಗಳು ಮತ್ತು ದರಗಳನ್ನು ಅನುಮೋದಿಸಿತು.**

**ಈ) 2016-17ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆಯಲ್ಲಿ ಪರಿಷ್ಕೃತ ದರಗಳನ್ವಯ ವೆಚ್ಚ ಭರಿಸಲು ಸಂಘವು ಸೂಕ್ತ ಮಾರ್ಗಸೂಚಿಯನ್ನು ತಯಾರಿಸಿ, ಸಂಬಂದಪಟ್ಟ ಪ್ರಾಂಶುಪಾಲರುಗಳಿಗೆ ಮಾರ್ಗಸೂಚಿಗಳನ್ವಯ ವೆಚ್ಚವನ್ನು ಭರಿಸಲು ಕಟ್ಟುನಿಟ್ಟಾದ ಸೂಚನೆ ನೀಡಲು ತೀರ್ಮಾನಿಸಿತು.**

**ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು**

**ವಿಷಯ ಸಂಖ್ಯೆ : 9**

**ವಸತಿ ಶಾಲೆಗಳ ಬಾಕಿ ಬಿಲ್ಲುಗಳ ಪಾವತಿಗಾಗಿ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ.**

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 04 ಪರಿಶಿಷ್ಟ ಜಾತಿ ವಸತಿ ಶಾಲೆ ಹಾಗೂ 01 ಪರಿಶಿಷ್ಟ ವರ್ಗದ ವಸತಿ ಶಾಲೆಗಳಿಗೆ ಆಹಾರ ಸಾಮಗ್ರಿಗಳ ಮತ್ತು ಇನ್ನಿತರೆ ಸಾಮಗ್ರಿಗಳ ಸರಬರಾಜು ಮಾಡಿದ ಗುತ್ತಿಗೆದಾರರಾದ ಶ್ರೀ ರಂಗನಾಥ ಟ್ರೇಡರ್ಸ್, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ ಇವರಿಗೆ 2011-12 ಮತ್ತು 2012-13ನೇ ಸಾಲಿನ ಬಾಕಿ ಇರುವ ಬಿಲ್ಲುಗಳನ್ನು ಪಾವತಿಸಲು ಕ್ರಮವಹಿಸುವಂತೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ ಟಿಪ್ಪಣಿ ಸಂಖ್ಯೆ:087/2015/ದಿ;29.01.2015 ರ ನಿರ್ದೇಶನದ ಮೇರೆಗೆ ಆಡಿಟ್ ಮಾಡಲಾಗಿದೆ. ಆಡಿಟ್ ವರದಿಯಲ್ಲಿ ಪ್ರಸ್ತಾಪಿಸಿರುವ ರೂ.14,11,020/-ಗಳನ್ನು ಪಾವತಿಸಲು ಸಂಬಂಧಿಸಿದ ವಸತಿ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಪೂರ್ವಾನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ: ಸ.ಕ.ಇ. 06/ಮೊದೇಶಾ/2016/ದಿ:12.02.2016ರಲ್ಲಿ ನಿರ್ದೇಶಿಸಿರುವಂತೆ ನಿರ್ದೇಶಕರ ಮಂಡಳಿ ಸಭೆಯಲ್ಲಿ ಬಾಕಿ ಬಿಲ್ಲುಗಳ ಪಾವತಿಗೆ ಸಂಬಂಧಿಸಿದಂತೆ ವಿಷಯದ ಬಗ್ಗೆ ಚರ್ಚಿಸಿ ಅದರಂತೆ ಅಗತ್ಯ ಕ್ರಮವಹಿಸಲು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರ ಕರಾರು ಷರತ್ತು ಮತ್ತು ನಿಬಂಧನೆಗಳನ್ವಯ ಬಾಕಿ ಬಿಲ್ಲುಗಳ ರೂ.14,11,020/-ಗಳನ್ನು ಪಾವತಿಸಲು ಲಭ್ಯವಿರುವ ಅನುದಾನದಲ್ಲಿ ಈ ಕೆಳಕಂಡಂತೆ ಬಿಡುಗಡೆ ಮಾಡಿದೆ.

| ಕ್ರ. ಸಂ. | ವಸತಿ ಶಾಲೆಯ ಹೆಸರು | ಲೆಕ್ಕಶೀರ್ಷಿಕೆ | ಬಿಡುಗಡೆ ಮಾಡಲಾದ ಅನುದಾನ |
|---|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾತಿ), ಮೂಡಿಗೆರೆ (ಬಿದರಹಳ್ಳಿ), ಚಿಕ್ಕಮಗಳೂರು ಜಿಲ್ಲೆ. | 2225-01-277-0-65 (ಯೋಜನೆ) | 4,08,899/- |
| 2 | ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾತಿ), ಬಿಳಕಲ್ಲಹಳ್ಳಿ, ಬೀರೂರು, ಚಿಕ್ಕಮಗಳೂರು ಜಿಲ್ಲೆ. | | 1,49,837/- |
| 3 | ಏಕಲವ್ಯ ಮಾದರಿ ವಸತಿ ಶಾಲೆ(ಪ.ವರ್ಗ), ತರುವೆ, ಚಿಕ್ಕಮಗಳೂರು ಜಿಲ್ಲೆ. | 2225-02-277-0-37 (ಯೋಜನೆ) | 6,82,255/- |
| 4 | ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾತಿ), ಜೋಡಿಹೋಚಿಹಳ್ಳಿ, ಚಿಕ್ಕಮಗಳೂರು ಜಿಲ್ಲೆ. | 2225-01-277-0-65 (ಯೋಜನೇತರ) | 1,70,029/- |
| | **ಒಟ್ಟು** | | **14,11,020/-** |

2011-12ನೇ ಸಾಲಿನ ಆಹಾರ ಸಾಮಗ್ರಿಗಳು ಮತ್ತು ಇತರೆ ಬಾಬ್ತುಗಳಿಗಾಗಿ ಬಿಡುಗಡೆ ಮಾಡಿದ ಅನುದಾನದಲ್ಲಿ 2010-11ನೇ ಸಾಲಿನ ಬಾಕಿ ಬಿಲ್ಲುಗಳನ್ನು (ಜಿಲ್ಲಾ ಪಂಚಾಯತ್ ವ್ಯಾಪ್ತಿಯ) ಪಾವತಿಸಿರುವುದರಿಂದ 2011-12 ಮತ್ತು 2012-13ನೇ ಸಾಲಿನ ಅನುದಾನದಲ್ಲಿ ಕೊರತೆ ಉಂಟಾಗಿರುತ್ತದೆ.

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ರೂ.14,11,020/-ಗಳ ಅನುದಾನ ಬಿಡುಗಡೆ ಮಾಡಿದ ಕ್ರಮವನ್ನು ಅನುಮೋದಿಸಲು ಕೋರಿದೆ.

**ಸದಸ್ಯ ಕಾರ್ಯದರ್ಶಿ**

**ಅಧ್ಯಕ್ಷರು**

**ತೀರ್ಮಾನ:**

**ಆಡಳಿತ ಮಂಡಳಿಯು ಚಿಕ್ಕಮಗಳೂರು ಜಿಲ್ಲೆಯ ವಸತಿ ಶಾಲೆಗಳು ಜಿಲ್ಲಾ ಪಂಚಾಯತ್ ಅಧೀನದಲ್ಲಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಆಹಾರ ಬಾಬ್ತು ಕೊರತೆಯಾದ ಅನುದಾನಕ್ಕೆ ತದನಂತರದ ವರ್ಷಗಳಲ್ಲಿ ಸಂಘವು ರಾಜ್ಯವಲಯದ ಅನುದಾನದಲ್ಲಿ ನಿರ್ವಹಣೆಗೆ ಬಿಡುಗಡೆ ಮಾಡಿದ ಅನುದಾನವನ್ನು ಬಾಕಿ ಬಿಲ್ಲುಗಳಿಗೆ ಬಳಸಿಕೊಂಡಿರುವುದನ್ನು ತೀವ್ರವಾಗಿ ಆಕ್ಷೇಪಿಸಲಾಯಿತು. ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ವಸತಿ ಶಾಲೆಯ ಪ್ರಾಂಶುಪಾಲರುಗಳು ಶಿಸ್ತು ಕ್ರಮಕ್ಕೆ ಅರ್ಹರಾಗಿರುವುದನ್ನು ಮನಗಾಣಲಾಯಿತು. ಇನ್ನು ಮುಂದೆ ಇಂಥ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದು ಅನುಮೋದನೆ ಪಡೆದು ಅನುದಾನ ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 10**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿಗಳಿಗೆ ಹಾಗೂ ವಸತಿ ಶಾಲೆಯ ಪ್ರಾಂಶುಪಾಲರುಗಳಿಗೆ ಆಡಳಿತಾತ್ಮಕ/ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 608 ಬಿಇಟಿ 2015 ದಿನಾಂಕ:10.12.2015 ರ ಆದೇಶದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಹಲವು ಶಾಖೆಗಳ ಆಡಳಿತಕ್ಕೆ ಸಂಬಂಧಪಟ್ಟಂತೆ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ. ಅಧಿಕಾರ ಪ್ರತ್ಯಾಯೋಜನೆಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಸದರಿ ಅನುಬಂಧದಲ್ಲಿ ಲೆಕ್ಕಪತ್ರ ಶಾಖೆಗೆ ಸಂಬಂಧಿಸಿದ ಪುಟ ಸಂಖ್ಯೆ-11, ಕ್ರ.ಸಂ.9 ರಲ್ಲಿ 'ಬ್ಯಾಂಕ್ ಚೆಕ್‌ಗಳಿಗೆ/ಅಡ್ವೈಸ್‌ಗಳಿಗೆ ಸಹಿ ಮಾಡುವುದು' ಎಂಬ ಅಧಿಕಾರದ ವ್ಯಾಪ್ತಿಯನ್ನು ವಸತಿ ಶಾಲೆ ಕಾಲೇಜುಗಳಿಗೆ ಸಂಬಂಧಿಸಿದಂತೆ ಪ್ರಾಂಶುಪಾಲರಿಗೆ 'ಪೂರ್ಣ ಅಧಿಕಾರ' ಎಂದು ನಮೂದಿಸಲಾಗಿದೆ. ಚೆಕ್‌ಗಳಿಗೆ ಜಂಟಿ ಸಹಿಗಳು ಕಡ್ಡಾಯವಾಗಿರುವುದರಿಂದ ಸದರಿ ಪ್ರತ್ಯಾಯೋಜನೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಬಹುದಾಗಿದೆ.

| **ಅಧಿಕಾರದ ವಿವರ** | **ವಸತಿ ಶಾಲೆ/ಕಾಲೇಜುಗಳು(ಪ್ರಸ್ತುತ)** | | **ವಸತಿ ಶಾಲೆ/ಕಾಲೇಜುಗಳು (ಪರಿಷ್ಕೃತ)** | |
|---|---|---|---|---|
| | **ಅಧಿಕಾರದ ವ್ಯಾಪ್ತಿ** | **ಪ್ರತ್ಯಾಯೋಜಿಸಿದ ಅಧಿಕಾರಿಯ ವಿವರ** | **ಅಧಿಕಾರದ ವ್ಯಾಪ್ತಿ** | **ಪ್ರತ್ಯಾಯೋಜಿಸಿದ ಅಧಿಕಾರಿಯ ವಿವರ** |
| ಬ್ಯಾಂಕ್ ಚೆಕ್‌ಗಳಿಗೆ/ ಅಡ್ವೈಸ್‌ಗಳಿಗೆ ಸಹಿ ಮಾಡುವುದು. | ಪೂರ್ಣ ಅಧಿಕಾರ | ಪ್ರಾಂಶುಪಾಲರು | ಹೊರಗುತ್ತಿಗೆ ಸಿಬ್ಬಂದಿಗೆ ವೇತನ ಪಾವತಿ | ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ಪ್ರಾಂಶುಪಾಲರು |
| | | | ಖಾಯಂ ಸಿಬ್ಬಂದಿ ವೇತನ ಮತ್ತು ಶಾಲಾ ನಿರ್ವಹಣೆ | ಪ್ರಾಂಶುಪಾಲರು ಮತ್ತು ನಿಲಯಪಾಲಕರು |

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ವಸತಿ ಶಾಲೆಗಳ ದೈನಂದಿನ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಈ ಮೇಲಿನ ತಿದ್ದುಪಡಿಯು ಸೂಕ್ತವಾಗಿದೆ ಮತ್ತು ಅವಶ್ಯವಾಗಿದೆ. ಪರಿಷ್ಕೃತ ಸರ್ಕಾರಿ ಆದೇಶವನ್ನು ಹೊರಡಿಸುವ ಬಗ್ಗೆ ವಿಷಯವನ್ನು ಆಡಳಿತ ಮಂಡಳಿಯ ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯದ ಬಗ್ಗೆ ಚರ್ಚಿಸಿ, ಪರಿಷ್ಕೃತ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯನ್ನು ಅನುಮೋದಿಸಿತು ಹಾಗೂ ಸರ್ಕಾರದ ಪರಿಷ್ಕೃತ ತಿದ್ದುಪಡಿ ಆದೇಶ ಪಡೆಯಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ : 10ಎ**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿನದ ವಸತಿ ಶಾಲೆ/ಕಾಲೇಜುಗಳ ಶೈಕ್ಷಣಿಕ ಕಾರ್ಯಕ್ರಮಗಳ ಪ್ರಗತಿ**

1. ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ವಸತಿ ಶಾಲೆಗಳಲ್ಲಿ 2015-16ನೇ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶದ ಬಗ್ಗೆ.

2015-16ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ 461 ವಸತಿ ಶಾಲೆಗಳು ಎಸ್ಎಸ್ಎಲ್‌ಸಿ ಹಂತವನ್ನು ತಲುಪಿದ್ದು, ಮಾರ್ಚ್ 2016 ಮಾಹೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಒಟ್ಟು **19,501** ವಿದ್ಯಾರ್ಥಿಗಳು ಹಾಜರಾಗಿದ್ದು, **18,480** ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ರಾಜ್ಯದ ಪ್ರಸಕ್ತ ಸಾಲಿನ ಒಟ್ಟಾರೆ ಶೇ. ಫಲಿತಾಂಶ 79.16 ಆಗಿದ್ದು, ವಸತಿ ಶಾಲೆಗಳ ಒಟ್ಟು ಶೇಕಡವಾರು ಫಲಿತಾಂಶ 94.76 ಆಗಿರುತ್ತದೆ. ಎಸ್.ಎಸ್.ಎಲ್.ಸಿ ಪರೀಕ್ಷೆ ತೆಗೆದುಕೊಂಡ 461 ವಸತಿ ಶಾಲೆಗಳ ಪೈಕಿ **226** ವಸತಿ ಶಾಲೆಗಳು ಶೇ.100 ರಷ್ಟು ಫಲಿತಾಂಶವನ್ನು ಪಡೆದಿದ್ದು, ಫಲಿತಾಂಶದ ವಿವರಗಳು ಈ ಕೆಳಕಂಡಂತೆ ಇವೆ.

| ಕ್ರ.ಸಂ | ಫಲಿತಾಂಶದ ವಿವರಗಳು | ಫಲಿತಾಂಶದ ಅಂಕಿಅಂಶಗಳು | |
|---|---|---|---|
| | | ಒಟ್ಟು | ಶೇಕಡ ಪ್ರಮಾಣ |
| 1 | ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ- ಒಟ್ಟು ವಸತಿ ಶಾಲೆಗಳ ಸಂಖ್ಯೆ | 461 | —— |
| 2 | **100 ಕ್ಕೆ 100 ರಷ್ಟು ಫಲಿತಾಂಶ ಪಡೆದ ವಸತಿ ಶಾಲೆಗಳ ಸಂಖ್ಯೆ** | **226** | —— |
| 3 | ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ | 19501 | —— |
| 4 | **ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ** | **18480** | **94.76%** |
| 5 | ಗ್ರೇಡ್ ಎ+ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ ( 90 – 100%) | 1724 | 9.33% |
| 6 | ಗ್ರೇಡ್ ಎ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ (80 – 89%) | 5482 | 29.66% |
| 7 | ಗ್ರೇಡ್ ಬಿ+ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ (70 – 79%) | 5684 | 30.75% |
| 8 | ಗ್ರೇಡ್ ಬಿ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ (60 – 69%) | 3815 | 20.64% |
| 9 | **ಮೊದಲನೇ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ಸಂಖ್ಯೆ** | **16705** | **90.40%** |
| 10 | ಗ್ರೇಡ್ ಸಿ+ ದರ್ಜೆಯಲ್ಲಿ/ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ (50% - 59%) | 1570 | 8.49% |
| 11 | ಗ್ರೇಡ್ ಸಿ ದರ್ಜೆಯಲ್ಲಿ/ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ (30-49%) | 205 | 1.10% |
| 12 | ಅನುತ್ತೀರ್ಣರಾದವರು | 1021 | 5.24% |
| 13 | ರಾಜ್ಯದ ಒಟ್ಟಾರೆ ಶೇಕಡವಾರು ಫಲಿತಾಂಶ | —— | 79.16% |

**ಸದಸ್ಯ ಕಾರ್ಯದರ್ಶಿ**

**ಅಧ್ಯಕ್ಷರು**

ಮೇಲ್ಕಂಡಂತೆ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಡೆದ ಫಲಿತಾಂಶದ ವಿವರಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸಿದೆ.

2. ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ 6ನೇ ತರಗತಿಗೆ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆ ನಡೆಸಿ, ಕೌನ್ಸಿಲಿಂಗ್ ಮೂಲಕ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವ ಸಂಬಂಧ ಸಂಘವು ಭರಿಸಿದ ವೆಚ್ಚಕ್ಕೆ ಅನುಮೋದನೆ ನೀಡುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ 6ನೇ ತರಗತಿ ದಾಖಲಾತಿಗಾಗಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಪ್ರವೇಶ ಪರೀಕ್ಷೆಯನ್ನು ದಿನಾಂಕ:06/03/2016 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಏಕಕಾಲದಲ್ಲಿ ನಡೆಸಲಾಗಿದೆ. ಸದರಿ ಪ್ರವೇಶ ಪರೀಕ್ಷೆಗೆ ಒಟ್ಟು **1,54,266** ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದು, ದಿನಾಂಕ:06/03/2016 ರಂದು ನಡೆದ ಪರೀಕ್ಷೆಗೆ ಒಟ್ಟು **1,45,702** ವಿದ್ಯಾರ್ಥಿಗಳು ಹಾಜರಾಗಿರುತ್ತಾರೆ.

2015-16ನೇ ಸಾಲಿನವರೆಗೂ 6ನೇ ತರಗತಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಪ್ರವೇಶ ಪರೀಕ್ಷೆ ನಡೆಸಿ, ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಕಾರ್ಯವನ್ನು ಶಿಕ್ಷಣ ಇಲಾಖೆಯ ಜಿಲ್ಲಾ ತರಬೇತಿ ಕೇಂದ್ರ (DIET) ಗಳಿಗೆ ವಹಿಸಲಾಗುತ್ತಿತ್ತು. 2016-17ನೇ ಸಾಲಿನ ಪ್ರವೇಶ ಪರೀಕ್ಷೆಯ ನಂತರ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿ/ಸಿಬ್ಬಂದಿಗಳು ಮತ್ತು ವಸತಿ ಶಾಲೆಯ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಉಪಯೋಗಿಸಿಕೊಂಡು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಉತ್ತರ ಪತ್ರಿಕೆಗಳನ್ನು ಸಂಘವು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ(ಹಿಂ.ವರ್ಗ)ಯಲ್ಲಿ ಕೇಂದ್ರೀಕೃತ ಮೌಲ್ಯಮಾಪನಾ ಕಾರ್ಯವನ್ನು ಕೈಗೊಳ್ಳುವ ಸಂಬಂಧ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರ ಅನುಮೋದನೆಯನ್ನು ಪಡೆದು ಸದರಿ ಕೇಂದ್ರೀಕೃತ ಮೌಲ್ಯಮಾಪನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ.

ವಿದ್ಯಾರ್ಥಿಗಳ ಮೆರಿಟ್ ಮತ್ತು ಮೀಸಲಾತಿಯನುಸಾರ ಆಯ್ಕೆ ಪಟ್ಟಿಯನ್ನು ಸಂಘದ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. 2016-17ನೇ ಸಾಲಿನ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ದಿನಾಂಕ 23/04/2016 ರಿಂದ ಪ್ರಾರಂಭಿಸಿದ್ದು, ದಿನಾಂಕ:21.05.2016 ರಂದು ಪೂರ್ಣಗೊಂಡಿರುತ್ತದೆ.

ಮೇಲ್ಕಂಡಂತೆ 2016-17 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು 6ನೇ ತರಗತಿಗೆ ಕೌನ್ಸಿಲಿಂಗ್ ಮೂಲಕ ದಾಖಲು ಮಾಡಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ಪ್ರವೇಶ ಪರೀಕ್ಷೆ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ನಡೆಸಿ, ಕೇಂದ್ರೀಕೃತ ಮೌಲ್ಯ ಮಾಪನ ಕಾರ್ಯಕ್ಕೆ ಈ ಕೆಳಕಂಡಂತೆ ಭರಿಸಿದ ವೆಚ್ಚದ ವಿವರಗಳನ್ನು ನೀಡಲಾಗಿದೆ.

| ಕ್ರ.ಸಂ | ಕಾರ್ಯಕ್ರಮ | ಮಾಡಿರುವ ವೆಚ್ಚ |
|---|---|---|
| 1 | ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಮುದ್ರಣ ಮತ್ತು ಜಿಲ್ಲೆಗಳಿಗೆ ಸಾಗಿಸಿದ ಅಂದಾಜು ವೆಚ್ಚ | 522000.00 |
| 2 | ಪ್ರವೇಶ ಪರೀಕ್ಷೆ ವೆಚ್ಚಕ್ಕಾಗಿ ಜಿಲ್ಲಾ ಸಮನ್ವಯಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಜಂಟಿ ಖಾತೆಗಾಗಿ ಬಿಡುಗಡೆ ಮಾಡಿರುವ ವೆಚ್ಚ | 1487500.00 |
| 3 | ಕೇಂದ್ರೀಕೃತ ಮೌಲ್ಯಮಾಪನಕ್ಕಾಗಿ ಮಾಡಲಾಗಿರುವ ವೆಚ್ಚ | 1986482.00 |
| 4 | ಕೌನ್ಸಿಲಿಂಗ್ ವೆಚ್ಚಕ್ಕಾಗಿ ಜಿಲ್ಲಾಸಮನ್ವಯಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಜಂಟಿ ಖಾತೆಗೆ ಮತ್ತು ಕಂಪ್ಯೂಟರ್ ಸಹಾಯಕರಿಗೆ ಬಿಡುಗಡೆ ಮಾಡಿರುವ ವೆಚ್ಚ | 2267030.00 |
| | ಒಟ್ಟು | 6263012.00 |

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, 2016-17 ನೇ ಸಾಲಿನ 6ನೇ ತರಗತಿ ಪ್ರವೇಶ ಪರೀಕ್ಷೆಯ ಪ್ರಕ್ರಿಯೆಗೆ ಭರಿಸಿದ ವೆಚ್ಚ ರೂ. 62.63 **ಲಕ್ಷಗಳಿಗೆ** ಆಡಳಿತ ಮಂಡಳಿಯ ಅನುಮೋದನೆ ಕೋರಿದೆ.

**ತೀರ್ಮಾನ:**

**ಅ) ಆಡಳಿತ ಮಂಡಳಿಯು ವಸತಿ ಶಾಲೆಗಳ 2015-16ನೇ ಸಾಲಿನ ಎಸ್.ಎಸ್.ಎಲ್.ಸಿ.ಫಲಿತಾಂಶ ಶೇ.94.76ನ್ನು ಅವಲೋಕಿಸಿ, ಶ್ಲಾಘಿಸುತ್ತಾ, 2016-17ನೇ ಸಾಲಿನಲ್ಲಿ ವಸತಿ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗುವಂತೆ, ಕ್ರಮವಹಿಸಬೇಕಾಗಿದ್ದು, ಶಿಕ್ಷಣ ಇಲಾಖೆಯಲ್ಲಿ ಜಾರಿಯಲ್ಲಿರುವಂತೆ ಪರಿಹಾರ ಬೋಧನಾ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲು ಅನುಮೋದಿಸಿತು.**

**ಆ) ಆಡಳಿತ ಮಂಡಳಿಯು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ 6ನೇ ತರಗತಿಗೆ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆ ನಡೆಸಿ, ಕೌನ್ಸಿಲಿಂಗ್ ಮೂಲಕ ದಾಖಲು ಮಾಡಿಕೊಳ್ಳುವ ಬಗ್ಗೆ ಸಂಘವು ವಹಿಸಿದ ಕ್ರಮ ಮತ್ತು ಭರಿಸಿದ ವೆಚ್ಚ ರೂ. 62.63 ಲಕ್ಷಗಳಿಗೆ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ: 11**

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಗಳಿಗೆ 8ನೇ ತರಗತಿಯ ವಿದ್ಯಾರ್ಥಿಗಳನ್ನು ಹಾಗೂ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ 7,8ನೇ ತರಗತಿಯ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆ ನಡೆಸುವ ಮೂಲಕ ಆಯ್ಕೆ ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಶಿಕ್ಷಣ ಇಲಾಖೆಯಿಂದ ವರ್ಗಾವಣೆಗೊಂಡ 4 ಪ.ಜಾತಿ/ಪ.ಪಂಗಡದ ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಗಳು ಕಲಬುರಗಿ

**ಸದಸ್ಯ ಕಾರ್ಯದರ್ಶಿ** ಅಧ್ಯಕ್ಷರು

(ಜಗತ), ಮೈಸೂರು(ನಂಜನಗೂಡು), ದಾವಣಗೆರೆ(ಮಾಯಕೊಂಡ) ಮತ್ತು ಬಾಗಲಕೋಟೆಗಳಲ್ಲಿ 8ನೇ ತರಗತಿಯಿಂದ 10ನೇ ತರಗತಿಯವರೆಗೆ ಪ.ಜಾತಿ/ಪ.ವರ್ಗಗಳ ಪ್ರತಿಭಾವಂತ ಬಾಲಕಿಯರಿಗೆ ಗುಣಮಟ್ಟ ಶಿಕ್ಷಣ ನೀಡುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಲ್ಲಿ ಪ್ರತಿ ತರಗತಿಗೆ 50ರಂತೆ ಒಟ್ಟು ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ 150 ಆಗಿರುತ್ತದೆ.

2016-17ನೇ ಸಾಲಿಗೆ ಮೇಲ್ಕಂಡ ವಸತಿ ಶಾಲೆಗಳಿಗೆ ಪ್ರಾರಂಭಿಕ ತರಗತಿಯಾದ 8ನೇ ತರಗತಿಗೆ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಮಾಡಲು ವೇಳಾ ಪಟ್ಟಿಯನ್ನು ಕೆಳಕಂಡಂತೆ ನಿಗಧಿಪಡಿಸಿದೆ.

| | | |
|---|---|---|
| 1 | ಪ್ರವೇಶ ಕೋರಿ ಬರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಪಡೆದು, ಪ್ರವೇಶ ಪರೀಕ್ಷೆ ನಡೆಸುವ ದಿನಾಂಕ | 20/05/2016 |
| 2 | ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಫಲಿತಾಂಶ ಪ್ರಕಟಿಸುವ ದಿನಾಂಕ | 25/05/2016 |
| 3 | ಆಯ್ಕೆಯಾದ ವಿದ್ಯಾರ್ಥಿಗಳನ್ನು ವಸತಿ ಶಾಲೆಗೆ ದಾಖಲು ಮಾಡಿಕೊಳ್ಳುವ ದಿನಾಂಕ | 01/06/2016 |

ಮುಂದುವರೆದು ಮೇಲ್ಕಂಡ ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಗಳ ಜೊತೆಗೆ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ 7 ಮತ್ತು 8ನೇ ತರಗತಿಗಳಿಗೆ ಖಾಲಿ ಇರುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ರಾಜ್ಯಾದ್ಯಂತ ಏಕ ರೀತಿಯ ಜಿಲ್ಲಾ ಮಟ್ಟದ ಪ್ರವೇಶ ಪರೀಕ್ಷೆ ನಡೆಸುವ ಮೂಲಕ ಪ್ರವೇಶ ಪರೀಕ್ಷಾ ಮಾರ್ಗಸೂಚಿ-2016ರಲ್ಲಿ ನಿಗಧಿಪಡಿಸಿರುವ ಮಾನದಂಡಗಳಂತೆ ನಿಯಮಾನುಸಾರ ಅಂಕಗಳ ಆಧಾರದ ಮೇಲೆ ಮತ್ತು ವರ್ಗವಾರು ಮೀಸಲಾತಿಯನ್ವ ಆಯ್ಕೆ ಮಾಡಿಕೊಳ್ಳಬೇಕಾಗಿರುತ್ತದೆ.

ಪ.ಜಾತಿ/ಪ.ಪಂಗಡದ ಪ್ರತಿಭಾನ್ವಿತ ಬಾಲಕಿಯರ 4 ವಸತಿ ಶಾಲೆಗಳಿಗೆ 8ನೇ ತರಗತಿಯ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಮಾಡಲು ಸಂಬಂಧಪಟ್ಟ ಬಾಗಲಕೋಟೆ, ದಾವಣಗೆರೆ, ಮೈಸೂರು ಮತ್ತು ಕಲಬುರಗಿ ಜಿಲ್ಲೆಗಳ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಮತ್ತು ಜಿಲ್ಲಾ ಪ್ರವೇಶ ಪರೀಕ್ಷಾಧಿಕಾರಿಗಳು/ ಜಿಲ್ಲಾ ಸಮನ್ವಯ ಅಧಿಕಾರಿಗಳು ಹಾಗೂ ಸದರಿ ವಸತಿ ಶಾಲಾ ಪ್ರಾಂಶುಪಾಲರುಗಳ ಸಮನ್ವಯದೊಂದಿಗೆ ಜಿಲ್ಲಾ ಮಟ್ಟದಲ್ಲಿಯೇ ಪ್ರವೇಶ ಪರೀಕ್ಷೆಯನ್ನು ನಿಗಧಿಪಡಿಸಿದ ದಿನದಂದು ನಡೆಸಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಕ್ರಮವಹಿಸುವಂತೆ ತಿಳಿಸಿದೆ. ಅಲ್ಲದೇ, ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ 7 ಮತ್ತು 8ನೇ ತರಗತಿಗಳಿಗೆ ಖಾಲಿ ಇರುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ಏಕ ರೀತಿಯ ಜಿಲ್ಲಾ ಮಟ್ಟದ ಪ್ರವೇಶ ಪರೀಕ್ಷೆ ನಡೆಸುವ ಮೂಲಕ ಎಲ್ಲಾ ಪ್ರಕ್ರಿಯೆಯನ್ನು ಶಿಸ್ತುಬದ್ಧವಾಗಿ ಮತ್ತು ಯಾವುದೇ ಲೋಪದೋಷಗಳಿಲ್ಲದಂತೆ ನಿಯಮಾನುಸಾರ ನಿರ್ವಹಿಸಬೇಕೆಂದು ಜಿಲ್ಲಾ ಪ್ರವೇಶ ಪರೀಕ್ಷಾಧಿಕಾರಿಗಳು

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಹಾಗೂ ಜಿಲ್ಲಾ ಸಮನ್ವಯಾಧಿಕಾರಿಗಳಿಗೆ ಸೂಚಿಸಲಾಗಿದೆ. ವಿಷಯವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ತರಲಾಗಿದೆ.

**ತೀರ್ಮಾನ:**

**ಅ) ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 4 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಗಳು 8ನೇ ತರಗತಿಯಿಂದ ಪ್ರಾರಂಭವಾಗಿ 10ನೇ ತರಗತಿಯವರೆಗೆ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿ, 8ನೇ ತರಗತಿಗಳಿಗೆ ಪ್ರವೇಶ ಪರೀಕ್ಷೆ ಮೂಲಕ ಆಯ್ಕೆಮಾಡಿಕೊಳ್ಳುವ ಕ್ರಮವನ್ನು ಅನುಮೋದಿಸಿತು.**

**ಆ) ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ 7 ಮತ್ತು 8ನೇ ತರಗತಿಗೆ ಖಾಲಿ ಉಳಿಯುವ ಸೀಟುಗಳಿಗೂ ಸಹ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆ ನಡೆಸುವ ಮೂಲಕ ದಾಖಲು ಮಾಡಿಕೊಳ್ಳಲು ಅನುಮೋದಿಸಿತು. ಈ ವಸತಿ ಶಾಲೆಗಳು ಆಂಗ್ಲ ಮಾಧ್ಯಮದ ವಸತಿ ಶಾಲೆಗಳಾಗಿದ್ದು, 7 ಮತ್ತು 8ನೇ ತರಗತಿಗೆ ದಾಖಲು ಮಾಡಿಕೊಳ್ಳುವ ಮುನ್ನಾ ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡುವಂತೆ ಮತ್ತು ಕನ್ನಡ ಮಾಧ್ಯಮ ವಿದ್ಯಾರ್ಥಿಗಳು ದಾಖಲು ಬಯಸಿದಲ್ಲಿ ಅಂಥ ವಿದ್ಯಾರ್ಥಿಗಳಿಗೆ ಆಂಗ್ಲ ಬಾಷೆಯನ್ನು ಪರಿಶೀಲಿಸಿ, ದಾಖಲು ಮಾಡಿಕೊಳ್ಳಲು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ : 12**

**ಮಾನ್ಯ ಉಚ್ಛನ್ಯಾಯಾಲಯದ ಆದೇಶದನ್ವಯ ಆಯ್ಕೆಗೆ ಅನರ್ಹರಾಗಿ ವಸತಿ ಶಾಲೆಗಳಲ್ಲಿ ಮುಂದುವರಿದ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವ ಬಗ್ಗೆ.**

2012-13ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನ ಅಧೀನದ ವಸತಿ ಶಾಲೆಗಳಿಗೆ ಬೋಧಕ/ಬೋಧಕೇತರ ಹುದ್ದೆಗಳನ್ನು ಖಾಯಂ ಆಗಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ (Combined Competitive Examinations) ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲು ದಿನಾಂಕ:27-04-2011 ರಂದು ನೇಮಕಾತಿ ಅಧಿಸೂಚನೆ ಹೊರಡಿಸಿದ್ದು, ಸದರಿ ಸ್ಪರ್ಧಾತ್ಮಕ ಪರೀಕೆಗೆ ಹಾಜರಾದ ಹೊರಸಂಪನ್ಮೂಲ ಏಜೆನ್ಸಿವತಿಯಿಂದ ನೇಮಕಗೊಂಡು ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸಿದ್ದ ಪ್ರಾಂಶುಪಾಲರು ಹಾಗೂ ಸಹ ಶಿಕ್ಷಕರುಗಳು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: W.P.No.20204-20364/2011 ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ನೀಡಿದ ಆದೇಶದ ಕಂಡಿಕೆ (v) ರಲ್ಲಿ **"The respondents to complete the selection process pursuant to the recruitment notification dated 27.04.2011 by granting the benefit of service weightage to the petitioners and all other similarly situated Principals and teachers.** ಎಂದು ತೀರ್ಪು ನೀಡಿರುತ್ತದೆ. ಅದಲ್ಲದೆ, ಕಂಡಿಕೆ (vii) ರಲ್ಲಿ **"Till the completion of selection process as stated above the present placement of petitioners and others who are continuing in service shall not be disturbed."** ಎಂದು ಆದೇಶವಾಗಿರುತ್ತದೆ.

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ಈಗ ಮಾನ್ಯ ಉಚ್ಛನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಸಲಾಗಿದ್ದು; ಮಾನ್ಯ ಉಚ್ಛನ್ಯಾಯಾಲಯದ ಆದೇಶದನ್ವಯ ಸೇವಾ ಕೃಪಾಂಕ ನೀಡಿ, ಆಯ್ಕೆಗೆ ಅರ್ಹರಾದ 409 ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ: 19-10-2015 ರಂದು ಹೊರಡಿಸಲಾಗಿದೆ.

ವಾಸ್ತವವಾಗಿ, ಜೂನ್ ಮಾಹೆಯಿಂದ ಏಪ್ರಿಲ್ ಮಾಹೆಯವರೆಗಿನ ಅವಧಿಯನ್ನು ಮಾತ್ರ ಶೈಕ್ಷಣಿಕ ವರ್ಷವೆಂದು ಪರಿಗಣಿಸಲ್ಪಡುತ್ತಿದ್ದರೂ ಜುಲೈ ಮಾಹೆಯಿಂದ ಮಾರ್ಚ್ ಮಾಹೆಯವರೆಗಿನ ಅವದಿಯನ್ನೂ ಶೈಕ್ಷಣಿಕ ವರ್ಷವೆಂದು ಪರಿಗಣಿಸಿ, ಈ ಅವಧಿಯಲ್ಲಿ ಹೊರಸಂಪನ್ಮೂಲ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಅಭ್ಯರ್ಥಿಗಳನ್ನೂ ಕೂಡಾ ಆಯ್ಕೆಗೆ ಪರಿಗಣಿಸಬೇಕೆಂದು, ಹಲವು ಶಾಸಕರುಗಳು ಕೋರಿದ್ದರಿಂದ ಈ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 28-10-2015 ರಂದು ನಡೆದ ಸಭೆಯಲ್ಲಿ ಹಾಜರಿದ್ದ, ಶಿಕ್ಷಕರ ಕ್ಷೇತ್ರದ ಪ್ರತಿನಿಧಿಗಳು/ವಿಧಾನ ಪರಿಷತ್ ಸದಸ್ಯರುಗಳು ಜುಲೈದಿಂದ ಮಾರ್ಚ್‌ವರೆಗಿನ ಅವಧಿಯನ್ನು ಕೃಪಾಂಕ ನೀಡುವ ಉದ್ದೇಶಕ್ಕಾಗಿ ಪೂರ್ಣ ಶೈಕ್ಷಣಿಕ ವರ್ಷ ಎಂದು ಪರಿಗಣಿಸಬೇಕೆಂದು ಬೇಡಿಕೆ ಸಲ್ಲಿಸಿದ್ದರಿಂದ ಅವರ ವಿನಂತಿಯ ಮೇರೆಗೆ ದಿನಾಂಕ:04-08-2015 ರಂದು ನಡೆದ ಸಂಘದ 63ನೇ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಜೂನ್/ಜುಲೈ ಮಾಹೆಯಿಂದ ಮಾರ್ಚ್/ಏಪ್ರಿಲ್‌ವರೆಗಿನ ಅವಧಿಯನ್ನು ಒಂದು ಪೂರ್ಣ ಶೈಕ್ಷಣಿಕ ವರ್ಷವೆಂದು ಪರಿಗಣಿಸಿ, ಈ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಅರ್ಹ ಹೊರಸಂಪನ್ಮೂಲ ಶಿಕ್ಷಕರಿಗೆ ಸೇವಾ ಕೃಪಾಂಕ ನೀಡಬೇಕೆಂದು ತೀರ್ಮಾನಿಸಲಾಯಿತು. ಹೀಗೆ, ಜುಲೈ ಮಾಹೆಯಿಂದ ಮಾರ್ಚ್ ಮಾಹೆಯವರೆಗಿನ ಅವಧಿಯಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿಗಳು 260 ಜನ ಇರುವುದು ತಿಳಿದು ಬಂದಿದ್ದರಿಂದ ಅವರ ದಾಖಲೆಗಳನ್ನು ಪರಿಶೀಲಿಸಿ, ಆಯ್ಕೆಗೆ ಅರ್ಹರಾದ 172 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ದಿನಾಂಕ:08-02-2016 ರಂದು ಪ್ರಕಟಿಸಲಾಗಿದೆ.

ಮೇಲ್ಕಾಣಿಸಿದಂತೆ, ದಿನಾಂಕ:19-10-2015 ರಂದು 409 ಅಭ್ಯರ್ಥಿಗಳು ಹಾಗೂ ದಿನಾಂಕ:08-02-2016 ರಂದು 172 ಅಭ್ಯರ್ಥಿಗಳು ಹೀಗೆ ಆಯ್ಕೆಗೆ ಅರ್ಹರಾದ ಒಟ್ಟು 581 ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ. ಅದರಲ್ಲಿ ದಾಖಲಾತಿಗಳು ನೈಜವಲ್ಲವೆಂದು ಕಂಡುಬಂದ ಅಭ್ಯರ್ಥಿಗಳಿಗೆ ಸೂಕ್ತ ಹಿಂಬರಹ ನೀಡಲಾಗಿದೆ. ಈ ಪೈಕಿ ಜಾತಿ ಸಿಂಧುತ್ವ ಪ್ರಮಾಣ ಪತ್ರ, ಪೋಲೀಸ್ ಪರಿಶೀಲನಾ ವರದಿ, ಮತ್ತು ವೈಧ್ಯಕೀಯ ಪ್ರಮಾಣ ಪತ್ರಗಳು ಸ್ವೀಕೃತವಾಗಿರುವ 364 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿ ಸ್ಥಳ ನಿಯುಕ್ತಿಗೊಳಸಲಾಗಿದೆ. ಇದಲ್ಲದೇ, ಗಣಿತ ವಿಷಯದ 7 ಅಭ್ಯರ್ಥಿಗಳು ಹಾಗೂ ಹಿಂದಿ ವಿಷಯದ 7 ಅಭ್ಯರ್ಥಿಗಳಿಗೆ ಸ್ಥಳ ಖಾಲಿ ಇಲ್ಲದೇ ಇರುವುದಿರಂದ ದಾಖಲಾತಿಗಳು ಸ್ವೀಕೃತವಾಗಿದ್ದರೂ ಸಹ ಸ್ಥಳ ನಿಯುಕ್ತಿ ಆದೇಶ ನೀಡಲು ಸಾಧ್ಯವಾಗಿರುವುದಿಲ್ಲ.

ಮೇಲ್ಕಂಡಂತೆ ಆಯ್ಕೆಗೊಂಡ 581 ಅಭ್ಯರ್ಥಿಗಳ ಪೈಕಿ 364 ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶ ನೀಡಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ. ಇನ್ನೂ 190 ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿಗೊಳಸಲು

**ಸದಸ್ಯ ಕಾರ್ಯದರ್ಶಿ** ಅಧ್ಯಕ್ಷರು

ಹುದ್ದೆಗಳು ಖಾಲಿ ಇರುವುದಿಲ್ಲ. ಏಕೆಂದರೆ, ಸದರಿ ಹುದ್ದೆಗಳಲ್ಲಿ ಆಯ್ಕೆಗೆ ಅನರ್ಹರಾದ ಹೊರಸಂಪನ್ಮೂಲ ಪ್ರಾಂಶುಪಾಲರು/ಶಿಕ್ಷಕರುಗಳು ಮುಂದುವರಿದಿರುತ್ತಾರೆ. ಇಂಥ ಅನರ್ಹ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಸೇವೆಯಿಂದ ಬಿಡುಗಡೆಗೊಳಸದೇ ಮೇಲ್ಕಾಣಿಸಿದ 190 ಆಯ್ಕೆಗೆ ಅರ್ಹರಾದ ಅಭ್ಯರ್ಥಿಗಳಿಗೆ ಸ್ಥಳನಿಯುಕ್ತಿಗೊಳಿಸುವುದು ಸಾಧ್ಯವಿರುವುದಿಲ್ಲ.

ಏತನ್ಮಧ್ಯೆ ತಮ್ಮನ್ನು ಸೇವೆಯಿಂದ ಬಿಡುಗಡೆಗೊಳಸಬಾರದೆಂದು ಮಾನ್ಯ ಉಚ್ಛನ್ಯಾಯಾಲಯದ ಮೊರೆ ಹೋಗಿ 69 ಆಭ್ಯರ್ಥಿಗಳು ಮಧ್ಯಂತರ ತಡೆಯಾಜ್ಞೆ ಆದೇಶ ಪಡೆದಿದ್ದು, ಸದರಿ ಅಭ್ಯರ್ಥಿಗಳನ್ನು ಹೊರತುಪಡಿಸಿ, ಆಯ್ಕೆಗೆ ಅನರ್ಹರಾದ ಹೊರಸಂಪನ್ಮೂಲ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸುವುದು ಅಗತ್ಯವಾಗಿದೆ. ಈ ಬಗ್ಗೆ ಸಂಘದ ವಕೀಲರು ಹಾಗೂ ಕಾನೂನು ಸಲಹೆಗಾರರು ದಿನಾಂಕ:15-02-2016 ರಂದು ಆಯ್ಕೆಗೆ ಅನರ್ಹರಾದ ಹೊರಸಂಪನ್ಮೂಲ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಬಿಡುಗಡೆಗೊಳಸಬಹುದಾಗಿದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

ಮಾನ್ಯ ಉಚ್ಛನ್ಯಾಯಾಲಯದ ಆದೇಶದನ್ವಯ ಹೊರಸಂಪನ್ಮೂಲ ಪ್ರಾಂಶುಪಾಲರು/ಶಿಕ್ಷಕರುಗಳನ್ನು ಅನಿವಾರ್ಯವಾಗಿ ಮುಂದುವರಿಸಬೇಕಾಗಿ ಬಂದಿದ್ದರಿಂದ ಅವರಿಗೆ ಸ್ಥಳಾವಕಾಶ ಕಲ್ಪಿಸಲು ನೇರ ನೇಮಕಾತಿ ಹೊಂದಿದ ಖಾಯಂ ಪ್ರಾಂಶುಪಾಲರು/ಶಿಕ್ಷಕರುಗಳನ್ನು ಒತ್ತಾಯಪೂರ್ವಕವಾಗಿ, ಬೇರೆ ಸ್ಥಳಗಳಿಗೆ ಮರುವಿನ್ಯಾಸಗೊಳಿಸಿ ಆದೇಶಿಸಲಾಗಿದೆ. ಹೀಗೆ ಮರುವಿನ್ಯಾಸಗೊಂಡ ಪ್ರಾಂಶುಪಾಲರು/ಶಿಕ್ಷಕರುಗಳು ಅವರುಗಳ ಮೂಲ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಸಲು ಮನವಿ ಸಲ್ಲಿಸಿ ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ಆಯ್ಕೆಗೆ ಅನರ್ಹರಾಗಿ ಸೇವೆಯಲ್ಲಿ ಮುಂದುವರೆದ ಹೊರಸಂಪನ್ಮೂಲ ಶಿಕ್ಷಕರುಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡದೇ ಮರು ವಿನ್ಯಾಸಗೊಂಡ ಶಿಕ್ಷಕರುಗಳಿಗೆ ನ್ಯಾಯ ಒದಗಿಸಲು ಸಾಧ್ಯವಿರುವುದಿಲ್ಲ. ಆಯ್ಕೆಗೆ ಅನರ್ಹರಾದ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಸದೇ ಇದ್ದಲ್ಲಿ ಈಗಾಗಲೇ ತಮ್ಮನ್ನು ಸೇವೆಯಿಂದ ಬಿಡುಗಡೆಗೊಳಸಬಾರದೆಂದು ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದಿಂದ ಮಧ್ಯಂತರ ತಡೆಯಾಜ್ಞೆ ತಂದಿರುವ 69 ಅಭ್ಯರ್ಥಿಗಳಂತೆಯೇ ಇನ್ನುಳಿದ ಹೊರಸಂಪನ್ಮೂಲ ಸಿಬ್ಬಂದಿಗಳೂ ಕೂಡಾ ಸೇವೆಯಿಂದ ಬಿಡುಗಡೆಗೊಳಸದಂತೆ, ಮಾನ್ಯ ನ್ಯಾಯಾಲಯದ ಮೊರೆ ಹೋಗುವ ಸಂಭವವಿರುತ್ತದೆ. ಆದಾಗ್ಯೂ, ಸಂಘವು ಮಾನ್ಯ ನ್ಯಾಯಾಲಯದಿಂದ ಸ್ವೀಕೃತವಾಗುತ್ತಿರುವ ಮಧ್ಯಂತರ ತಡೆಯಾಜ್ಞೆಗಳನ್ನು ತೆರವುಗೊಳಸಲು ಸಂಘದ ವಕೀಲರಿಂದ ವಕಾಲತ್ತನ್ನು ಸಲ್ಲಿಸಿ, ಕಂಡಿಕೆವಾರು ಉತ್ತರಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಿ, ಕ್ರಮವಹಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಸತಿ ಶಾಲೆಗಳಲ್ಲಿ ಸೇವೆಯಲ್ಲಿ ಮುಂದುವರಿಯುತ್ತಿರುವ ಅನರ್ಹ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಸುವುದು ಅತ್ಯಾವಶ್ಯಕವಾಗಿರುತ್ತದೆ.

ಈಗಾಗಲೇ ದಿನಾಂಕ:13-04-2016ರಂದು ಕಳೆದ ಶೈಕ್ಷಣಿಕ ವರ್ಷ ಮುಕ್ತಾಯವಾಗಿ ಪ್ರಸಕ್ತ ಶೈಕ್ಷಣಿಕ ವರ್ಷ ಪ್ರಾರಂಭವಾಗಿದ್ದು, ದಿನಾಂಕ:29-05-2016ರಂದು ವಸತಿ ಶಾಲೆಗಳು ಪ್ರಾರಂಭವಾಗಬೇಕಾಗಿದೆ.

**ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು**

ಆದ್ದರಿಂದ ಆಯ್ಕೆಗೆ ಅನರ್ಹರಾದ ಎಲ್ಲಾ ಬೋಧಕ/ಬೋದಕೇತರ ಸಿಬ್ಬಂದಿಗಳನ್ನು ತಕ್ಷಣವೇ ಬಿಡುಗಡೆ ಮಾಡಲು ಆಯಾ ವಸತಿ ಶಾಲೆಗಳ ಪ್ರಾಂಶುಪಾಲರು ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಅಧಿಕಾರಿಗಳು., ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, /ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು/ಯೋಜನಾ ಸಮನ್ವಯ ಅಧಿಕಾರಿಗಳು, ಸಮಗ್ರ ಗಿರಿಜನ ಅಭಿವೃಧ್ಧಿ ಯೋಜನೆ ಇವರುಗಳಿಗೆ ನಿರ್ದೇಶನ ನೀಡಿ, ಆಯ್ಕೆಗೆ ಅನರ್ಹರಾದ ಎಲ್ಲಾ ಅಭ್ಯರ್ಥಿಗಳನ್ನು ಸೇವೆಯಿಂದ ಬಿಡುಗಡೆಗೊಳಿಸಲು ಸಂಬಂಧಪಟ್ಟ ಹೊರಸಂಪನ್ಮೂಲ ಏಜೆನ್ಸಿಗೆ ಸೂಚನೆ ನೀಡುವಂತೆ, ನಿರ್ದೇಶನ ನೀಡಬಹುದಾಗಿದೆ.

ಆದ್ದರಿಂದ ಮೇಲ್ಕಾಣಿಸಿದ ಎಲ್ಲಾ ಅಂಶಗಳನ್ನು ಪರಿಗಣಿಸಿ, ಮಾನ್ಯ ನ್ಯಾಯಾಲಯದ ಆದೇಶದನ್ವಯ ಸಂಘವು ಈಗಾಗಲೇ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವುದರಿಂದ ಪುನ: ಮಾನ್ಯ ಉಚ್ಛನ್ಯಾಯಾಲಯದ ಮೊರೆ ಹೋಗಿ ಸೇವೆಯಿಂದ ಬಿಡುಗಡೆಗೊಳಸಬಾರದೆಂದು ಮಧ್ಯಂತರ ತಡೆಯಾಜ್ಞೆ ಆದೇಶ ಪಡೆದಿರುವ 69 ಅಭ್ಯರ್ಥಿಗಳನ್ನು ಹೊರತುಪಡಿಸಿ, ಆಯ್ಕೆಗೆ ಅನರ್ಹರಾಗಿ ವಸತಿ ಶಾಲೆಗಳಲ್ಲಿ ಕರ್ತವ್ಯದಲ್ಲಿ ಮುಂದುವರಿಯುತ್ತಿರುವ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವ ಬಗ್ಗೆ ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, ತೀರ್ಮಾನ ಕೋರಿದೆ.

**<u>ತೀರ್ಮಾನ:</u>**

**ಆಡಳಿತ ಮಂಡಳಿಯು ವಿಷಯವನ್ನು ದೀರ್ಘವಾಗಿ ಚರ್ಚಿಸಿ, ಮಾನ್ಯ ಉಚ್ಛನ್ಯಾಯಾಲಯದ ಆದೇಶದನ್ವಯ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿರುವುದನ್ನು ಗಮನಿಸಿತು. ಆಯ್ಕೆಗೆ ಅರ್ಹರಾದ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿ ಆದೇಶ ನೀಡುವ ಪ್ರಕ್ರಿಯೆಯನ್ನು ಸಭೆಯು ಅವಲೋಕಿಸಿತ್ತಾ, ಆಯ್ಕೆಗೆ ಅನರ್ಹರಾಗಿ ವಸತಿ ಶಾಲೆಗಳಲ್ಲಿ ಮುಂದುವರಿದ ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವ ಬಗೆಗಿನ ಕಾನೂನು ಅಭಿಪ್ರಾಯವನ್ನು ಸಭೆಯು ಪರಿಶೀಲಿಸಿತು. ಆಯ್ಕೆಗೆ ಅನರ್ಹರಾದ ಹೊರಸಂಪನ್ಮೂಲ ಬೋಧಕ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಲು ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸಭೆಯು ನಿರ್ದೇಶನ ನೀಡಿತು.**

**<u>ವಿಷಯ ಸಂಖ್ಯೆ: 13</u>**

**<u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅವರುಗಳು ಸೇವೆಗೆ ಸೇರಿದ ದಿನಾಂಕದಿಂದ ಜಾರಿಗೊಳಿಸುವ ಬಗ್ಗೆ.</u>**

ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: FD/SPL/2009PEN 2002,Dt:21-02-2015 ರಲ್ಲಿ ವಿಶ್ವ ವಿದ್ಯಾಲಯ, ಸರ್ಕಾರದ ನಿಗಮ ಮಂಡಳಿ ಮತ್ತು ಸಂಘ ಸಂಸ್ಥೆಗಳ ಖಾಯಂ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ಹಾಗೂ ಹಳೆ ಪಿಂಚಣಿ ಯೋಜನೆಯನ್ನು ಕೈಬಿಡಲು ತಿಳಿಸಿದೆ. ಈ ಹಿನ್ನೆಲೆಯಲ್ಲಿ ದಿನಾಂಕ:04-08-2015 ರಂದು ನಡೆದ ಸಂಘದ 63ನೇ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ಯೋಜನೆಯನ್ನು ಅಳವಡಿಸಿಕೊಳ್ಳುವ ಬಗ್ಗೆ ಸಚಿವ ಸಂಪುಟದ ಅನುಮೋದನೆಯೊಂದಿಗೆ ಸರ್ಕಾರವು ತನ್ನ ಆದೇಶ ಸಂಖ್ಯೆ: ಆಸಿಡಬ್ಲ್ಯೂ 579 ಆಇಆ 2015, ದಿನಾಂಕ:31-12-2015 ರಲ್ಲಿ ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ಆದೇಶಿಸಿದೆ.

ಮೇಲ್ಕಂಡ ಸರ್ಕಾರದ ಆದೇಶದನ್ವಯ ನೂತನ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸಲು ದಿನಾಂಕ:19-01-2015 ರಂದು ನಡೆದ ಸಂಘದ 65ನೇ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ, ಸಂಘದ ವೃಂದ ಮತ್ತು ನೇಮಕಾತಿ ನಿನಿಯಮಗಳಲ್ಲಿ ಸರ್ಕಾರವು ಈ ಹಿಂದೆ ವಿಧಿಸಿದ್ದ ನೌಕರರ ಭವಿಷ್ಯ ನಿಧಿ ಮತ್ತು ಸಾಮೂಹಿಕ ಉಪಧನಗಳ ಬದಲಾಗಿ ನೂತನ ಪಿಂಚಣಿ ಯೋಜನೆಯ ಸವಲತ್ತನ್ನು ಸೇರ್ಪಡೆ ಮಾಡಿ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011 ಕ್ಕೆ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಆಸಿಡಬ್ಲ್ಯೂ 579 ಆಇಆ 2015, ದಿನಾಂಕ:23-03-2016 ರನ್ನು ಪಡೆಯಲಾಗಿದೆ.

ಮೇಲ್ಕಂಡ ಸರ್ಕಾರದ ಆದೇಶದಲ್ಲಿ ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಯಾವ ದಿನಾಂಕದಿಂದ ಜಾರಿಗೊಳಿಸಬೇಕು ಎಂಬುದರ ಬಗ್ಗೆ ತಿಳಿಸಿರುವುದಿಲ್ಲ. ಆದರೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಬೋಧಕ/ಬೋಧಕೇತರ ಸಿಬ್ಬಂದಿಗಳು ಅಕ್ಟೋಬರ್ 2011 ರಿಂದ ಖಾಯಂ ಆಗಿ ನೇಮಕಗೊಂಡವರಾಗಿದ್ದು, ಪ್ರಸ್ತುತ 3651 ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ ಆಯ್ಕೆಗೆ ಅರ್ಹರಾದ 581 ಭೋಧಕ ಸಿಬ್ಬಂದಿಗಳ ಪೈಕಿ 364 ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶ ನೀಡಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಸಂಘದ 3651 ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ರಾಜ್ಯ ನೂತನ ಪಿಂಚಣಿ ಯೋಜನೆ ಅನುಷ್ಠಾನ ಘಟಕ(NPS Cell)ದ ಉಪ ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ದೊಡ್ಡ ಗೋಪುರ, ಬೆಂಗಳೂರು ಇವರನ್ನು ಸಂಪರ್ಕಿಸಲಾಗಿ, ಈ ಸಂಬಂಧ ಸಂಘವು Pension Fund and Regulatory Development Authority(PFRDA) , New Delhi ಇಲ್ಲಿಗೆ ನೊಂದಣಿ ಮಾಡಿಸಲು ಹಾಗೂ ಖಾಯಂ ಸಿಬ್ಬಂದಿಗಳಿಗೆ ಯಾವ ದಿನಾಂಕದಿಂದ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕೆಂಬುದರ ಬಗ್ಗೆ ಒಪ್ಪಿಗೆ ಪತ್ರವನ್ನು (Letter of Consent) ನೀಡುವುದರ ಜೊತೆಗೆ ಎಲ್ಲಾ ವಸತಿ ಶಾಲೆಗಳ ಪ್ರಾಂಶುಪಾಲರುಗಳಿಂದ District Treasury Office /Drawing and Disbursing office (DTO/DDO) Registration Form ಗಳನ್ನು ಭರ್ತಿ ಮಾಡಿ, ನೊಂದಣಿಗೆ ಕ್ರಮವಹಿಸಲು ತಿಳಿಸಿರುತ್ತಾರೆ. ಆದರೆ, ಸರ್ಕಾರವು ದಿನಾಂಕ:31-12-2015 ರಂದು ನೂತನ ಪಿಂಚಣಿ ಯೋಜನೆ ಅಳವಡಿಸಿಕೊಳ್ಳುವ ಬಗ್ಗೆ ಆದೇಶಿಸಿರುವುದರಿಂದ ಸಂಘದ ಖಾಯಂ ಸಿಬ್ಬಂದಿಗಳಿಗೆ ದಿನಾಂಕ:01-01-2016ರಿಂದ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಮಾನ್ಯ

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು, ಇವರ ಅನುಮೋದನೆಯೊಂದಿಗೆ ಕ್ರಮವಹಿಸಲಾಗುತ್ತಿದೆ.

ಏತನ್ಮಧ್ಯೆ ವಸತಿ ಶಾಲೆಗಳ ಸಿಬ್ಬಂದಿಗಳು ಅವರುಗಳು ಸೇವೆಗೆ ಸೇರಿದ ಅವಧಿಯಿಂದ ನೂತನ ಪಿಂಚಣಿಯೋಜನೆಯನ್ನು ಜಾರಿಗೊಳಸಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸುತ್ತಿದ್ದಾರೆ.

ಈ ಸಿಬ್ಬಂದಿಗಳಿಗೆ ಅವರುಗಳ ಕೋರಿಕೆಯಂತೆ ನೂತನ ಪಿಂಚಣಿ ಯೋಜನೆಯನ್ನು ಅವರುಗಳು ಸೇವೆಗೆ ಸೇರಿದ ದಿನಾಂಕದಿಂದ ಜಾರಿಗೊಳಿಸಿದಲ್ಲಿ ಸಂಘದ ವಂತಿಗೆಯ ಮೇಲೆ ಶೇ.8 ರಷ್ಟು ಬಡ್ಡಿ ಸೇರಿಸಿದರೆ ಸಂಘವು ಹೆಚ್ಚುವರಿಯಾಗಿ ಸುಮಾರು ರೂ. 3485.80 ಲಕ್ಷಗಳ ವೆಚ್ಚ ಭರಿಸಬೇಕಾಗುತ್ತದೆ. ನೂತನ ಪಿಂಚಣಿ ನಿಯಮದಂತೆ ಸಿಬ್ಬಂದಿಗಳು ಸಹ ಇದೇ ಅನುಪಾತದಲ್ಲಿ ವಂತಿಗೆಯನ್ನು ಪಾವತಿಸಬೇಕಾಗಿರುತ್ತದೆ. ನೌಕರರ ವಂತಿಗೆಯನ್ನು ಸೂಕ್ತ ಸಮಕಂತುಗಳಲ್ಲಿ ಕಟಾಯಿಸಬೇಕಾಗಿರುತ್ತದೆ. ಸದರಿ ವೆಚ್ಚವನ್ನು ಪ.ಜಾತಿ, ಪ.ವರ್ಗ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿರ್ವಹಣಾ ಲೆಕ್ಕಶೀರ್ಷಿಕೆಗಳಡಿ ಲಭ್ಯವಿರುವ ಅನುದಾನದಿಂದ ಭರಿಸಬಹುದಾಗಿರುತ್ತದೆ.

ವಿಷಯವನ್ನು ಸಭೆಯ ಮುಂದೆ ಮಂಡಿಸಿ, ಈ ಕೆಳಕಂಡ ಅಂಶಗಳಿಗೆ ಸೂಕ್ತ ತೀರ್ಮಾನ ಕೋರಿದೆ.

1. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅವರುಗಳು ಸೇವೆಗೆ ಸೇರಿದ ದಿನಾಂಕದಿಂದ ಜಾರಿಗೊಳಸುವ ಬಗ್ಗೆ
2. ನೂತನ ಪಿಂಚಣಿ ಯೋಜನೆಯನ್ನು ಅವರುಗಳು ಸೇವೆಗೆ ಸೇರಿದ ದಿನಾಂಕದಿಂದ ಜಾರಿಗೊಳಸಿದಲ್ಲಿ ಸಂಘದ ವಂತಿಗೆಯ ಮೇಲೆ ಶೇ.8 ರಷ್ಟು ಬಡ್ಡಿ ಸೇರಿಸಿದರೆ ಸಂಘವು ಹೆಚ್ಚುವರಿಯಾಗಿ ಭರಿಸಬೇಕಾದ ರೂ. 3450.61 ಲಕ್ಷಗಳ ವೆಚ್ಚವನ್ನು ಪ..ಜಾತಿ, ಪ.ವರ್ಗ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿರ್ವಹಣಾ ಲೆಕ್ಕಶೀರ್ಷಿಕೆಗಳಡಿ ಲಭ್ಯವಿರುವ ಅನುದಾನದಿಂದ ಭರಿಸುವ ಬಗ್ಗೆ.

**ತೀರ್ಮಾನ:**

**ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಖಾಯಂ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆಯನ್ನು ಅಳವಡಿಸಿಕೊಳ್ಳಲು ಸರ್ಕಾರ ಹೊರಡಿಸಿರುವ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 579 ಬಿಇಟಿ 2015, ದಿನಾಂಕ:31-12-2015ನ್ನು ಪರಿಶೀಲಿಸಿತು. ಈ ಬಗ್ಗೆ ದೀರ್ಘವಾಗಿ ಚರ್ಚಿಸಿ, ಅಂತಿಮವಾಗಿ ದಿನಾಂಕ:01-01-2016ರಿಂದ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಸುವ ಬಗ್ಗೆ ಕ್ರಮವಹಿಸಲು ತೀರ್ಮಾನಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವಿಷಯ ಸಂಖ್ಯೆ : 14

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲಾ ಮಟ್ಟದ ಕಛೇರಿಯನ್ನು ಸೃಜಿಸಿ, ಅಗತ್ಯ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 532 ಎಸ್ಇಡಬ್ಲ್ಯೂ 96, ದಿನಾಂಕ:06-10-1999ರಲ್ಲಿ ಮಂಜೂರು ಮಾಡಿ ಮಾಡಿ ಆದೇಶಿಸಿದೆ. ಸಂಘವು ದಿನಾಂಕ: 02-02-2000 ದಿಂದ ಕಾರ್ಯಾರಂಭ ಮಾಡಿದೆ. ಪ್ರಸ್ತುತ 505 ವಸತಿ ಶಾಲೆ/ಕಾಲೇಜುಗಳು ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಜವಾಬ್ದಾರಿಯೊಂದಿಗೆ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಕಾಲಕಾಲಕ್ಕೆ ನೀಡಬೇಕಾದ ಸವಲತ್ತುಗಳ ವಿಸ್ತರಣೆ, ವಿದ್ಯಾರ್ಥಿ ಮತ್ತು ಬೋದಕ ಸಿಬ್ಬಂದಿಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಬೋಧನೆ ನೀಡುವ ಉದ್ದೇಶದಿಂದ ಕಾರ್ಯಗಾರ/ತರಬೇತಿಗಳನ್ನು ನೀಡುವುದು, ವಸತಿ ಶಾಲೆಗಳಿಗೆ ಶಾಲಾ ಸಂಕೀರ್ಣ ನಿರ್ಮಾಣ ಮಾಡುವುದು ಮತ್ತು ಅದರ ಉಸ್ತುವಾರಿಗಳನ್ನು ಮಾಡುವುದು ಮತ್ತು ಸಕಾರಾತ್ಮಕ ನಿರ್ವಹಣೆ ಮಾಡುವ ಉದ್ದೇಶಗಳಿಂದ ಸ್ಥಾಪಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಪ್ರಸ್ತುತ ಈ ವಸತಿ ಶಾಲೆಗಳ ನಿರ್ವಹಣೆಯ ಮೇಲ್ವಿಚಾರಣೆ ಮತ್ತು ಉಸ್ತವಾರಿ ಕಾರ್ಯವನ್ನು ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದು, ಸದರಿ ಅಧಿಕಾರಿಗಳು ತಮಗೆ ಸಂಬಂಧಪಟ್ಟ ಇಲಾಖೆಗಳ ಇತರೆ ಕಾರ್ಯಕ್ರಮಗಳು ಹಾಗೂ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತುಕೊಡುತ್ತಿರುವುದರಿಂದ ಸಂಘದ ವಸತಿ ಶಾಲೆಗಳಿಗೆ ಸಾಕಷ್ಟು ಗಮನಹರಿಸುತ್ತಿಲ್ಲವಾದ್ದರಿಂದ ವಸತಿ ಶಾಲೆಗಳ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಮೂಲಭೂತ ಸೌಕರ್ಯಗಳ ನಿರ್ವಹಣೆಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಸಾಧ್ಯವಾಗದೇ ಇರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ದಿನಾಂಕ:13-06-2011 ರಂದು ನಡೆದ ಸಂಘದ 54ನೇ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ಸಂಘದ ಜಿಲ್ಲಾ ಮಟ್ಟದ ಕಛೇರಿಗಳನ್ನು ಪ್ರಾರಂಭಿಸಿ, ಅಗತ್ಯ ಹುದ್ದೆಗಳನ್ನು ಸೃಜಿಸಲು ತೀರ್ಮಾನಿಸಲಾಗಿದೆ. ಅದರಂತೆ, ಸಂಘವು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸಂಘದ ಕೇಂದ್ರ ಕಛೇರಿಗೆ ಮಾತ್ರ 24 ಹೆಚ್ಚುವರಿ ಹುದ್ದೆಗಳನ್ನು ಸೃಜಿಸಿ ಆದೇಶಿಸಿದ್ದು, ಜಿಲ್ಲಾ ಮಟ್ಟದ ಹುದ್ದೆಗಳ ಅಗತ್ಯತೆ ಬಗ್ಗೆ ಪರಿಶೀಲಿಸಿ, ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು(ಆಯವ್ಯಯ ಮತ್ತು ಸಂಪನ್ಮೂಲ) ಇವರು ತಿಳಿಸಿರುತ್ತಾರೆ.

ಪ್ರತಿ ಜಿಲ್ಲೆಯಲ್ಲಿ ಸರಾಸರಿ 20-25 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಜಿಲ್ಲಾವಾರು ವಸತಿ ಶಾಲೆಗಳಲ್ಲಿ ಸುಮಾರು 4500-5000 ವಿದ್ಯಾರ್ಥಿಗಳಿಗೆ ಉಚಿತ ವಸತಿ ಶಿಕ್ಷಣ, ಆಹಾರ, ಸಮವಸ್ತ್ರ, ಪಠ್ಯಪುಸ್ತಕಗಳು ಹಾಗೂ ಇತರೆ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳ ವಿಸ್ತರಣೆ, ಸಮವಸ್ತ್ರ, ನೋಟ್ ಪುಸ್ತಕಗಳು, ಲೇಖನಸಾಮಾಗ್ರಿಗಳು ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ಪ್ರತಿ ವಸತಿ ಶಾಲೆಗೆ 25 ಬೋದಕ/ಬೋದಕೇತರ ಸಿಬ್ಬಂದಿಗಳನ್ನು ಸೃಜಿಸಲಾಗಿದ್ದು, ಪ್ರತಿ ಜಿಲ್ಲೆಗೆ ಸುಮಾರು 500 ಕಿಂತ ಹೆಚ್ಚು ಬೋಧಕ/ಬೋಧಕೇತರ ಖಾಯಂ/ಹೊರಸಂಪನ್ಮೂಲ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ವಸತಿ ಶಾಲೆಗಳ ಹಾಗೂ ಸಿಬ್ಬಂದಿಗಳ ಸಮರ್ಪಕ ನಿರ್ವಹಣೆ, ಕಾಲಕಾಲಕ್ಕೆ ತಪಾಸಣೆ, ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನ ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ, ವಿವಿಧ ಇಲಾಖೆಗಳೊಂದಿಗೆ ಸಮನ್ವಯ, ಕೇಂದ್ರ ಕಛೇರಿ ಮತ್ತು ಸರ್ಕಾರಕ್ಕೆ ವಸತಿ ಶಾಲೆಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಒದಗಿಸುವುದು, ಜಿಲ್ಲಾ ಮಟ್ಟದ ಸಭೆಗಳಿಗೆ ಹಾಜರಾಗುವುದು, ಸ್ಥಳೀಯ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಶಾಸಕರುಗಳಿಗೆ ಸ್ಪಂದಿಸುವುದು, ಇತ್ಯಾದಿಗಳ ಕಾರ್ಯ ಒತ್ತಡ ಇರುವುದಿರಂದ ಜಿಲ್ಲಾ ಮಟ್ಟದ ಕಛೇರಿಗಳನ್ನು ಪ್ರತ್ಯೇಕವಾಗಿ ತೆರೆದು, ಅಗತ್ಯ ಹುದ್ದೆಗಳನ್ನು ಮಂಜೂರು ಮಾಡುವುದು ಅತ್ಯಾವಶ್ಯಕವಾಗಿದೆ. ಅಲ್ಲದೇ, ಸಂಘವು ವಸತಿ ಶಾಲಾ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಪ್ರತಿ ವರ್ಷ ಸುಮಾರು 80-90 ವಸತಿ ಶಾಲಾ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಮುಕ್ತಾಯದ ಅವಧಿ 18 ತಿಂಗಳಿಗೆ ಪ್ರತಿ ಕಾಮಗಾರಿಗೆ 10.00 ಕೋಟಿಗಳ ವೆಚ್ಚ ಭರಿಸಲಾಗುತ್ತಿದೆ. ಇದಲ್ಲದೇ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿನಿಲಯಗಳ ಕಾಮಗಾರಿಗಳನ್ನೂ ಸಹ ಸಂಘವು ಕೈಗೆತ್ತಿಕೊಂಡಿದೆ.

ಕೇಂದ್ರ ಸರ್ಕಾರದ 600 ಜವಾಹರ್ ನವೋದಯ ವಸತಿ ಶಾಲೆಗಳ ನಿರ್ವಹಣೆಗೆ ರಾಷ್ಟ್ರಮಟ್ಟದಲ್ಲಿ ದೇಹಲಿಯಲ್ಲಿ ಕೇಂದ್ರ ಕಛೇರಿಯಿಂದ್ದು, ಈ ಕಛೇರಿಯ ಮುಖ್ಯಸ್ಥರಾಗಿ ಆಯುಕ್ತರು ಹಾಗೂ ಇವರ ಅಧೀನದಲ್ಲಿ ಅಧಿಕಾರಿಗಳು ಮತ್ತು ಇತರೆ ಸಹಾಯಕ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಲಾಗಿದೆ. ನವೋದಯ ಕೇಂದ್ರ ಕಛೇರಿಯ ಅಧೀನದಲ್ಲಿ 8 ಪ್ರಾದೇಶಿಕ ಕಛೇರಿಗಳು ಇದ್ದು, ಪ್ರತಿ ಕಛೇರಿಗೆ ಉಪ ಆಯುಕ್ತರು ಮುಖ್ಯಸ್ಥರಾಗಿದ್ದು, 4 ಸಹಾಯಕ ಆಯುಕ್ತರುಗಳು, ಲೆಕ್ಕಾಧಿಕಾರಿಗಳು, 2 ಶಾಖಾಧಿಕಾರಿಗಳು ಹಾಗೂ ಒಂದು ಇಂಜಿನೀಯರ್ ಹುದ್ದೆಗಳನ್ನು ಸೃಜಿಸಲಾಗಿದ್ದು, ಈ ಹುದ್ದೆಗಳಿಗೆ ಸಹಾಯಕ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಲಾಗಿದೆ.

ಇದೇ ಮಾದರಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಈ ವಸತಿ ಶಾಲೆಗಳ ಸಮರ್ಪಕ ನಿರ್ವಹಣೆ, ಶೈಕ್ಷಣಿಕ ಗುಣಮಟ್ಟ ಪರಿಶೀಲನೆ ಹಾಗೂ ವಸತಿ ಶಾಲೆಗಳ ಸಿಬ್ಬಂದಿಗಳ ನಿಯಂತ್ರಣಕ್ಕಾಗಿ ಒಬ್ಬ ಎ ವೃಂದದ ಕಿರಿಯ ಶ್ರೇಣಿಯ ಜಿಲ್ಲಾ ವಸತಿ ಶಿಕ್ಷಣಾಧಿಕಾರಿ (District Residential Education Officer)ಯ ಹುದ್ದಯನ್ನು ಸೃಜಿಸಿದಲ್ಲಿ ವಸತಿ ಶಾಲೆಗಳ ಪ್ರಾಂಶುಪಾಲರುಗಳಿಗೆ ಪದೋನ್ನತಿ ನೀಡುವ ಬಗ್ಗೆ ಸಂಘದ ವೃಂದ ಮತ್ತು ವಿನಿಯಮಗಳಲ್ಲಿ ಅಳವಡಿಸಿಕೊಂಡು ಭರ್ತಿ ಮಾಡಿಕೊಳ್ಳಬಹುದಾಗಿದೆ. ಇದರಿಂದ ಶೈಕ್ಷಣಿಕ ಮತ್ತು ಆಡಳಿತಾತ್ಮಕವಾಗಿ ಇಡೀ ಜಿಲ್ಲೆಯಲ್ಲಿ ಸಂಘದ ವ್ಯಾಪ್ತಿಯ ವಸತಿ ಶಾಲೆಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಮಾಡುವ ಒಬ್ಬ ಜಿಲ್ಲಾಮಟ್ಟದ ಅಧಿಕಾರಿಯನ್ನು ನೇಮಕ ಮಾಡಿಕೊಂಡಂತಾಗುತ್ತದೆ. ಪ್ರಸ್ತಾಪಿತ ಜಿಲ್ಲಾ ವಸತಿ ಶಿಕ್ಷಣಾಧಿಕಾರಿಗಳಿಗೆ ಶೈಕ್ಷಣಿಕ ವಿಚಾರಗಳನ್ನು ಮತ್ತು ಹಣಕಾಸಿನ ವೆಚ್ಚಗಳಿಗೆ ಬಿಲ್ಲಿನ ಮೇಲು ರುಜು ಮಾಡುವ ಅಧಿಕಾರವನ್ನು ನೀಡಬಹುದಾಗಿದೆ. ಸದರಿ ಹುದ್ದೆಗಳನ್ನು ಮಂಜೂರು ಮಾಡಿದಲ್ಲಿ ಆರ್ಥಿಕ ವೆಚ್ಚನ್ನು 2016-17ನೇ ಸಾಲಿನ ಆಯವ್ಯಯದಲ್ಲಿ ಕಛೇರಿ ನಿರ್ವಹಣೆಗೆ ನಿಗಧಿಯಾದ ಅನುದಾನದಲ್ಲಿ ಭರಿಸಬಹುದಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಗೊಂದರಂತೆ, ಒಂದು ಜಿಲ್ಲಾ ವಸತಿ ಶಿಕ್ಷಣಾಧಿಕಾರಿ ಹುದ್ದೆಯನ್ನು ಸೃಜಿಸಿ, ಸದರಿ ಅಧಿಕಾರಿಯ ಕಛೇರಿಯನ್ನು ಸಧ್ಯಕ್ಕೆ ಜಿಲ್ಲಾ ಕೇಂದ್ರದಲ್ಲಿರುವ ಅಥವಾ ಜಿಲ್ಲಾ ಕೇಂದ್ರದ ಸಮೀಪದಲ್ಲಿರುವ ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆಯಲ್ಲಿ ತೆರೆದು ಸದರಿ ವಸತಿ ಶಾಲೆಯ ಆಪಿಕ ಸಿಬ್ಬಂದಿಯನ್ನು ಹಾಗೂ ಕಂಪ್ಯೂಟರ್ ಸಿಬ್ಬಂದಿಯನ್ನು ಬಳಸಿಕೊಂಡು ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಆಗದಂತೆ, ಕಾರ್ಯಾರಂಭ ಮಾಡಬಹುದಾಗಿದೆ. ಅದರ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ಪ್ರತಿ ಜಿಲ್ಲೆಗೆ ಒಂದರಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಛೇರಿಯನ್ನು ತೆರೆಯಲು ಪ್ರಸ್ತಾಪಿತ ಹುದ್ದೆಗಳ ವಿವರಗಳು**

| ಕ್ರ.ಸಂ | ಹುದ್ದೆಗಳ ವಿವರಗಳು | ವೇತನ ಶ್ರೇಣಿ | ಒಂದು ಕಛೇರಿಗೆ ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ | 30 ಕಛೇರಿಗಳಿಗೆ ಹೊಸದಾಗಿ ಸೃಜಿಸಬೇಕಾದ ಹುದ್ದೆಗಳ ವಿವರಗಳು |
|---|---|---|---|---|
| 1 | ಜಿಲ್ಲಾ ವಸತಿ ಶಿಕ್ಷಣಾಧಿಕಾರಿ (Distirct Residential Education Officer) | 28100-50100 | 1 | 30 |

ಆದ್ದರಿಂದ ವಿಷಯವನ್ನು ಮಂಡಳಿ ಮುಂದೆ ಮಂಡಿಸಿ, ಮೇಲ್ಕಂಡಂತೆ ಜಿಲ್ಲಾ ಮಟ್ಟದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಛೇರಿಯನ್ನು ಪ್ರಾರಂಭಿಸಿ ಪ್ರಸ್ತಾಪಿಸಿದ ಹುದ್ದೆಗಳನ್ನು ಸೃಜಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ ಅನುಮೋದನೆ ಕೋರಿದೆ.

**ತೀರ್ಮಾನ :**

**ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲಾ ಮಟ್ಟದ ಕಛೇರಿಯನ್ನು ಸೃಜಿಸಿ, ಅಗತ್ಯ ಹುದ್ದೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯ ಬಗ್ಗೆ ಇನ್ನಷ್ಟು ವಿವರಗಳನ್ನು ಸಂಗ್ರಹಿಸಿ, ಅಗತ್ಯವಿದ್ದಲ್ಲಿ ಮುಂದಿನ ಆಡಳಿತ ಮಂಡಳಿ ಸಭೆಗೆ ವಿಷಯ ಮಂಡಿಸಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 15**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಛೇರಿಯನ್ನು ಶೇಷಾದ್ರಿಪುರಂ ನಿಂದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ ನಂ.8, ಕನ್ನಿಂಗ್‌ಹ್ಯಾಮ್ ರಸ್ತೆ ಇಲ್ಲಿಗೆ ಸ್ಥಳಾಂತರಿಸಿರುವ ಬಗ್ಗೆ.**

ದಿನಾಂಕ:13.04.2015 ರಂದು 62ನೇ ಆಡಳಿತ ಮಂಡಳಿ ಸಭೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸೂಕ್ತ ಬಾಡಿಗೆ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆ ನಿಗಧಿ ಪಡಿಸಿರುವ ದರಗಳಲ್ಲಿ ಸ್ಥಳಾಂತರಿಸಲು ತೀರ್ಮಾನಿಸಲಾಗಿದೆ. ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ ಅಧೀನದ ಬಹುಮಹಡಿ ಕಟ್ಟಡ-1 ರ 6ನೇ ಮತ್ತು 7ನೇ ಮಹಡಿಯ 6400 ಚ.ಅಡಿ ಕಟ್ಟಡವನ್ನು ಬಾಡಿಗೆಗೆ ಪಡೆಯಲು ಉದ್ದೇಶಿಸಿ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವೃತ್ತ ಅವರು ಸ್ಥಳ ಪರಿಶೀಲನೆ ನಡೆಸಿ ದಿನಾಂಕ:19-10-2015ರ ಪತ್ರದಲ್ಲಿ ಪ್ರತಿ ಚದುರ ಅಡಿಗೆ ಚದರ ಅಡಿಗೆ ರೂ.47.40 ಗಳಂತೆ ನಿಗದಿಪಡಿಸಿರುತ್ತಾರೆ.

ಸದರಿ ಕಟ್ಟಡದಲ್ಲಿ ಕಛೇರಿ ಕೆಲಸಕ್ಕೆ ಅನುಕೂಲವಾಗುಂವತೆ, ಒಳಾಂಗಣ ಕಾಮಗಾರಿ (Interior Works) ಗಳನ್ನು ಕೈಗೆತ್ತಿಕೊಳ್ಳಲು ಅಂದಾಜು ರೂ.132.00 ಲಕ್ಷಗಳಿಗೆ ತಯಾರಿಸಿ, ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಹಾಗೂ ಸಂಘದ ಅಧ್ಯಕ್ಷರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರ ಅನುಮೋದನೆಯೊಂದಿಗೆ ಮೆ|| ಕೆ.ಆರ್.ಐ.ಡಿ.ಎಲ್.ಸಂಸ್ಥೆಯ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮೂಲಕ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಸಂಘವು ತನ್ನ ಕೇಂದ್ರ ಕಛೇರಿಯನ್ನು ದಿನಾಂಕ:09.05.2016 ರಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ ನಂ.8, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು ಇಲ್ಲಿಗೆ ಸ್ಥಳಾಂತರಿಸಲಾಗಿದೆ.

ಸ್ಥಳಾಂತರಿಸಲಾದ ಕಟ್ಟಡಗಳಿಗೆ ಇನ್ನೂ ಕೆಲವು ಹೆಚ್ಚುವರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಅವಶ್ಯಕವಾಗಿರುತ್ತದೆ ಸದರಿ ಕಾಮಗಾರಿಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗುವುದು. ಅಲ್ಲದೇ, ಸಂಘವು ಮಹಾಮಂಡಳದ 6 ಮತ್ತು 7ನೇ ಮಹಡಿಯಲ್ಲಿ ಪಡೆದ ಕಟ್ಟಡಗಳ ಸ್ಥಳಾವಕಾಶವು ಸಾಕಾಗುತ್ತಿಲ್ಲವಾದ್ದರಿಂದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ ಅಧೀನದ ಬಹು ಮಹಡಿ ಕಟ್ಟಡ-3 ರಲ್ಲಿನ 4ನೇ ಮಹಡಿಯಲ್ಲಿ 3770 ಚದುರಡಿಗಳ ಸ್ಥಳಾವಕಾಶವು ಲಭ್ಯವಿದ್ದು, ಲೋಕೋಪಯೋಗಿ ಇಲಾಖೆಯು ಈಗಾಗಲೇ ಪ್ರತಿ ಚದುರ ಅಡಿಗೆ ರೂ.47.40 ಗಳಂತೆ ನಿಗಧಿಪಡಿಸಿದ ದರದಲ್ಲಿ ಬಾಡಿಗೆಗೆ ಪಡೆಯಲು ಕ್ರಮವಹಿಸಿದೆ.

ವಿಷಯವನ್ನು ಸಭೆಯ ಮುಂದೆ ಮಂಡಿಸಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ

1. ಒಳಾಂಗಣ ಕಾಮಗಾರಿ (Interior Works)ಗಳಿಗೆ ಸಂಘವು ಭರಿಸಿದ ವೆಚ್ಚ ರೂ. 132.00 ಲಕ್ಷಗಳಿಗೆ ಅನುಮೋದನೆ
2. ಮಹಾಮಂಡಳದ ಕಟ್ಟಡದ ಬಹು ಮಹಡಿ ಕಟ್ಟಡ-3 ರಲ್ಲಿನ 4ನೇ ಮಹಡಿಯಲ್ಲಿನ ಲಭ್ಯವಿರುವ 3770 ಚದರಡಿಗಳ ಸ್ಥಳವನ್ನು ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸಿರುವ ದರಗಳಲ್ಲಿ ಸಂಘದ ಕಛೇರಿಗೆ ಬಾಡಿಗೆಗೆ ಪಡೆಯಲು

**ತೀರ್ಮಾನ:**

1. **ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ ಅಧೀನದ ಬಹುಮಹಡಿ ಕಟ್ಟಡ-1 ರ 6ನೇ ಮತ್ತು 7ನೇ ಮಹಡಿಗಳಿಗೆ ಸ್ಥಳಾಂತರಿಸುವುದನ್ನು ಹಾಗೂ ಸದರಿ ಕಟ್ಟಡಗಳಿಗೆ ಒಳಾಂಗಣ ಕಾಮಗಾರಿಗಳಿಗೆ (Interior Works)ಗಳಿಗೆ ಸಂಘವು ಭರಿಸಿದ ವೆಚ್ಚ ರೂ. 132.00 ಲಕ್ಷಗಳಿಗೆ ಅನುಮೋದನೆ ನೀಡಿತು. ಹಾಗೂ**
2. **ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ ಅಧೀನದ ಬಹುಮಹಡಿ ಕಟ್ಟಡ-3 ರಲ್ಲಿನ 4ನೇ ಮಹಡಿಯಲ್ಲಿನ ಲಭ್ಯವಿರುವ 3770 ಚದರಡಿಗಳ ಸ್ಥಳವನ್ನು ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸಿರುವ ದರಗಳಲ್ಲಿ ಸಂಘದ ಕಛೇರಿಗೆ ಬಾಡಿಗೆಗೆ ಪಡೆಯಲು ಅನುಮೋದಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 16**

**ಶ್ರೀ. ಚನ್ನಬಸಪ್ಪ ಸತ್ಯಪ್ಪ ಶಿವಳ್ಳಿ(ವಿಧಾನ ಸಭಾ ಸದಸ್ಯರು) ಸಂಸದೀಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಕಛೇರಿಯ ಉಪಯೋಗಕ್ಕಾಗಿ ಇನ್ನೋವಾ ಕಾರನ್ನು ಸಂಘದಿಂದ ಖರೀದಿಸಿ, ಒದಗಿಸುವ ಬಗ್ಗೆ.**

ಸನ್ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ದಿನಾಂಕ: ದಿನಾಂಕ: 28-12-2015 ರಂದು ರಂದು ನಡೆದ ಸಭೆಯಲ್ಲಿ ಶ್ರೀ. ಚನ್ನಬಸಪ್ಪ ಸತ್ಯಪ್ಪ ಶಿವಳ್ಳಿ(ವಿಧಾನ ಸಭಾ ಸದಸ್ಯರು) ಸಂಸದೀಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ ಸಂಘದವತಿಯಿಂದ ಇನೋವಾ ಕಾರನ್ನು ಒದಗಿಸಲು ಸೂಚಿಸಿರುತ್ತಾರೆ. ಅಲ್ಲದೇ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಅರೆ ಸರ್ಕಾರಿ ಪತ್ರದಲ್ಲಿ ಸದರಿಯವರಿಗೆ ಸಂಘದವತಿಯಿಂದ ಸದರಿಯವರಿಗೆ ಇನೋವಾ ವಾಹನ ಒದಗಿಸಲು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ:13-12-2015 ರಂದು ಸಂಘವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರವು ತನ್ನ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 264 ಸಮನ್ವಯ 2015, ದಿನಾಂಕ:14-01-2016 ರಲ್ಲಿ ಶ್ರೀ. ಚನ್ನಬಸಪ್ಪ ಸತ್ಯಪ್ಪ ಶಿವಳ್ಳಿ(ವಿಧಾನ ಸಭಾ ಸದಸ್ಯರು) ಸಂಸದೀಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ ಸಂಘದ ವತಿಯಿಂದ ಇನೋವಾ ವಾಹನವನ್ನು ರೂ.11.00 ಲಕ್ಷಗಳ (ತೆರಿಗೆ ಹೊರತುಪಡಿಸಿ) ಆರ್ಥಿಕ ಮಿತಿಯೊಳಗೆ ಖರೀದಿಸಲು ಅನುಮತಿ ನೀಡಿ ಆದೇಶಿಸಿದೆ. ಅದರಂತೆ ಸಂಘವು ಖರೀದಿಗೆ ಕ್ರಮವಹಿಸುವ ಸಂಬಂಧ ಮೆ॥ ರವಿಂದು ಟೊಯೊಟಾ ಮೋಟಾರ್ಸ್, ಬೆಂಗಳೂರು ಇವರಿಂದ ಇನ್‌ವಾಯ್ಸ್ ಪಡೆದು ಸದರಿ ಮೋಟಾರ್ ಸಂಸ್ಥೆಯು ರೂ.16.00 ಲಕ್ಷಗಳ ಅಂದಾಜನ್ನು ನೀಡಿದ ಹಿನ್ನೆಲೆಯಲ್ಲಿ ರೂ.5.00 ಲಕ್ಷಗಳ ಹೆಚ್ಚುವರಿ ವೆಚ್ಚವನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ತದನಂತರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರು ದಿನಾಂಕ:29-02-2016 ರಂದು ಹೆಚ್ಚುವರಿ ಅನುದಾನದ ಮಂಜೂರಾತಿಗಾಗಿ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದು, ರೂ. 16.00 ಲಕ್ಷಗಳ ಡಿಡಿಯನ್ನು ವಾಹನ ಖರೀದಿಸಲು ಡೀಲರ್‌ಗೆ ನೀಡಿ, ಅನುಪಾಲನೆಯನ್ನು ಘಟನೋತ್ತರ ಮಂಜೂರಾತಿಗಾಗಿ ಕಳುಹಿಸಲು ಸೂಚಿಸಿರುತ್ತಾರೆ.

ಅದರಂತೆ ಸಂಘವು ಮೆ॥ ರವಿಂದು ಟೊಯೊಟಾ ಮೋಟಾರ್ಸ್, ಬೆಂಗಳೂರು ಮೂಲಕ ನಿಯಮಾನುಸಾರ ಟೋಯೋಟೋ ಇನ್ನೋವಾ ಎಲ್.ಎಂ.ವಿ. ಮಾಡೆಲ್ GX -7 ಸೀಟರ್ ಸಿಲ್ವರ್ ಕಲರ್" ವಾಹನವನ್ನು ರೂ. 16,63,356/-ಗಳ ವೆಚ್ಚದಲ್ಲಿ ಖರೀದಿಸಿ, ಒದಗಿಸಿರುತ್ತದೆ. ತದನಂತರ, ಶ್ರೀ.ಸಿ.ಎಸ್.ಶಿವಳ್ಳಿರವರು ತಮ್ಮ ಪತ್ರ ದಿನಾಂಕ:04-03-2016ರಲ್ಲಿ ಹೊಸದಾಗಿ ಖರೀದಿಸಲಾದ ಇನೋವಾ ಕಾರಿಗೆ ಅವಶ್ಯವಿರುವ ಇತರೇ ಬಿಡಿ ಭಾಗಗಳನ್ನು ಅಳವಡಿಸಲು(Accessories) ರೂ.1,95,650/-ಗಳ ಹೆಚ್ಚವರಿ ಮೊತ್ತ ಅಗತ್ಯವಿರುವುದಾಗಿ ಕೋರಿದ ಹಿನ್ನೆಲೆಯಲ್ಲಿ ಸದರಿ ಹೆಚ್ಚವರಿ ಮೊತ್ತವೂ ಸೇರಿದಂತೆ, ಒಟ್ಟು ರೂ. ರೂ.18,59,006/-ಗಳನ್ನು ಸಂಘದ ನಿರ್ವಹಣೆ ಲೆಕ್ಕ ಶೀರ್ಷಿಕೆ2225-01-277-0-53(ಯೋಜನೆ)ರಡಿಯಲ್ಲಿ ಈ ಕೆಳಕಂಡಂತೆ ಭರಿಸಲಾಗಿದೆ.

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

| ಕ್ರ. ಸಂ | ವಿವರ | ಒಟ್ಟು ಮೊತ್ತ ರೂ.ಗಳಲ್ಲಿ |
|---|---|---|
| 1. | Ex-Showroom Price | 13,67,339.00 |
| 2. | Insurance | 37,000.00, |
| 3. | Road tax & handling charge | 2,59,017.00, |
| 4. | Accessories | 1,95,650.00 |
| | Total | 18,59,006.00 |

ಮೇಲ್ಕಂಡಂತೆ ಇನೋವಾ ಕಾರನ್ನು ಖರೀದಿಸಲು ಅನುಮೋದಿತ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ರೂ.7,59,006/-ಗಳನ್ನು ಸಂಘದ ಅಧ್ಯಕ್ಷರು, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಮತ್ತು ಸಂಘ ಉಪಾಧ್ಯಕ್ಷರಾದ ಸರ್ಕಾರದ ಪ್ರಧಾನ ಕಾರ್ಯದಶಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವರಿಂದ ಅನುಮೋದನೆ ಪಡೆದು ಮೆ॥ ರವಿಂದು ಟೊಯೊಟಾ ಮೋಟಾರ್ಸ್, ಬೆಂಗಳೂರುರವರಿಗೆ ಸಂಘದಿಂದ ಭರಿಸಲಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, ಶ್ರೀ. ಚನ್ನಬಸಪ್ಪ ಸತ್ಯಪ್ಪ ಶಿವಳ್ಳಿ(ವಿಧಾನ ಸಭಾ ಸದಸ್ಯರು) ಸಂಸದೀಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರಿಗೆ ಒಟ್ಟು ರೂ. 18,59,006/-ಗಳ ವೆಚ್ಚದಲ್ಲಿ ಇನೋವಾ ಕಾರನ್ನು ಖರೀದಿಸಿ, ಒದಗಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ ಕೋರಿದೆ.

**ತೀರ್ಮಾನ:**

**ಶ್ರೀ.ಚನ್ನಬಸಪ್ಪ ಸತ್ಯಪ್ಪ ಶಿವಳ್ಳಿ(ವಿಧಾನ ಸಭಾ ಸದಸ್ಯರು) ಸಂಸದೀಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಕಛೇರಿಯ ಉಪಯೋಗಕ್ಕಾಗಿ ಇನ್ನೋವಾ ಕಾರನ್ನು ರೂ. 18.59 ಲಕ್ಷಗಳ ವೆಚ್ಚದಲ್ಲಿ ಖರೀದಿಸಲಾಗಿದ್ದು, ಇದು ಅನುಮೋದಿತ ವೆಚ್ಚ ರೂ.11.00ಲಕ್ಷಗಳಿಗಿಂತ ಹೆಚ್ಚುವರಿ ವೆಚ್ಚ ರೂ.7.59.006/- ಗಳಾಗಿದೆ. ಈ ಹೆಚ್ಚುವರಿ ವೆಚ್ಚವು ವಾಹನ ವಿಮೆ, ತೆರಿಗೆ, ಬಿಡಿ ಭಾಗಗಳು (Accessories) ಸೇರಿ ವಾಹನದ ಬೆಲೆಯಲ್ಲಿ ಹೆಚ್ಚಳವಾಗಿರುವುದನ್ನು ಸಭೆಯು ಗಮನಿಸಿ, ಅನುಮೋದಿಸಿತು.**

ವಿಷಯ ಸಂಖ್ಯೆ: 17

ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17ನೇ ಸಾಲಿನಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಒದಗಿಸಲು ಸಂಘವು ಕೈಗೊಂಡ ಕ್ರಮದ ಬಗ್ಗೆ.

1. **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17 ನೇ ಸಾಲಿಗೆ ಸಿದ್ಧಪಡಿಸಿದ ಸಮವಸ್ತ್ರ ಗಳನ್ನು ಸರಬರಾಜು ಮಾಡುವ ಬಗ್ಗೆ.**

ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ-224 ಬಿಎಂಎಸ್ 2016, ದಿನಾಂಕ:18-03-2016 ರಲ್ಲಿ 2016-17ನೇ ಸಾಲಿಗೆ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯವರಿಂದ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಒಟ್ಟು ರೂ. ಕೋಟಿ 21.29 ವೆಚ್ಚದಲ್ಲಿ ಸರಬರಾಜು ಮಾಡಲು

ಸದಸ್ಯ ಕಾರ್ಯದರ್ಶಿ ಅಧ್ಯಕ್ಷರು

ಆದೇಶಿಸಲಾಗಿದೆ. ಸದರಿ ಆದೇಶದ ಅನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯವರಿಗೆ ಸಿದ್ಧಪಡಿಸಿದ ಸಮವಸ್ತ್ರ ಸರಬರಾಜು ಮಾಡಲು ದಿ:19.03.2016 ರಂದು ಕಾರ್ಯಾದೇಶ ನೀಡಲಾಗಿದೆ.

ಸಂಘವು ನೀಡಿದ ಕಾರ್ಯಾದೇಶದಲ್ಲಿ ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಸಿದ್ಧಪಡಿಸಿದ ಸಮವಸ್ತ್ರಗಳನ್ನು ತಯಾರಿಸುವ ಕೆಲಸವನ್ನು ಕೂಡಲೇ ಪ್ರಾರಂಭಿಸಿ, ಪ್ರತಿ ಬಾಲಕರಿಗೆ 2 ಜೊತೆ ನಿಗಧಿತ ಬಣ್ಣದ ಸಮವಸ್ತ್ರ ಹಾಗೂ 1 ಜೊತೆ ಬಿಳಿ ಸಮವಸ್ತ್ರ (ಶರ್ಟ್ ಮತ್ತು ಪ್ಯಾಂಟ್) ಅದೇ ರೀತಿ ಬಾಲಕಿಯರಿಗೆ 2 ಜೊತೆ ನಿಗಧಿತ ಬಣ್ಣದ ಸಮವಸ್ತ್ರ (ಕುರ್ತಾ, ಪ್ಯಾಂಟ್, ಜಾಕೇಟ್ ಮತ್ತು ದುಪ್ಪಟ್ಟ) ಹಾಗೂ 1 ಜೊತೆ ಬಿಳಿ ಸಮವಸ್ತ್ರಗಳನ್ನು ಸಿದ್ಧಪಡಿಸಿ ಸರಬರಾಜು ಮಾಡಲು ತಿಳಿಸಿದೆ.

ಅಲ್ಲದೇ, ಸಮವಸ್ತ್ರಗಳನ್ನು ಸರಬರಾಜು ಮಾಡುವ ಮುನ್ನಾ ಸಮವಸ್ತ್ರ ಬಟ್ಟೆಯ ಗುಣಮಟ್ಟವನ್ನು ಟೆಕ್ಸ್‌ಟೈಲ್ಸ್ ಕಮಿಟಿರವರಿಂದ ಪರಿಶೀಲನೆಗೆ ಒಳಪಡಿಸಿ, ಸರಬರಾಜು ಸಂಸ್ಥೆಯು ಸಿದ್ಧಪಡಿಸಿದ ಸಮವಸ್ತ್ರಗಳ ದೃಢೀಕೃತ ಮಾದರಿ/ವಿನ್ಯಾಸಗಳನ್ನು ಸಂಘದ ಕೇಂದ್ರ ಕಛೇರಿಯಲ್ಲಿ ಪರಿಶೀಲಿಸಿ, ಗುಣಮಟ್ಟವನ್ನು ಖಾತರಿಪಡಿಸಿಕೊಂಡು ಅನುಮೋದಿಸಿದ ನಂತರ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರು ವಸತಿ ಶಾಲೆಗಳಿಗೆ ನೇರವಾಗಿ ಸರಬರಾಜು ಮಾಡುವ ಷರತ್ತನ್ನು ವಿಧಿಸಿದೆ. ಅದರಂತೆ, ಕ್ರಮವಹಿಸಲಾಗುತ್ತಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಸಲ್ಲಿಸಿದೆ.

2. **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17 ನೇ ಸಾಲಿಗೆ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ /ಏಕಲವ್ಯ/ಹುತಾತ್ಮರ ಶಾಲೆ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17 ನೇ ಸಾಲಿಗೆ ನೋಟ್ ಪುಸ್ತಕ & ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ಮೆ|| ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ಸ್ ಲಿ. ರವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸಾಮಾಗ್ರಿಗಳ ವಿವರಗಳು ಈ ಕೆಳಕಂಡಂತೆ ಇವೆ.

| Sl no | Pages | Type | Basic Price | VAT @ 5.5% | Total Price for each |
|---|---|---|---|---|---|
| 1 | 192 | SL Long Note Book | 40.97 | 2.25 | 43.22 |
| 2 | 192 | UR Long Note Book | 40.97 | 2.25 | 43.22 |
| 3 | 192 | SL King Size | 32.55 | 1.79 | 34.34 |
| 4 | 192 | UR King Size | 32.55 | 1.79 | 34.34 |
| 5 | 96 | SL King Size | 18.9 | 1.04 | 19.94 |
| 6 | 96 | UR King Size | 18.9 | 1.04 | 19.94 |
| 7 | 192 | 2L Small Note Book | 21.04 | 1.16 | 22.20 |
| 8 | 192 | 3L Small Note Book | 21.04 | 1.16 | 22.20 |
| 9 | 192 | 4L Small Note Book | 21.04 | 1.16 | 22.20 |
| 10 | 60 | Graph | 16.44 | 0.90 | 17.34 |
| 11 | 500 | Answer Papers (Ruled) | 0.31 | 0.02 | 0.33 |
| 12 | 500 | Answer Papers (UnRuled) | 0.31 | 0.02 | 0.33 |
| 13 | 60 | Cursive Writing Book | 42.44 | 2.33 | 44.77 |
| 14 | | Geometry Box | 96 | 5.28 | 101.28 |
| 15 | | Blue Pen | 5.51 | 0.30 | 5.81 |
| 16 | | Red Pen | 5.51 | 0.30 | 5.81 |
| 17 | | Pencil | 3.15 | 0.17 | 3.32 |
| 18 | 200 | Practical Records (Phy, Chem, Com Sci) | 46.2 | 2.54 | 48.74 |
| 19 | 200 | Practical Records (Bio) | 63 | 3.47 | 66.47 |

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 4(ಜಿ) ರಡಿ ನೋಟ್ ಪುಸ್ತಕಗಳನ್ನು ಮೆ|| ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ನಿಂದ ಸಂಗ್ರಹಿಸಲು ವಿನಾಯಿತಿ ಇರುತ್ತದೆ. ಆದರೆ ಕಾಲಮಿತಿ ಇರುವುದಿಲ್ಲ. ಅಲ್ಲದೇ ದಿನಾಂಕ: 14.05.2015 ರಲ್ಲಿನ ಸರ್ಕಾರದ ಆದೇಶದಲ್ಲಿ ಲೇಖನ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಸಾಮಗ್ರಿಗಳನ್ನು ಮೆ॥ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ನಿಂದ ಸಂಗ್ರಹಿಸಲು ಒಂದು ವರ್ಷದ ಅವಧಿಗೆ ವಿನಾಯಿತಿ ಇರುತ್ತದೆ. ಸದರಿ ಸಂಸ್ಥೆಗೆ ನೀಡಲಾಗಿರುವ ವಿನಾಯಿತಿ ಅವಧಿ ಮುಗಿದಿರುವುದರಿಂದ 2016-17 ನೇ ಸಾಲಿಗೆ 4(ಜಿ) ವಿನಾಯಿತಿ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಏತನ್ಮಧ್ಯೆ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 285 ವೆಚ್ಚ 12/16, ದಿ:04.05.2016 ರಲ್ಲಿ ದಿ:04.03.2016 ರಿಂದ ಒಂದು ವರ್ಷದ ಅವಧಿಗೆ ಅನ್ವಯಿಸುವಂತೆ ಮೆ॥ ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ಸ್ ಲಿ. ರವರು ಉತ್ಪಾದಿಸುವ 'ಲೇಖಕ್' ಬ್ರಾಂಡ್‌ನ ವಸ್ತುಗಳನ್ನು ರಾಜ್ಯದ ವಿವಿಧ ಇಲಾಖೆಗಳು, ನಿಗಮ, ಮಂಡಳಿ, ಸರ್ಕಾರಿ ಸ್ವಾಯುಕ್ತ ಸಂಸ್ಥೆಗಳು ನೇರವಾಗಿ ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಕಲಂ 4(ಜಿ) ಅಡಿ ವಿನಾಯಿತಿ ನೀಡಿದೆ.

2016-17ನೇ ಸಾಲಿನಲ್ಲಿ ಸಂಘದ ವಸತಿ ಶಾಲೆ/ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆಗನುಗುಣವಾಗಿ ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ಒಟ್ಟು ರೂ 14.75 ಕೋಟಿಗಳನ್ನು ಭರಿಸಬೇಕಾಗುತ್ತದೆ. ಪ್ರಸ್ತಾಪಿತ ಮೊತ್ತವು ರೂ.5.00 ಕೋಟಿಗಳನ್ನು ಮೀರುವುದರಿಂದ "Karnataka Transaction of Business Rule 1977, Schedule -1 item 15 ರ ಪ್ರಕಾರ ಸಚಿವ ಸಂಪುಟದ ಅನುಮೋದನೆ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17ನೇ ಸಾಲಿಗೆ ನೋಟ್‌ಪುಸ್ತಕ ಮತ್ತು ಲೇಖನಸಾಮಾಗ್ರಿಗಳನ್ನು ರೂ 14.75 ಕೋಟಿಗಳ ವೆಚ್ಚದಲ್ಲಿ ಖರೀದಿಸಿ, ಸರಬರಾಜು ಮಾಡುವ ಬಗ್ಗೆ ಸಂಘವು ಕೈಗೊಂಡ ಕ್ರಮವನ್ನು ಅನುಮೋದಿಸಲು ಕೋರಿದೆ.

3. <u>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17 ನೇ ಸಾಲಿಗೆ ಶೂ,ಸಾಕ್ಸ್, ಟೈ ಮತ್ತು ಬೆಲ್ಟ್‌ಗಳನ್ನು ಸರಬರಾಜು ಮಾಡುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ /ಏಕಲವ್ಯ/ಹುತಾತ್ಮರ ಶಾಲೆ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17 ನೇ ಸಾಲಿಗೆ ಶೂ,ಸಾಕ್ಸ್, ಟೈ ಮತ್ತು ಬೆಲ್ಟ್‌ಗಳನ್ನು ಸರಬರಾಜು ಮಾಡಲು ಡಾ॥ ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸಾಮಾಗ್ರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರ. ಸಂ | ಸಾಮಗ್ರಿಗಳ ವಿವರ | ಬಾಲಕರಿಗೆ | | ಬಾಲಕಿಯರಿಗೆ | |
|---|---|---|---|---|---|
| | | ಪರಿಮಾಣ | ದರ (ರೂ.ಗಳಲ್ಲಿ) | ಪರಿಮಾಣ | ದರ (ರೂ.ಗಳಲ್ಲಿ) |
| 1 | ಕಪ್ಪು ಶೂ | 1 ಜೊತೆ | 258 | 1 ಜೊತೆ | 258 |
| 2 | ಬಿಳಿ ಕ್ಯಾನ್‌ವಾಸ್ ಶೂ | 1 ಜೊತೆ | 249 | 1 ಜೊತೆ | 249 |
| 3 | ಡಬಲ್ ನೆಟೆಡ್ ಕಾಟನ್ ಕಪ್ಪು ಕಾಲು ಚೀಲಗಳು | 2 ಜೊತೆ | 84 | 2 ಜೊತೆ | 84 |
| 4 | ಡಬಲ್ ನೆಟೆಡ್ ಕಾಟನ್ ಬಿಳಿ ಕಾಲು ಚೀಲಗಳು | 1 ಜೊತೆ | 42 | 1 ಜೊತೆ | 42 |
| 4 | ಬೆಲ್ಟ್ | 1 | 38 | - | 0 |
| 5 | ಟೈ | 1 | 23 | - | 0 |
| | ಒಟ್ಟು | | 694 | | 633 |

2015-16 ನೇ ಸಾಲಿನಲ್ಲಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಡಾ॥ ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದವತಿಯಿಂದ ಮೇಲ್ಕಂಡ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 4(ಜಿ) ರಡಿ ವಿನಾಯಿತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಸದರಿ ಸಂಸ್ಥೆಗೆ ಆರ್ಥಿಕ ಇಲಾಖೆಯಿಂದ 4(ಜಿ) ರಡಿ ವಿನಾಯಿತಿ ದೊರೆಯದೇ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಇದ್ದುದರಿಂದ 2015-16ನೇ ಸಾಲಿನಲ್ಲಿ ವಸತಿ ಶಾಲೆ/ಕಾಲೇಜಿನ ವಿದ್ಯಾರ್ಥಿಗಳು ಶೂ, ಸಾಕ್ಸ್, ಟೈ, ಬೆಲ್ಟ್ ಮತ್ತು ಬ್ಯಾಡ್ಜ್‌ಗಳಿಂದ ವಂಚಿತರಾಗಿದ್ದು, ಇದರಿಂದ ಸಾರ್ವಜನಿಕ ವಲಯಗಳಲ್ಲಿ, ಸದನ ಸಭೆಗಳಲ್ಲಿ ಹಾಗೂ ವಿದ್ಯಾರ್ಥಿಗಳ ಪೋಷಕರುಗಳಿಂದ ತೀವ್ರ ಆಕ್ಷೇಪಣೆಗಳು ವ್ಯಕ್ತವಾಗಿರುತ್ತವೆ. ಈ ಹಿನ್ನೆಲೆಯಲ್ಲಿ 2016-17 ನೇ ಸಾಲಿಗೆ ಡಾ॥ ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ರವರಿಂದ ಶೂ,ಸಾಕ್ಸ್, ಟೈ ಮತ್ತು ಬೆಲ್ಟ್‌ಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 4(ಜಿ) ರಡಿ ವಿನಾಯಿತಿ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

2016-17ನೇ ಸಾಲಿನ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆಗನುಗುಣವಾಗಿ ಶೂ,ಸಾಕ್ಸ್, ಟೈ ಮತ್ತು ಬೆಲ್ಟ್‌ಗಳನ್ನು ಸರಬರಾಜು ಮಾಡಲು ಒಟ್ಟು ರೂ 8.07 ಕೋಟಿಗಳನ್ನು ಭರಿಸಬೇಕಾಗುತ್ತದೆ. ಪ್ರಸ್ತಾಪಿತ ಮೊತ್ತವು ರೂ.5.00 ಕೋಟಿಗಳನ್ನು ಮೀರುವುದರಿಂದ "Karnataka Transaction of Business Rule 1977, Schedule -1 item 15 ರ ಪ್ರಕಾರ ಸಚಿವ ಸಂಪುಟದ ಅನುಮೋದನೆಯು ಅಗತ್ಯವಿದ್ದು, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, 2016-17ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಡಾ॥ ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ದವತಿಯಿಂದ ಶೂ,ಸಾಕ್ಸ್, ಟೈ ಮತ್ತು ಬೆಲ್ಟ್‌ಗಳನ್ನು ರೂ 8.07 ಕೋಟಿಗಳ ವೆಚ್ಚದಲ್ಲಿ ಖರೀದಿಸುವ ಬಗ್ಗೆ ಸಂಘವು ಕೈಗೊಂಡಿರುವ ಕ್ರಮವನ್ನು ಅನುಮೋದಿಸಲು ಕೋರಿದೆ.

**4. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17 ನೇ ಸಾಲಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಸರಬರಾಜು ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ /ಏಕಲವ್ಯ/ಹುತಾತ್ಮರ ಶಾಲೆ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17 ನೇ ಸಾಲಿಗೆ ಬಾಲಕರಿಗೆ ನಿರ್ಮಲ್ ಕಿಟ್ ಹಾಗೂ ಬಾಲಕಿಯರಿಗೆ ಸಿರಿಗಂಧ ಕಿಟ್‌ಗಳನ್ನು ಸರಬರಾಜು ಮಾಡಲು ಮೆ॥. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್, ಬೆಂಗಳೂರು ರವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತೆ ಇವೆ.

| **ಉತ್ಪನ್ನಗಳ ವಿವರ** | **ಪರಿಮಾಣ** | **2016-17 ನೇ ಸಾಲಿನ ಪ್ರಸ್ತಾಪಿತ ಸರಬರಾಜು ದರ (ಪ್ರತಿ ಕಿಟ್‌ಗೆ)** | |
|---|---|---|---|
| | | **ಬಾಲಕರಿಗೆ** | **ಬಾಲಕಿಯರಿಗೆ** |
| ಮೈಸೂರು ಸ್ಯಾಂಡಲ್ ಸೋಪ್ – 75 ಗ್ರಾಂ | 1 ಸಂಖ್ಯೆ | 28.60 | 28.60 |
| ಮೈಸೂರು ಡಿಟರ್ಜೆಂಟ್ 150 ಗ್ರಾಂ | 2 ಸಂಖ್ಯೆ | 15.00 | 15.00 |
| ಕೊಬ್ಬರಿ ಎಣ್ಣೆ- 100 ಗ್ರಾಂ | 1 ಸಂಖ್ಯೆ | 33.00 | - |
| **ಕೊಬ್ಬರಿ ಎಣ್ಣೆ- 150 ಗ್ರಾಂ** | **1 ಸಂಖ್ಯೆ** | - | 49.50 |
| ಮೈಸೂರ್ ಸ್ಯಾಂಡಲ್ ಟ್ಯಾಲ್ಕಂ ಪೌಡರ್ -50 ಗ್ರಾಂ | 1 ಸಂಖ್ಯೆ | - | 17.00 |
| ಟೂತ್ ಪೇಸ್ಟ್ -50 ಗ್ರಾಂ | 1 ಸಂಖ್ಯೆ | 12.40 | 12.40 |
| **ಒಟ್ಟು** | | **89.00** | **122.50** |

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 4(ಜಿ) ರಡಿ 2015-16ನೇ ಸಾಲಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಮೆ॥ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ ನಿಂದ ಸಂಗ್ರಹಿಸಲು ವಿನಾಯಿತಿ ಇರುತ್ತದೆ. ಸದರಿ ಸಂಸ್ಥೆಗೆ ನೀಡಲಾಗಿರುವ ವಿನಾಯಿತಿ ಅವಧಿ ಮುಗಿದಿರುವುದರಿಂದ 2016-17 ನೇ ಸಾಲಿಗೆ 4 (ಜಿ) ವಿನಾಯಿತಿ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

2016-17ನೇ ಸಾಲಿನ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆಗನುಗುಣವಾಗಿ ಶುಚಿ ಸಂಭ್ರಮ ಕಿಟ್ಟುಗಳನ್ನು ಸರಬರಾಜು ಮಾಡಲು ಒಟ್ಟು ರೂ 13.48 ಕೋಟಿಗಳನ್ನು ಭರಿಸಬೇಕಾಗುತ್ತದೆ.

ಸದಸ್ಯ ಕಾರ್ಯದರ್ಶಿ ಅಧ್ಯಕ್ಷರು

ಪ್ರಸ್ತಾಪಿತ ಮೊತ್ತವು ರೂ.5.00 ಕೋಟಿಗಳನ್ನು ಮೀರುವುದರಿಂದ "Karnataka Transaction of Business Rule 1977, Schedule -1 item 15 ರ ಪ್ರಕಾರ ಸಚಿವ ಸಂಪುಟದ ಅನುಮೋದನೆಯು ಅಗತ್ಯವಿದ್ದು, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, 2016-17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಮೇಲ್ಕಂಡ 4 ಸಂಸ್ಥೆಗಳವತಿಯಿಂದ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಕಾದಲ್ಲಿ ಪೂರೈಕೆ ಮಾಡಲು ಸಂಘವು ಕೈಗೊಂಡಿರುವ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ 2016-17ನೇ ಸಾಲಿನಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಕೈಗೊಂಡ ಕ್ರಮವನ್ನು ಅವಲೋಕಿಸಿ, ಅನುಮೋದಿಸಿತು.**

**ವಿಷಯ ಸಂಖ್ಯೆ: 18**

**ವಸತಿ ಶಾಲೆ ಮತ್ತು ಕಾಲೇಜುಗಳಿಗೆ ಬಕೇಟ್ ಮತ್ತು ಜಗ್ಗು ಖರೀದಿಸಲು ಅನುದಾನ ಬಿಡುಗಡೆ ಮಾಡಿರುವ ಬಗ್ಗೆ**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 505 ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ /ಏಕಲವ್ಯ/ಹುತಾತ್ಮರ ಶಾಲೆ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ದೈನಂದಿನ ಸ್ನಾನ ಮತ್ತು ಶೌಚ ಕಾರ್ಯಗಳಿಗಾಗಿ ಬಕೇಟ್ ಮತ್ತು ಜಗ್ಗುಗಳನ್ನು ಒದಗಿಸುವುದು ಅತ್ಯಾವಶ್ಯಕವಾಗಿದ್ದು, ಪ್ರತಿ 25 ವಿದ್ಯಾರ್ಥಿಗಳಿಗೆ ಒಂದು ಬಕೇಟ್ ಮತ್ತು 1 ಜಗ್‌ಗಳಂತೆ ಪ್ರತಿ ಶಾಲೆ/ಕಾಲೇಜಿಗೆ 25 ಬಕೇಟ್ ಮತ್ತು 25 ಜಗ್‌ಗಳನ್ನು ಈ ಕೆಳಕಂಡ ಮಾದರಿ,ವಿನ್ಯಾಸ ಮತ್ತು ದರಗಳನ್ವಯ ಖರೀದಿಸಲು ಪ್ರತಿ ಶಾಲೆಗೆ ರೂ.4,750/- ಗಳಂತೆ ಒಟ್ಟು ರೂ. 23.94 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

| | | |
|---|---|---|
| 1 | 16 ಲೀಟರ್ ಸಾಮರ್ಥ್ಯದ, 13.3" Width, 12" Length, 2.5mm Breadth ವುಳ್ಳ (Unbreakable Plastic Bucket) | 165.00 |
| 2 | 1 ಲೀಟರ್ ಸಾಮರ್ಥ್ಯದ ಉತ್ತಮ ಗುಣಮಟ್ಟದ (Unbreakable Plastic Jug ) | 25.00 |

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳ ದೈನಂದಿನ ಕಾರ್ಯಗಳ ಅನುಕೂಲಕ್ಕಾಗಿ ಅವಶ್ಯಕ ಬಕೇಟ್ ಮತ್ತು ಜಗ್ಗುಗಳನ್ನು ಖರೀದಿಸಲು ಸಂಘವು ಒಟ್ಟು ರೂ. 23.94 ಲಕ್ಷಗಳ ಅನುದಾನವನ್ನು ವಸತಿ ಶಾಲೆಗಳಿಗೆ ಬಿಡುಗಡೆ ಮಾಡಿರುವ ಕ್ರಮವನ್ನು ಅನುಮೋದಿಸಲು ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಸತಿ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳ ದೈನಂದಿನ ಉಪಯೋಗಕ್ಕೆ ಬಕೇಟ್ ಮತ್ತು ಜಗ್ಗುಗಳನ್ನು ಖರೀದಿಸಲು ವಸತಿ ಶಾಲೆಗಳಿಗೆ ಸಂಘವು ರೂ.23.94 ಲಕ್ಷಗಳನ್ನು ಬಿಡುಗಡೆ ಮಾಡಿದ ಕ್ರಮವನ್ನು ಅನುಮೋದಿಸಿತು.**

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

<u>ವಿಷಯ ಸಂಖ್ಯೆ: 19</u>

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ ವಸತಿ ಶಾಲೆಗಳಿಗೆ ಕಂಪ್ಯೂಟರ್ ವಿಷಯದ ಪಠ್ಯ ಪುಸ್ತಕಗಳನ್ನು ಮುದ್ರಿಸಿ, ಉಚಿತವಾಗಿ ವಿತರಿಸುವ ಬಗ್ಗೆ**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಏಕಲವ್ಯ ಮಾದರಿ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ 6 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ ಗಣಕಯಂತ್ರ ಪಠ್ಯಪುಸ್ತಕಗಳನ್ನು ಸರಬರಾಜು ಮಾಡುವ ಬಗ್ಗೆ ಸಂಘದ 65ನೇ ಆಡಳಿತ ಮಂಡಳಿ ಸಭೆಯಲ್ಲಿ ವಿಷಯದ ಬಗ್ಗೆ ಚರ್ಚೆಯಾಗಿದ್ದು ಈ ಕೆಳಕಂಡಂತೆ ತೀರ್ಮಾನ ನೀಡಿರುತ್ತದೆ.

**"ಆಡಳಿತ ಮಂಡಳಿ ಸಭೆಯಲ್ಲಿ ಹಾಜರಿದ್ದ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ) ರವರು ಕಂಪ್ಯೂಟರ್ ಶಿಕ್ಷಣದ ಬಗ್ಗೆ ಮಾರುಕಟ್ಟೆಯಲ್ಲಿ ವಿವಿಧ ಮಾದರಿಯ ಕಂಪ್ಯೂಟರ್ ಪುಸ್ತಕಗಳು ಲಭ್ಯವಿರುವುದನ್ನು ಸಭೆಗೆ ತಿಳಿಸಿದರು. ಆದ್ಯಾಗ್ಯೂ ಸಂಘವು 6-10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿ ತರಗತಿಗೆ ಪ್ರತ್ಯೇಕವಾದ ಪಠ್ಯಕ್ರಮವುಳ್ಳವಂತೆ ಕಂಪ್ಯೂಟರ್ ಪುಸ್ತಕಗಳನ್ನು ಮುದ್ರಿಸಲು ಟೆಂಡರ್ ಕರೆದು ಮುದ್ರಿಸಿ ವಿತರಿಸಲು ಅನುಮೋದಿಸಿತು ಹಾಗೂ ಕ್ರಮ ಜರುಗಿಸುವುದಕ್ಕಿಂತ ಪೂರ್ವದಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುವ ಅದೇ ಮಾದರಿಯ ಪುಸ್ತಕಗಳ ದರಗಳೊಂದಿಗೆ ಹೋಲಿಕೆ ಮಾಡಿ, ಮುದ್ರಿಸಿ ವಿತರಿಸಬೇಕೆಂದಿರುವ ಪುಸ್ತಕದ ದರವು ಹೆಚ್ಚಾಗಿಲ್ಲದಿರುವ ಬಗ್ಗೆ ದೃಢಪಡಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು."**

ಆಡಳಿತ ಮಂಡಳಿಯ ತೀರ್ಮಾನದಂತೆ, ವಸತಿ ಶಾಲೆಗಳ 6ನೇ ತರಗತಿಯಿಂದ 10ನೇ ತರಗತಿಯವರೆಗೆ ತರಗತಿವಾರು ಗಣಕಯಂತ್ರ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿದ್ದು, ಸದರಿ ಪಠ್ಯಪುಸ್ತಕಗಳನ್ನು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ, ಅನುಮೋದನೆ ಪಡೆಯಲಾಗಿರುತ್ತದೆ.

ಮುಂದುವರಿದು, ವಿದ್ಯಾರ್ಥಿಗಳಲ್ಲಿ ಕಂಪ್ಯೂಟರ್ ಕಲಿಕೆ ಮತ್ತು ಗುಣಮಟ್ಟದ ಕಂಪ್ಯೂಟರ್ ಶಿಕ್ಷಣವನ್ನು ಖಾತರಿಪಡಿಸಲು ಕಂಪ್ಯೂಟರ್ ಪಠ್ಯಪುಸ್ತಕಗಳನ್ನು ನೀಡುವುದರ ಜೊತೆಗೆ ವರ್ಕ್ ಬುಕ್‌ಗಳನ್ನೂ ಸಹ ಸಿದ್ಧಪಡಿಸಲಾಗಿದೆ. ಈ ಎರಡೂ ಪುಸ್ತಗಳ ದರಗಳನ್ನು ಪ್ರಸ್ತುತ ಮಾರುಕಟ್ಟೆಯ ಇದೇ ಮಾದರಿಯ ಕಂಪ್ಯೂಟರ್ ಪಠ್ಯಪುಸ್ತಕಗಳ ದರಗಳೊಂದಿಗೆ ಹೋಲಿಕೆ ಮಾಡಲಾಗಿದ್ದು ಸಂಘವು ಸಿದ್ಧಪಡಿಸಿದ ಕಂಪ್ಯೂಟರ್ ಪಠ್ಯಪುಸ್ತಕ ಮತ್ತು ವರ್ಕ್ ಬುಕ್‌ಗಳ ದರಗಳು ಕಡಿಮೆ ಇರುತ್ತವೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ಮೇಲ್ಕಂಡಂತೆ ಕಂಪ್ಯೂಟರ್ ಪಠ್ಯಪುಸ್ತಕ ಮತ್ತು ವರ್ಕ್ ಬುಕ್‌ಗಳ ಮುದ್ರಣ ಕಾರ್ಯವನ್ನು ಕೈಗೊಳ್ಳುವ ಸಂಬಂಧ ಸಂಘವು ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಇವರಿಗೆ ಪತ್ರ ವ್ಯವಹರಣೆ ನಡೆಸಿದ್ದು, ಮುದ್ರಣಾಲಯವು ಸದರಿ ಪುಸ್ತಕಗಳ ಮುದ್ರಣ ಕಾರ್ಯವನ್ನು ಕೈಗೊಳ್ಳಲು ಸಮ್ಮತಿಸಿ, ಸರ್ಕಾರಿ ಮುದ್ರಣಾಲಯವು ಮುದ್ರಣ ವೆಚ್ಚ ರೂ.58.37 ಲಕ್ಷಗಳ ಅಂದಾಜು ಪಟ್ಟಿಯನ್ನು ನೀಡಿರುತ್ತದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, ವಸತಿ ಶಾಲೆಗಳ 6ನೇ ತರಗತಿಯಿಂದ 10ನೇ ತರಗತಿಯವ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಪಠ್ಯಪುಸ್ತಗಳನ್ನು ಸರ್ಕಾರಿ ಮುದ್ರಣಾಲಯದಿಂದ ರೂ.58.37 ಲಕ್ಷಗಳ ವೆಚ್ಚದಲ್ಲಿ ಮುದ್ರಿಸಿ ವಿತರಿಸಲು ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ ವಸತಿ ಶಾಲೆಗಳಿಗೆ ಕಂಪ್ಯೂಟರ್ ವಿಷಯದ ಪಠ್ಯ ಪುಸ್ತಕಗಳನ್ನು ಮುದ್ರಿಸಿ, ಉಚಿತವಾಗಿ ವಿತರಿಸುವ ಬಗ್ಗೆ ದೀರ್ಘವಾಗಿ ಚರ್ಚಿಸಿ, ಕಂಪ್ಯೂಟರ್ ಶಿಕ್ಷಣದ ಬಗ್ಗೆ ತಯಾರಿಸಲಾದ ಪಠ್ಯಕ್ರಮವನ್ನು ಸಿಡಿಯಲ್ಲಿ ಅಳವಡಿಸಿಕೊಂಡು ವಸತಿ ಶಾಲೆಗಳ ಪ್ರಾಂಶುಪಾಲರಿಗೆ ವಿತರಿಸುವುದು ಸೂಕ್ತವೆಂದು ಸಭೆಯಲ್ಲಿ ಅಭಿಪ್ರಾಯಪಡಲಾಯಿತು.**

**ವಿಷಯ ಸಂಖ್ಯೆ : 20**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗಳಿಗೆ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವ್ಯಾಪ್ತಿಯಲ್ಲಿನ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕ / ಬೋಧಕೇತರ ಸಿಬ್ಬಂದಿಗಳು ಉನ್ನತ ವ್ಯಾಸಂಗ ಮಾಡಲು ವೇತನ ಸಹಿತ/ ವೇತನ ರಹಿತ ರಜೆಯ ಅನುಮತಿಗಾಗಿ ಬಹಳಷ್ಟು ಪ್ರಸ್ತಾವನೆಗಳು ಸ್ವೀಕೃತವಾಗುತ್ತಿವೆ. ಈ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ, ಅವರು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳಿಗೆ ಪೂರಕವಾಗಿದ್ದು, ಅನುಮತಿ ನೀಡಿದಲ್ಲಿ ಬೋಧಕ ಸಿಬ್ಬಂದಿಗಳ ಬೋಧನಾ ಸಾಮಾರ್ಥ್ಯ ಹೆಚ್ಚಿಸಿ, ಪರಿಶಿಷ್ಟಜಾತಿ / ಪರಿಶಿಷ್ಟ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಜ್ಞಾನಾರ್ಜನೆ ಹೆಚ್ಚಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ.

ಕರ್ನಾಟಕ ಸೇವಾ ನಿಯಮ 61 (1) (ಎ) ರಡಿ ನೌಕರನು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗೆ ಪೂರಕವಾದ ವಿದ್ಯಾರ್ಹತೆ ಹೊಂದಲು ಅನುಮತಿ ನೀಡಬಹುದಾಗಿದೆ ಮತ್ತು ಇದೇ ನಿಯಮ (ಬಿ) ರಡಿ ಅವರ ಅರ್ಹತೆಯನ್ನು ಉತ್ತಮ ಪಡಿಸಿಕೊಳ್ಳಲು ಉನ್ನತ ವ್ಯಾಸಂಗಕ್ಕೆ ರಜೆ ಮಂಜೂರು ಮಾಡಲು ಅವಕಾಶ ಕಲ್ಪಿಸಬಹುದಾಗಿದೆ.

**ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಉನ್ನತ ವ್ಯಾಸಂಗಕ್ಕೆ ಅನುಮತಿ ಸ್ವೀಕರಿಸಿದ ಪ್ರಸ್ತಾವನೆಗಳು ಬಹುತೇಕವಾಗಿ ವಸತಿ ಶಾಲೆಗಳ ಕಾರ್ಯನಿರ್ವಹಣೆಗೆ ತೊಂದರೆಯಾಗದಂತೆ ಹಾಗೂ ರಜಾ ದಿನಗಳನ್ನು ಉನ್ನತ ವ್ಯಾಸಂಗಕ್ಕೆ ಉಪಯೋಗಿಸಿಕೊಳ್ಳಲು ಅನುಮತಿ ಕೋರಿರುತ್ತಾರೆ. ಸಂಘಕ್ಕೆ ಹಣಕಾಸಿನ ಹೊರೆಯಾಗದಂತೆ ಹಾಗು ವಸತಿ ಶಾಲೆಗಳ ಕರ್ತವ್ಯಕ್ಕೆ ತೊಂದರೆಯಾಗದಂತೆ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಅಧಿಕಾರವನ್ನು ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡುವ ಬಗ್ಗೆ ವಿಷಯವನ್ನು ಮಂಡಿಸಿ ತೀರ್ಮಾನ ಕೋರಿದೆ.

## ತೀರ್ಮಾನ

**ಆಡಳಿತ ಮಂಡಳಿಯು ವಸತಿ ಶಾಲೆ/ಪ್ರಾಂಶುಪಾಲರುಗಳು ಉನ್ನತ ವ್ಯಾಸಂಗಕ್ಕೆ ಪರವಾನಗೆ ನೀಡುವ ಪ್ರಸ್ತಾವನೆಯನ್ನು ಕೈಬಿಡುವಂತೆ ಕಟ್ಟುನಿಟ್ಟಾಗಿ ಸೂಚಿಸಿದೆ ಹಾಗೂ ವಸತಿ ಶಾಲೆಯ ಖಾಯಂ ಸಿಬ್ಬಂದಿಗಳು ಉನ್ನತ ವ್ಯಾಸಂಗವನ್ನು ಪಡೆಯಲು ಇಚ್ಛಿಸಿದಲ್ಲಿ, ವಿದ್ಯಾರ್ಥಿಗಳಿಗೆ ಪಾಠಪ್ರವಚನ, ವಸತಿ ಶಾಲಾ ಚಟುವಟಿಕೆಗಳು ಮತ್ತು ವಿದ್ಯಾರ್ಥಿಗಳ ದೈನಂದಿನ ನಿರ್ವಹಣೆಗೆ ಯಾವುದೇ ತೊಂದರೆಯಾಗದಂತೆ ಬಾಹ್ಯ(External) ಅಭ್ಯರ್ಥಿಯಾಗಿ, ಉನ್ನತ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲು, ಕಾರ್ಯನಿರ್ವಾಹಕ ನಿರ್ದೇಶಕರು ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ: 21**

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಗ್ರೂಪ್ ''ಸಿ'' ವೃಂದದ ಹುದ್ದೆಗಳಿಗೆ ಸಂದರ್ಶನವಿಲ್ಲದೆ ನೇರ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.**

ಸರ್ಕಾರದ ಅಧಿಸೂಚನೆ ಸಂಖ್ಯೆ: ಬಿಸಿಡಬ್ಲ್ಯೂ 160 ಬಿಇಟಿ 2015 ದಿನಾಂಕ 17.8.2015 ರಲ್ಲಿ ಕರ್ನಾಟಕ ವೃಂದ ಮತ್ತು ನೇಮಕಾತಿ ನಿಯಮ ಷೆಡ್ಯೂಲ್ – 2ಕ್ಕೆ ತಿದ್ದುಪಡಿ ತರಲಾಗಿದ್ದು, ಈ ತಿದ್ದುಪಡಿಯನ್ವಯ ವಸತಿ ಶಾಲೆ/ ಕಾಲೇಜುಗಳಲ್ಲಿನ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ಶೈಕ್ಷಣಿಕ ವಿದ್ಯಾರ್ಹತೆ, ಸ್ಪರ್ದಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು, ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲು ತಿಳಿಸಲಾಗಿದೆ.

ಸರ್ಕಾರವು ತನ್ನ ಆದೇಶ ಕ್ರಮಸಂಖ್ಯೆ : ಡಿಪಿಎಆರ್ 112 ಎಸ್ ಸಿ ಆರ್ 2013 ಬೆಂಗಳೂರು ದಿನಾಂಕ 31.12.2015 ರ ಅಧಿಸೂಚನೆಯಲ್ಲಿ '' ಸಿ '' ವೃಂದದ ಹುದ್ದೆಗಳಿಗೆ ಸಂದರ್ಶನವನ್ನು ಮಾನದಂಡವನ್ನು ರದ್ದುಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಸಂಘದ ಅಧ್ಯಕ್ಷರ ಅನುಮೋದನೆ ಪಡೆದು ವಸತಿ ಕಾಲೇಜುಗಳ ''ಸಿ'' ವೃಂದದ ಹುದ್ದೆಗಳಾದ ನಿಲಯಪಾಲಕರು, ದ್ವಿತೀಯ ದರ್ಜೆ ಸಹಾಯಕರುಗಳ ಹುದ್ದೆಗಳು ಮತ್ತು ವಸತಿ ಶಾಲೆಗಳಲ್ಲಿನ ಚಿತ್ರಕಲಾ ಶಿಕ್ಷಕರುಗಳ ಹುದ್ದೆಗಳಿಗೆ ಸಂದರ್ಶನವಿಲ್ಲದೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಮಾನ್ಯ ಸಂಘದ ಅಧ್ಯಕ್ಷರ ಅನುಮೋದನೆ ಪಡೆದು, ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ನೇಮಕಾತಿ ಪ್ರಕ್ರಿಯೆ ಹಮ್ಮಿಕೊಳ್ಳಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಸಂಘದ ಈ ಕ್ರಮಕ್ಕೆ ಅನುಮೋದನೆ ಕೋರಿದೆ.

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ ಕಾಲೇಜುಗಳಲ್ಲಿನ " ಸಿ" ವೃಂದದ ಹುದ್ದೆಗಳಾದ ಸಹ ಶಿಕ್ಷಕರು, ಗಣಕಯಂತ್ರ ಜ್ಞಾನವುಳ್ಳ ಪ್ರಥಮ ದರ್ಜೆ ಸಹಾಯಕರು, ನಿಲಯಪಾಲಕರು, ಶುಶ್ರೂಷಕರ ಹುದ್ದೆಗಳಿಗೆ ನಿಗದಿ ಪಡಿಸಿದ ಸಂದರ್ಶನ ಮಾನದಂಡಗಳನ್ನು ರದ್ದುಗೊಳಿಸಿ, ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ತರುವ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಿ, ಅನುಮೋದನೆ ಕೋರಿದೆ.

**ತೀರ್ಮಾನ :**

**ಆಡಳಿತ ಮಂಡಳಿಯು, ಸರ್ಕಾರವು ಗ್ರೂಪ್ ಸಿ ವೃಂದದ ಹುದ್ದೆಗಳಿಗೆ ಸಂದರ್ಶನವಿಲ್ಲದೇ ನೇರ ನೇಮಕಾತಿ ಮಾಡಿಕೊಳ್ಳಲು ನಿಯಮ ರೂಪಿಸುವ ಅಧಿಸೂಚನೆ ಸಂಖ್ಯೆ ಡಿಪಿಎಆರ್ 112 ಎಸ್ ಸಿ ಆರ್ 2013 ಬೆಂಗಳೂರು ದಿನಾಂಕ 31.12.2015 ರ ಅನ್ವಯ ಸಂಘವು ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ಪ್ರಸ್ತಾಪಿಸಿದ ತಿದ್ದುಪಡಿಯನ್ನು ಅನುಮೋದಿಸಿತು.**

ವಿಷಯ ಸಂಖ್ಯೆ : 22

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ವರ್ಗಾವಣೆ ಪ್ರಕ್ರಿಯೆಯಲ್ಲಿ ಪತಿ–ಪತ್ನಿ ಪ್ರಕರಣದಡಿ ಪರಿಗಣಿಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ/ಬೋದಕೇತರ ಸಿಬ್ಬಂದಿಗಳ ಪತಿ/ಪತ್ನಿಯರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸರ್ಕಾರದ ನಿಯಮದಂತೆ, ಪತಿ ಪತ್ನಿಯರು ಆದಷ್ಟು ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡಲು ಅವಕಾಶವಿದ್ದು, ಅದರಂತೆ, ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಪತಿ/ಪತ್ನಿಯರಿಗೆ ವರ್ಗಾವಣೆಗೆ ಪರಿಗಣಿಸುತ್ತಿಲ್ಲವೆಂದು ಮನವಿ ನೀಡಿರುತ್ತಾರೆ. ಸದರಿ ಮನವಿಯಲ್ಲಿ ಶಿಕ್ಷಣ ಇಲಾಖೆಯ ಈ ನಿಲುವಿನಿಂದಾಗಿ 400–500 ಕೀ ಮೀ ದೂರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತಿ–ಪತ್ನಿಯವರ ಕೌಟುಂಬಿಕ ಜೀವನಕ್ಕೆ ತೊಂದರೆಯಾಗಿ ಅನೇಕ ನೌಕರರು ತಮ್ಮ ಉದ್ಯೋಗವನ್ನೇ ತೊರೆಯುವಂತಹ ಮಾನಸಿಕ ಒತ್ತಡದಲ್ಲಿರುವುದಾಗಿ ತಿಳಿಸಿ, ಶಿಕ್ಷಣ ಇಲಾಖೆಯ ಸಿಬ್ಬಂದಿಗಳ ಪತಿ ಪತ್ನಿಯರು ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಕರಣಗಳಲ್ಲಿ ಪತಿ–ಪತ್ನಿ ಪ್ರಕರಣದಡಿ ವರ್ಗಾವಣೆಗೆ ಪರಿಗಣಿಸಲು ಅನುಕೂಲ ಮಾಡಿಕೊಡಲು ಕೋರಿರುತ್ತಾರೆ.

ಸಂಘದ ಅದೀನದ ವಸತಿ ಶಾಲೆಗಳು ಸರ್ಕಾರದ ವಸತಿ ಶಾಲೆಗಳೇ ಆಗಿದ್ದು, ಈ ವಸತಿ ಶಾಲೆಗಳ ಸಮಗ್ರ ನಿರ್ವಹಣೆಗೆ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ವರ್ಗಗಳ ಕಲ್ಯಾಣ ಇಲಾಖೆಯ ರಾಜ್ಯವಲಯದ ಆಯವ್ಯಯದಲ್ಲಿ ಅನುದಾನ ನಿಗಧಿಯಾಗಿ ಬಿಡುಗಡೆಯಾಗುತ್ತಿದ್ದು, ಸಂಘವು ಸಮಾಜ ಕಲ್ಯಾಣ ಸಚಿವಾಲಯ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಪತಿ ಅಥವಾ ಪತ್ನಿ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂಥವರಿಗೂ ಕೂಡಾ ಪತಿ ಪತ್ನಿ (Couple case) ಪ್ರಕರಣದಡಿ ವರ್ಗಾವಣೆಗೆ ಪರಿಗಣಿಸುವ ಬಗ್ಗೆ ಶಿಕ್ಷಣ ಇಲಾಖೆಯಿಂದ ಸೂಕ್ತ ಸರ್ಕಾರದ ಆದೇಶ ಹೊರಡಿಸಬೇಕಾಗುತ್ತದೆ.

ವಿಷಯವನ್ನು ಆಡಳಿತ ಮಂಡಳಿ ಸಭೆ ಮುಂದೆ ಮಂಡಿಸಿ, ಸಂಘದ ವಸತಿ ಶಾಲೆಗಳೂ ಕೂಡಾ ಸರ್ಕಾರದ ವಸತಿ ಶಾಲೆಗಳೆಂದು ಪರಿಗಣಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಪತಿ ಅಥವಾ ಪತ್ನಿ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂಥವರಿಗೂ ಕೂಡಾ ಪತಿ ಪತ್ನಿ (Couple case) ಪ್ರಕರಣದಡಿ ವರ್ಗಾವಣೆಗೆ ಪರಿಗಣಿಸಲು ಶಿಕ್ಷಣ ಇಲಾಖೆಯಿಂದ ಸೂಕ್ತ ಆದೇಶ ಹೊರಡಿಸುವ ಬಗ್ಗೆ ಪ್ರಸ್ತಾವನೆಯನ್ನು ಸಮಾಜ ಕಲ್ಯಾಣ ಸಚಿವಾಲಯದಿಂದ ಸಲ್ಲಿಸಲು ಅನುಮೋದನೆ ಕೋರಿದೆ. ಅದಲ್ಲದೇ, ಸಂಘದಿಂದ ವರ್ಗಾವಣೆ ಮಾಡುವಾಗ ಸಂಘದ ಸಿಬ್ಬಂದಿಗಳ ಪೈಕಿ ಪತಿ ಪತ್ನಿಯರು ಸರ್ಕಾರಿ ನೌಕರರಾಗಿದ್ದಲ್ಲಿ ಪತಿ ಪತ್ನಿ ಪ್ರಕರಣದಡಿ ಪರಿಗಣಿಸಿ ವರ್ಗಾವಣೆ ಮಾಡುವ ಅಧಿಕಾರವನ್ನು ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡಲು ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ತೀರ್ಮಾನಿಸಿತು.**

1. **ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಪತಿ ಅಥವಾ ಪತ್ನಿ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂಥವರಿಗೂ ಕೂಡಾ ಪತಿ-ಪತ್ನಿ (Couple case) ಪ್ರಕರಣದಡಿ ವರ್ಗಾವಣೆಗೆ ಪರಿಗಣಿಸಲು ಶಿಕ್ಷಣ ಇಲಾಖೆಯಿಂದ ಸೂಕ್ತ ಆದೇಶ ಹೊರಡಿಸುವ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆರವರಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಪ್ರಾಥಮಿಕ ಮತ್ತು ಪ್ರೌಢ) ಇವರಿಗೆ ಪತ್ರ ಬರೆಯಲು ತೀರ್ಮಾನಿಸಿತು.**
2. **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುವಾಗ ಸಂಘದ ಸಿಬ್ಬಂದಿಗಳ ಪತಿ ಅಥವಾ ಪತ್ನಿಯರು ಸರ್ಕಾರಿ ನೌಕರರಾಗಿದ್ದಲ್ಲಿ ಪತಿ-ಪತ್ನಿ (Couple case) ಪ್ರಕರಣದಡಿ ಪರಿಗಣಿಸಿ ವರ್ಗಾವಣೆ ಮಾಡುವ ಅಧಿಕಾರವನ್ನು ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡಲು ತೀರ್ಮಾನಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 23**

**ವಸತಿ ಶಾಲೆಗಳ ಬೋಧಕ ಸಿಬ್ಬಂಧಿಗಳಿಗೆ ಶ್ರೀ.ಕುಮಾರನಾಯಕ್ ಐ.ಎ.ಎಸ್. ಇವರ ನೇತೃತ್ವದ ಸಮಿತಿಯ ಶಿಫಾರಸ್ಸಿನಂತೆ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡುವ ಬಗ್ಗೆ.**

ಸರ್ಕಾರವು ಶಿಕ್ಷಣ ಇಲಾಖೆಯ ಅಂದಿನ ಕಾರ್ಯದರ್ಶಿಗಳಾದ ಶ್ರೀ.ಕುಮಾರನಾಯಕ್ ಐ.ಎ.ಎಸ್. ರವರ ನೇತೃತ್ವದ ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನ ವರದಿಯನ್ನಾಧರಿಸಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 78 ಎಸ್‌ಎಲ್‌ಬಿ 2016, ಬೆಂಗಳೂರು, ದಿನಾಂಕ:15.04.2016ರಲ್ಲಿ ಸರ್ಕಾರಿ/ಅನುದಾನಿತ ಪ್ರೌಢಶಾಲಾ ಶಿಕ್ಷಕರುಗಳಿಗೆ ಮತ್ತು ಮುಖ್ಯ ಶಿಕ್ಷಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ:01-06-2016 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿ ಆದೇಶಿಸಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳ ಬೋಧಕ ಸಿಬ್ಬಂದಿಗಳು ಮನವಿಯನ್ನು ಸಲ್ಲಿಸಿ, ಮೇಲ್ಕಂಡ ಸರ್ಕಾರಿ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿಯನ್ನು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ./ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳಿಗೆ ಮಂಜೂರು ಮಾಡುವಂತೆ ಕೋರಿರುತ್ತಾರೆ. ಸರ್ಕಾರದ ಆದೇಶದನ್ವಯ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ:01-06-2016 ರಿಂದ ಮಂಜೂರು ಮಾಡಿದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ. **285.98** ಲಕ್ಷಗಳ ವೆಚ್ಚ ಭರಿಸಬೇಕಾಗುತ್ತದೆ. ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಪ್ರಸ್ತಾವನೆಯನ್ನು ಪರಿಶೀಲಿಸಿ, ವಿಷಯವನ್ನು ಮುಂದೂಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 24**

**2015-16 ನೇ ಸಾಲಿನಲ್ಲಿ ಸಂಘದ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಇಂಟರ್‌ನೆಟ್ ಅಳವಡಿಸಿಕೊಳ್ಳಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಪ.ಜಾತಿ, ಪ.ವರ್ಗ, ಹಿಂದುಳಿದ ವರ್ಗಗಳ 505 ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ /ಏಕಲವ್ಯ/ಹುತಾತ್ಮರ ಶಾಲೆ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ/ ಪದವಿ ಪೂರ್ವ ಕಾಲೇಜುಗಳಲ್ಲಿ ಕೇಂದ್ರ ಕಛೇರಿಯಿಂದ, ಇತರೆ ಕಛೇರಿಗಳಿಂದ ಬರುವ ಪತ್ರಗಳ ವ್ಯವಹಾರ, HRMS ನ ಮುಖಾಂತರ ಪ್ರತಿ ಮಾಹೆ ಶಿಕ್ಷಕರ ಹಾಗೂ ಸಿಬ್ಬಂದಿಗಳ ವೇತನವನ್ನು ಪಾವತಿಸಲು ಹಾಗೂ SMS (School Management System )ಮೂಲಕ ಕೇಂದ್ರ ಕಛೇರಿಗೆ ಮಾಹಿತಿಗಳನ್ನು ನೀಡಲು ಅನುಕೂಲವಾಗುವಂತೆ ವಸತಿ ಶಾಲೆಗಳಲ್ಲಿ ಇಂಟರ್‌ನೆಟ್ ಉಪಯೋಗಿಸಲು ಪ್ರತಿ ಶಾಲೆಗೆ ರೂ 500/-ಗಳಂತೆ ಡಿಸೆಂಬರ್-2015 ಮತ್ತು ಜನವರಿ-2016 ರಲ್ಲಿ ಒಟ್ಟು ರೂ.5.05 ಲಕ್ಷಗಳನ್ನು ಸಂಘವು ವಸತಿ ಶಾಲೆಗಳಿಗೆ ಬಿಡುಗಡೆ ಮಾಡಿದ್ದು, ವಿಷಯವನ್ನು ಆಡಳಿತ ಮಂಡಳಿ ಸಭೆಯ ಅವಗಾಹನೆಗೆ ತರಲಾಗಿದೆ,

**ತೀರ್ಮಾನ:**

**2015-16 ನೇ ಸಾಲಿನಲ್ಲಿ ಸಂಘದ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಇಂಟರ್‌ನೆಟ್ ಅಳವಡಿಸಿಕೊಳ್ಳಲು ರೂ.5.05 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದ ಕ್ರಮವನ್ನು ಅವಗಾಹಿಸಿತು**

**ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು**

ವಿಷಯ ಸಂಖ್ಯೆ : 25

**ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಲಯಪಾಲಕ ವೇತನ ತಾರತಮ್ಯವನ್ನು ಸರಿಪಡಿಸುವ ಬಗ್ಗೆ.**

ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿಲಯಪಾಲಕರುಗಳು ಮನವಿಯನ್ನು ಸಲ್ಲಿಸಿ, ಸದರಿ ನಿಲಯಪಾಲಕರುಗಳು ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಸಮಾನಂತರವಾದ ವಿದ್ಯಾರ್ಹತೆಯನ್ನು ಹೊಂದಿದ್ದು, ಶಿಕ್ಷಕರುಗಳಿಗೆ ನಿಗಧಿಪಡಿಸಿರುವ ವೇತನ ಶ್ರೇಣಿ ರೂ.17650-32000 ಯನ್ನು ನಿಗಧಿಪಡಿಸಬೇಕೆಂದು ಹಾಗೂ ವಸತಿ ಶಾಲೆಗಳಲ್ಲಿ ವಿದ್ಯಾರ್ಹತೆಗಳ ಮಂಜೂರಾತಿ ಸಂಖ್ಯೆ 250 ಇದ್ದು, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಹಿರಿಯ ವಾರ್ಡನ್‌ಗಳಿಗೆ ನೀಡುವ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಬೇಕೆಂದು ಕೋರಿರುತ್ತಾರೆ.

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ನಿಲಯಪಾಲಕರ ಹುದ್ದೆಗಳಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳು-2011 ರಲ್ಲಿ ಈ ಕೆಳಕಂಡಂತೆ ವೇತನ ಶ್ರೇಣಿ ಮತ್ತು ವಿದ್ಯಾರ್ಹತೆಯನ್ನು ನಿಗಧಿಪಡಿಸಿದೆ.

"Must be a holder of bachelor degree in Arts or Science with B.Ed degree in Arts or Science subjects from a recognized

ನಿಲಯಪಾಲಕರುಗಳಿಗೆ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ರೂ.14550-26700ಗಳ ವೇತನ ಶ್ರೇಣಿ ಯನ್ನು ನಿಗಧಿಪಡಿಸಿರುತ್ತದೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಲಯಪಾಲಕರ ಜೂನಿಯರ್ ಮತ್ತು ಸಿನಿಯರ್ ಹುದ್ದೆಗಳನ್ನು ಸೃಜಿಸಲಾಗಿದೆ. ಈ ಹುದ್ದೆಗಳು ವಿದ್ಯಾರ್ಥಿಗಳ ಸಂಖ್ಯಾಬಲಕ್ಕನುಗುಣವಾಗಿ ಅಂದರೆ, 100 ವಿದ್ಯಾರ್ಥಿಗಳ ಸಂಖ್ಯಾಬಲವುಳ್ಳ ವಿದ್ಯಾರ್ಥಿನಿಲಯಗಳಿಗೆ ಜೂನಿಯರ್ ವಾರ್ಡನ್ ಹುದ್ದೆ ಸೃಜಿಸಲಾಗಿದ್ದು, ಸದರಿ ಜೂನಿಯರ್ ವಾರ್ಡನ್‌ಗೆ ರೂ.16650-26700 ಗಳ ವೇತನ ಶ್ರೇಣಿಯನ್ನು ನಿಗಧಿಪಡಿಸಲಾಗಿದೆ. ಅದೇ ರೀತಿ, 100 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯಾಬಲವುಳ್ಳ ವಿದ್ಯಾರ್ಥಿನಿಲಯಗಳಿಗೆ ಸಿನಿಯರ್ ವಾರ್ಡನ್ ಹುದ್ದೆ ಸೃಜಿಸಲಾಗಿದ್ದು, ಸದರಿ ಹುದ್ದೆಯ ವೇತನ ಶ್ರೇಣಿಯನ್ನು ರೂ. ರೂ.17650-32000 ಗಳಿಗೆ ನಿಗಧಿಪಡಿಸಲಾಗಿದೆ. ಸದರೀ ಸಿನಿಯರ್ ವಾರ್ಡನ್‌ಗಳ ಹುದ್ದೆಗಳು ಮುಂಬಡ್ತಿ ಹುದ್ದೆಗಳಾಗಿವೆ.

ಸಂಘದ ಅಧೀನದ ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯಾಬಲವು 250 ಆಗಿದ್ದು, ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಿನಿಯರ್ ವಾರ್ಡನ್‌ಗೆ ನಿಗಧಿಪಡಿಸಿರುವ ವೇತನ ಶ್ರೇಣಿ ರೂ.17650-32000ಗಳನ್ನು ನಿಗಧಿಪಡಿಸಬಹುದಾಗಿರುತ್ತದೆ. ಈ ವೇತನ ಶ್ರೇಣಿಯನ್ನು ಅಳವಡಿಸಿಕೊಂಡಾಗ ವಸತಿ ಶಾಲೆಗಳಲ್ಲಿ ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿರುವ 111 ವಾರ್ಡನ್‌ಗಳಿಗೆ ವಾರ್ಷಿಕವಾಗಿ ಈ ಕೆಳಕಂಡಂತೆ ರೂ.62.23 ಲಕ್ಷಗಳ ವೆಚ್ಚ ಭರಿಸಬೇಕಾಗುತ್ತದೆ. ಈ ಹೆಚ್ಚುವರಿ ವೆಚ್ಚ ರೂ.62.23 ಲಕ್ಷಗಳನ್ನು ವಸತಿ ಶಾಲೆಗಳ ನಿರ್ವಹಣಾ ಅನುದಾನದಲ್ಲಿ ಭರಿಸಲಾಗುವುದು

**ಸದಸ್ಯ ಕಾರ್ಯದರ್ಶಿ**

**ಅಧ್ಯಕ್ಷರು**

ಕೆಳಕಂಡಂತೆ ರೂ.62.23 ಲಕ್ಷಗಳ ವೆಚ್ಚ ಭರಿಸಬೇಕಾಗುತ್ತದೆ. ಈ ಹೆಚ್ಚುವರಿ ವೆಚ್ಚ ರೂ.62.23 ಲಕ್ಷಗಳನ್ನು ವಸತಿ ಶಾಲೆಗಳ ನಿರ್ವಹಣಾ ಅನುದಾನದಲ್ಲಿ ಭರಿಸಲಾಗುವುದು

| ಪ್ರಸ್ತುತ ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ವಾರ್ಡನ್‌ಗಳ ಸಂಖ್ಯೆ | (ರೂ.ಗಳಲ್ಲಿ) | | | |
|---|---|---|---|---|
| | ಪ್ರತಿ ವಾರ್ಡನ್‌ಗೆ ಪ್ರತಿ ಮಾಹೆ ಪರಿಷ್ಕೃತ ವೇತನ ಶ್ರೇಣಿಯ ಮೂಲವೇತನ ಮತ್ತು ಪ್ರಸ್ತುತ ನೀಡುತ್ತಿರುವ ಮೂಲವೇತನದ ವ್ಯತ್ಯಾಸ | ಪ್ರತಿ ಸಿಬ್ಬಂದಿಗೆ ಚಾಲ್ತಿಯಲ್ಲಿರುವ ಮನೆ ಬಾಡಿಗೆ ಭತ್ಯೆ + ತುಟ್ಟಿ ಭತ್ಯೆಗಳು @ಶೇ.46ರಂತೆ | ಒಟ್ಟು | ಖಾಯಂ ವಾರ್ಡನ್‌ಗಳಿಗೆ ವಾರ್ಷಿಕವಾಗಿ ಭರಿಸಬೇಕಾದ ವೆಚ್ಚ |
| 111 | 3200 | 1472 | 4672 | 62.23 ಲಕ್ಷಗಳು |

ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ಸಂಘದ ಅಧೀನದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಖಾಯಂ ವಾರ್ಡನ್‌ಗಳಿಗೆ ಪ್ರಸ್ತುತ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಲ್ಲಿ ನಿಗಧಿಪಡಿಸಿರುವ ವೇತನ ಶ್ರೇಣಿ ರೂ.14450-26700ರ ಬದಲಾಗಿ ರೂ.17650-32000ಗಳಿಗೆ ನಿಗಧಿಪಡಿಸಲು ಅನುಮೋದನೆ ಕೋರಿದೆ. ಅನುಮೋದಿಸಿದಲ್ಲಿ ಸಂಘದ ವೃಂದ ಮತ್ತು ನೇಮಕಾತಿ ವಿನಿಯಮಗಳಿಗೆ ಸರ್ಕಾರದ ತಿದ್ದುಪಡಿ ಅಧಿಸೂಚನೆ ಹೊರಡಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

**ತೀರ್ಮಾನ:**

**ಆಡಳಿತ ಮಂಡಳಿಯು ಪ್ರಸ್ತಾವನೆಯನ್ನು ಕೈಬಿಡಲು ತೀರ್ಮಾನಿಸಿತು.**

## ವಿಷಯ ಸಂಖ್ಯೆ: 26

**ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಿಜ್ಞಾನ ಕಾಲೇಜು/ಏಕಲವ್ಯ ಮಾದರಿ ಪದವಿ ಪೂರ್ವ ವಿಜ್ಞಾನ ಕಾಲೇಜುಗಳಿಗೆ ಪಠ್ಯ ಪುಸ್ತಕಗಳನ್ನು ಮಾತ್ರ ವಿತರಿಸಲಾಗುತ್ತಿದ್ದು, ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ಮಾತ್ರ ವಿತರಿಸಲಾಗುತ್ತಿದ್ದು, 2016-17 ನೇ ಸಾಲಿನಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪಠ್ಯಪುಸ್ತಕಗಳ ಜೊತೆಗೆ Reference Books ಗಳನ್ನು ಖರೀದಿಸಿ ವಿತರಿಸುವ**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 26 ಮೊರಾರ್ಜಿ ದೇಸಾಯಿ ಮತ್ತು 04 ಏಕಲವ್ಯ ಮಾದರಿ ಪದವಿ ಪೂರ್ವ ವಿಜ್ಞಾನ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯು ಅನುಮೋದಿಸಿದ ಪಠ್ಯಪುಸ್ತಕಗಳನ್ನು ಸಂಘವು ಖರೀದಿಸಿ ಉಚಿತವಾಗಿ ವಿತರಿಸುತ್ತಿದೆ.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2016-17ನೇ ಸಾಲಿನಲ್ಲಿ ಪಠ್ಯಪುಸ್ತಕಗಳ ವಿತರಣೆ ಜೊತೆಗೆ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ Reference Books ಗಳನ್ನೂ ಸಹ ಖರೀದಿಸಿ ವಿತರಿಸಲು ಉದ್ದೇಶಿಸಲಾಗಿದೆ. ವಿವಿಧ ಲೇಖಕರುಗಳು ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ರಚಿಸಿದ Reference Books ಗಳ

ಸದಸ್ಯ ಕಾರ್ಯದರ್ಶಿ                                                                 ಅಧ್ಯಕ್ಷರು

ಉಪಯುಕ್ತತೆ ಬಗ್ಗೆ ಸಂಘದ ಕಾಲೇಜುಗಳ ಉಪನ್ಯಾಸಕರುಗಳಿಂದ ಮಾಹಿತಿಯನ್ನು ಪಡೆದು ಪಟ್ಟಿಯನ್ನು ತಯಾರಿಸಲಾಗಿದೆ.

30 ಕಾಲೇಜುಗಳ ಗ್ರಂಥಾಲಯಗಳಿಗೆ ಪ್ರತಿ ಕಾಲೇಜಿನ ಗ್ರಂಥಾಲಯಕ್ಕೆ ಪ್ರತಿ ಲೇಖಕರ 5 ಪುಸ್ತಕಗಳನ್ನು ಖರೀದಿಸಿ, ಕಾಲೇಜುಗಳ ಗ್ರಂಥಾಲಯಕ್ಕೆ ನೀಡಲು ಉದ್ದೇಶಿಸಿದ್ದು ಒಟ್ಟು 13950 ಪುಸ್ತಕಗಳನ್ನು ರೂ. 59.85 ಲಕ್ಷಗಳ ವೆಚ್ಚದಲ್ಲಿ ಖರೀದಿಸಬೇಕಾಗುತ್ತದೆ. ಈ ವೆಚ್ಚವನ್ನು ವಸತಿ ಕಾಲೇಜುಗಳ ನಿರ್ವಹಣಾ ಲೆಕ್ಕಶೀರ್ಷಿಕೆಯಡಿ 20116-17ನೇ ಸಾಲಿನ ಆಯವ್ಯಯದಲ್ಲಿ ನಿಗಧಿಯಾದ ಅನುದಾನದಲ್ಲಿ ಭರಿಸಲಾಗುವುದು. ಅನುಮೋದಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಅನ್ವಯ ಖರೀದಿಗೆ ಕ್ರಮವಹಿಸಲಾಗುವುದು.

ವಿವಿಧ ಲೇಖಕರುಗಳು ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ರಚಿಸಿದ Reference Books ಗಳ ಮತ್ತು ಭರಿಸಬೇಕಾದ ವೆಚ್ಚದ ವಿವರಗಳನ್ನು ಅನುಬಂಧ-1ರಲ್ಲಿ ತೋರಿಸಲಾಗಿದೆ. ವಿಷಯವನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ, ವಿಷಯವಾರು, ತರಗತಿವಾರು ಪ್ರಸ್ತಾಪಿಸಿದ Reference Booksಗಳ ಖರೀದಿಗೆ ರೂ. **59,84,850/-** ಗಳ ವೆಚ್ಚ ಭರಿಸಲು ಅನುಮೋದನೆ ಕೋರಿದೆ.

<u>ತೀರ್ಮಾನ:</u>

**ಆಡಳಿತ ಮಂಡಳಿಯು ಪ್ರಸ್ತಾವನೆಯನ್ನು ಪರಿಶೀಲಿಸಿ, ಮೊರಾರ್ಜಿ ದೇಸಾಯಿ/ಏಕಲವ್ಯ ಪದವಿ ಪೂರ್ವ ವಸತಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿಷಯವಾರು, ತರಗತಿವಾರು ಪ್ರಸ್ತಾಪಿಸಿದ Reference Booksಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಅನ್ವಯ ಕ್ರಮವಹಿಸಲು ಹಾಗೂ ರೂ. 59,84,850/- ಗಳ ವೆಚ್ಚ ಭರಿಸಲು ಅನುಮೋದಿಸಿತು.**

<u>ವಿಷಯ ಸಂಖ್ಯೆ: 27</u>
<u>ಸಂಘದ ವಸತಿ ಶಾಲೆಗಳಲ್ಲಿ ಖಾಲಿ ಹುದ್ದೆಗಳಿಗೆ ಕಾರ್ಯನಿರ್ವಹಿಸುತ್ತಿರುವ ಗೌರವಧನ/ಅತಿಥಿ ಉಪನ್ಯಾಸಕರುಗಳು/ಶಿಕ್ಷಕರುಗಳಿಗೆ ಮಾಸಿಕ ವೇತನವನ್ನು ಹೆಚ್ಚಿಸುವ ಬಗ್ಗೆ.</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 479 ಮೊರಾರ್ಜಿದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಲ್ಲಿ ಪ್ರಸ್ತುತ ೩೮೮1 ಹುದ್ದೆಗಳಲ್ಲಿ ಖಾಯಂ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ, ಹೊರಸಂಪನ್ಮೂಲ ಸಿಬ್ಬಂದಿಗಳು ಸಹ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದ್ಯಾಗ್ಯೂ ಸಹ ವಸತಿ ಶಾಲೆಗಳಲ್ಲಿ ಅಗತ್ಯ ಬೋಧಕ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಶಿಕ್ಷಣ ಇಲಾಖೆಯ ಮಾದರಿಯಲ್ಲಿ ಅತಿಥಿ ಶಿಕ್ಷಕರುಗಳನ್ನು ಆಯಾ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ವಸತಿ ಶಾಲೆಯ ಶಿಕ್ಷಕರಿಗೆ ಮಾಸಿಕ ರೂ.6000/- ಗಳಂತೆ ವಸತಿ ಕಾಲೇಜುಗಳ ಉಪನ್ಯಾಸಕರುಗಳಿಗೆ ರೂ.8,000/-ಗಳಂತೆ ನೇಮಕ ಮಾಡಿಕೊಳ್ಳಲು ಸಂಘದ

ಸದಸ್ಯ ಕಾರ್ಯದರ್ಶಿ | ಅಧ್ಯಕ್ಷರು

60 ನೇ ಆಡಳಿತ ಮಂಡಳಿಯ ತೀರ್ಮಾನದಂತೆ ನೇಮಕ ಮಾಡಿಕೊಳ್ಳಲಾಗಿದೆ. ಪ್ರಸ್ತುತ 308 ಅತಿಥಿ ಶಿಕ್ಷಕರುಗಳು ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಸರ್ಕಾರಿ (ಕ್ರೈಸ್) ವಸತಿ ಶಾಲೆಗಳ ವಿದ್ಯಾರ್ಥಿಗಳ ಪಾಲಕರ ಮತ್ತು ಪೋಷಕರ ಸಂಘ (ರಿ.) ಬೆಂಗಳೂರು ರವರು ದಿನಾಂಕ : 09-02-2016 ರಂದು ಮನವಿಯನ್ನು ಸಲ್ಲಿಸಿ ಪ್ರಸ್ತುತ ಪಾವತಿಸುತ್ತಿರುವ ಮಾಸಿಕ ಗೌರವಧನವು ಕಡಿಮೆ ಇರುವುದರಿಂದ ಪ್ರಮುಖವಾಗಿ ವಿಜ್ಞಾನ ಹಾಗೂ ಗಣಿತ ಶಿಕ್ಷಕರುಗಳು ಲಭ್ಯವಾಗುವುದಿಲ್ಲ ಹಾಗೂ ಸದರಿ ಅತಿಥಿ ಶಿಕ್ಷಕರುಗಳಿಗೆ ಪಾವತಿಸಲಾಗುತ್ತಿರುವ ಗೌರವಧನವು ಕಾರ್ಮಿಕರ ಕನಿಷ್ಟ ವೇತನಕ್ಕಿಂತ ಕಡಿಮೆ ಇರುವುದಾಗಿ ತಿಳಿಸಿ ಗೌರವಧನವನ್ನು ಹೆಚ್ಚಿಸಲು ಕೋರಿರುತ್ತಾರೆ. ಅಲ್ಲದೇ, ವಸತಿ ಶಾಲೆಗಳ ಪ್ರಾಂಶುಪಾಲರುಗಳು ಹಾಲಿ ಅತಿಥಿ ಶಿಕ್ಷಕರುಗಳಿಗೆ ನಿಗಧಿಪಡಿಸಿದ ಮಾಸಿಕ ಗೌರವಧನಕ್ಕೆ ಶಿಕ್ಷಕರುಗಳು ಲಭ್ಯತೆಯಾಗುತ್ತಿಲ್ಲ ಅದರಲ್ಲೂ ಆಂಗ್ಲ, ಗಣಿತ ಹಾಗೂ ವಿಜ್ಞಾನ ಶಿಕ್ಷಕರುಗಳು ಲಭ್ಯವಾಗುತ್ತಿಲ್ಲವೆಂದು ತಿಳಿಸಿ, ಅತಿಥಿ ಶಿಕ್ಷಕರುಗಳಿಗೆ ಪ್ರಸ್ತುತ ನಿಗಧಿಪಡಿಸಿರುವ ಗೌರವಧನವನ್ನು ಹೆಚ್ಚಳ ಮಾಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡಂತೆ, ವಸತಿ ಶಾಲೆಗಳ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅತಿಥಿ ಶಿಕ್ಷಕರುಗಳು ಗೌರವಧನವನ್ನು ಹೆಚ್ಚಿಸುವುದು ಸೂಕ್ತವಾಗಿದ್ದು, ಅತಿಥಿ ಶಿಕ್ಷಕರುಗಳಿಗೆ ಪ್ರಸ್ತುತ ಮಾಹೆಯಾನ ನೀಡಲಾಗುತ್ತಿರುವ ಗೌರವಧನ ರೂ.6000/- ಗಳಿಂದ ರೂ.8500/- ಗಳಿಗೆ ಹೆಚ್ಚಿಸಲು ವಿಷಯವನ್ನು ಪ್ರಸ್ತಾಪಿಸಿದೆ. ಪ್ರಸ್ತಾಪಿಸಿದ ದರದಲ್ಲಿ ವೇತನವನ್ನು ಹೆಚ್ಚಿಸಿದಲ್ಲಿ ವಾರ್ಷಿಕವಾಗಿ ರೂ. 77.00 ಲಕ್ಷಗಳ ಹೆಚ್ಚುವರಿ ವೆಚ್ಚ ಭರಿಸಬೇಕಾಗುತ್ತದೆ. ಸದರಿ ವೆಚ್ಚವನ್ನು ಸಂಘದ ವಸತಿಶಾಲೆ/ಕಾಲೇಜುಗಳ ನಿರ್ವಹಣಾ ಅನುದಾನದಲ್ಲಿ ಭರಿಸಬಹುದಾಗಿದೆ.

ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ, ವಸತಿ ಶಾಲೆಗಳ ಅತಿಥಿ ಶಿಕ್ಷಕರುಗಳಿಗೆ ಪ್ರಸ್ತುತ ಮಾಹೆಯಾನ ನೀಡಲಾಗುತ್ತಿರುವ ರೂ.6000/-ರಿಂದ ರೂ.8500/- ಗಳಿಗೆ ಹೆಚ್ಚಿಸಲು ಈ ಬಾಬ್ತು ರೂ.77.00 ಗಳ ಹೆಚ್ಚುವರಿ ವೆಚ್ಚವನ್ನು ಸಂಘವು ಭರಿಸುವ ಬಗ್ಗೆ ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯದ ಬಗ್ಗೆ ಚರ್ಚಿಸಿ, ಪ್ರಸ್ತಾವನೆಯನ್ನು ಕೈಬಿಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 28**

**ಮೊರಾರ್ಜಿ ದೇಸಾಯಿ ವಸತಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ ವಸತಿ ಶಾಲೆ/ಅಟಲ್ ಬಿಹಾರಿ ವಾಜಪೇಯಿ ಶಾಲಾ/ ಕಾಲೇಜುಗಳಲ್ಲಿ ರಜಾ ಅವಧಿಗಳಲ್ಲಿ ತಮ್ಮ ಸ್ವಂತ ಊರಿನಲ್ಲಿ ಆಕಸ್ಮಿಕವಾಗಿ ಮರಣ ಹೊಂದಿದ್ದು, ಪರಿಹಾರದ ಧನ ನೀಡಲು ಪ್ರಸ್ತಾವನೆಗಳು ಸ್ವೀಕೃತವಾಗಿರುವ ಬಗ್ಗೆ**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆಕಸ್ಮಿಕ ಅಪಘಾತ ಸಂಭವಿಸಿದಲ್ಲಿ ಅವರಿಗೆ ರೂ.1.00 ಲಕ್ಷಗಳ ಪರಿಹಾರ ಧನವನ್ನು ಪಾವತಿಸುವ ಬಗ್ಗೆ ಸಂಘದ 47ನೇ ಆಡಳಿತ ಮಂಡಳಿ ಸಭೆಯಲ್ಲಿ ವೈದ್ಯಕೀಯ ಪ್ರಮಾಣ

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ಪತ್ರದ ಆಧಾರದ ಮೇಲೆ ರೂ.50,000/- ಗಳ ವರೆಗೆ ಆಕಸ್ಮಿಕ ಅಪಘಾತದಿಂದ ಕಣ್ಣು ಕಿವಿ, ಕೈ ಕಾಲು ಮೊದಲಾದ ಅಂಗಗಳ ವೈಕಲ್ಯತೆ ಉಂಟಾದಲ್ಲಿ ಕೆಳಕಂಡ ಪ್ರಮಾಣಕ್ಕನುಗುಣವಾಗಿ ಪಾವತಿಸಲು ತೀರ್ಮಾನಿಸಿರುತ್ತದೆ.

| | |
|---|---|
| ಶೇ.25% ಕ್ಕಿಂತ ಕಡಿಮೆಯಿದ್ದಲ್ಲಿ | ರೂ.15,000/- |
| ಶೇ.40% ಕ್ಕಿಂತ ಕಡಿಮೆಯಿದ್ದಲ್ಲಿ | ರೂ.30,000/- |
| ಶೇ.50% ಕ್ಕಿಂತ ಕಡಿಮೆಯಿದ್ದಲ್ಲಿ | ರೂ.40,000/- |
| ಶೇ.50% ಕ್ಕಿಂತ ಹೆಚ್ಚಿಗೆ ಇದ್ದಲ್ಲಿ | ರೂ.50,000/- |

ಆಡಳಿತ ಮಂಡಳಿಯ ತೀರ್ಮಾನದಂತೆ ವಸತಿ ಶಾಲೆಯಲ್ಲಿ ವ್ಯಾಸಂಗದ ಸಂದರ್ಭದಲ್ಲಿ ಮೇಲ್ಕಂಡ ಪ್ರಕರಣಗಳು ಸಂಭವಿಸಿದಾಗ ಮಾತ್ರ ಪರಿಹಾರದ ಧನ ನೀಡಲು ಅವಕಾಶವಿರುತ್ತದೆ.

ಆದರೆ, ಕೆಲವು ವಸತಿ ಶಾಲೆ/ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ರಜಾ ಅವಧಿ/ಇತರೆ ಸಂದರ್ಭಗಳಲ್ಲಿ ಪೋಷಕರೊಂದಿಗೆ ತಮ್ಮ ಸ್ವಂತ ಊರಿಗೆ ಹೋದ ಸಂದರ್ಭದಲ್ಲಿ ಆಕಸ್ಮಿಕವಾಗಿ ಮರಣ ಹೊಂದಿದ ಸಂದರ್ಭದಲ್ಲಿಯೂ ಕೂಡಾ ಪರಿಹಾರ ದನ ನೀಡಲು ವಿದ್ಯಾರ್ಥಿಗಳ ಪೋಷಕರಿಂದ ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ.

ಆದರೆ ಮಧ್ಯಂತರ ರಜಾ ಅವಧಿ ಹಾಗೂ ಇತರೆ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಪೋಷಕರು ಊರಿಗೆ ಕರೆದುಕೊಂಡು ಹೋದಾಗ ಸಂಭವಿಸುವ ಸಾವು ಹಾಗೂ ಇತರೆ ಪ್ರಕರಣಗಳ ಬಗ್ಗೆ ಆಡಳಿತ ಮಂಡಳಿಯ ಸಭೆಯು ಸ್ಪಷ್ಟವಾಗಿ ತಿಳಿಸಿಲ್ಲದಿರುವುದರಿಂದ, ವಿಷಯದಲ್ಲಿ ಪ್ರಸ್ತಾಪಿಸಿರುವಂತೆ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳು ರಜಾ ಅವಧಿಗಳಲ್ಲಿ ತಮ್ಮ ಸ್ವಂತ ಊರಿಗೆ ತೆರಳಿದಾಗ ಆಗುವ ಆಕಸ್ಮಿಕ ಸಾವು ಹಾಗೂ ಇತರೆ ಪ್ರಕರಣಗಳಿಗೆ ಪರಿಹಾರದ ಧನ ನೀಡುವ ಬಗ್ಗೆ ವಿಷಯವನ್ನು ಆಡಳಿತ ಮಂಡಳಿಯ ತೀರ್ಮಾನಕ್ಕಾಗಿ ಮಂಡಿಸಿದೆ.

**ತೀರ್ಮಾನ**

**ಆಡಳಿತ ಮಂಡಳಿಯು ವಿಷಯದ ಬಗ್ಗೆ ಚರ್ಚಿಸಿತು. ಮಧ್ಯಂತರ ರಜಾ ಅವಧಿ ಹಾಗೂ ಇತರೆ ಸಂದರ್ಭಗಳಲ್ಲಿ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಸ್ವಂತ ಊರಿಗೆ ತೆರಳಿದಾಗ ಆಗುವ ಆಕಸ್ಮಿಕ ಸಾವು ಹಾಗೂ ಇತರೆ ಪ್ರಕರಣಗಳಿಗೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳ ಪೋಷಕರುಗಳಿಗೆ ಪರಿಹಾರ ಧನ ನೀಡುವ ಸಂಬಂಧವಾಗಿ ಸಂಘದ ಉಪಾಧ್ಯಕ್ಷರಿಗೆ ಸಮಗ್ರ ಮಾಹಿತಿಯೊಂದಿಗೆ ಪ್ರತಿ ಪ್ರಕರಣವನ್ನು ಮಂಡಿಸಿ, ಉಪಾಧ್ಯಕ್ಷರ ತೀರ್ಮಾನದಂತೆ ಪರಿಹಾರ ಧನವನ್ನು ನೀಡಲು ತೀರ್ಮಾನಿಸಲಾಯಿತು. ಹಾಗೂ ಪರಿಹಾರ ಧನ ನೀಡಿದ ಪ್ರಕರಣವಾರು (Casewise) ವಿವರಗಳನ್ನು ಮುಂದಿನ ಆಡಳಿತ ಮಂಡಳಿ ಮುಂದೆ ಮಂಡಿಸಲು ಸೂಚಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ:29**
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ವಸತಿ ಶಾಲೆ/ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳ ವೈದ್ಯಕೀಯ ವೆಚ್ಚ ಭರಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಪ್ರಸ್ತುತ ಒಟ್ಟು 505 ವಸತಿ ಶಾಲೆ/ಪದವಿ ಪೂರ್ವ ವಸತಿ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿದ್ದು, ವಸತಿ ಶಾಲೆಗಳಲ್ಲಿ ಪ್ರತಿ ವಸತಿ ಶಾಲೆಗೆ 250 ವಿದ್ಯಾರ್ಥಿಗಳು ಪ್ರತಿ ಕಾಲೇಜಿಗೆ 160 ವಿದ್ಯಾರ್ಥಿಗಳ ಮಂಜೂರಾತಿ ಇರುತ್ತದೆ. ಈ ವಿದ್ಯಾರ್ಥಿಗಳು ವಸತಿ ಶಾಲೆಗಳಲ್ಲಿಯೇ ವಾಸ್ತವ್ಯವಿರುವುದರಿಂದ ಇವರುಗಳಿಗೆ ವಸತಿ, ಊಟ ಮತ್ತು ಶಿಕ್ಷಣವನ್ನು ಸರ್ಕಾರದಿಂದ ಉಚಿತವಾಗಿ ನೀಡಲಾಗುತ್ತದೆ. ಇದರೊಂದಿಗೆ ವಿದ್ಯಾರ್ಥಿಗಳು ಅನಾರೋಗ್ಯ ಪೀಡಿತರಾದಲ್ಲಿ ಅವರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸುವುದೂ ಸಹ ಸಂಘದ ಜವಾಬ್ದಾರಿಯಾಗಿರುತ್ತದೆ.

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ,ಅಂಬರಕೊಪ್ಪ(ಎಸ್.ಸಿ) (ಕುಟ್ರಳ್ಳಿ), ಶಿಕಾರಿಪುರ ತಾ॥ ಶಿವಮೊಗ್ಗ ಜಿ॥ ಇಲ್ಲಿ ವ್ಯಾಸಂಗ ಮಾಡುತ್ತಿರುವ ದಿವ್ಯ ಜೆ.ಎಂ. ಇವರು ದಿ:07.11.2015 ರಂದು ನಡೆದ ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಬಿದ್ದು ತಲೆಯ ಹಿಂಭಾಗದಲ್ಲಿ ಅತೀ ತೀವ್ರ ತೆರನಾದ ಪೆಟ್ಟು ಬಿದ್ದು ಕೋಮಾ ಹಂತಕ್ಕೆ ತಲುಪಿದ್ದು ಈ ವಿದ್ಯಾರ್ಥಿನಿಗೆ ತುರ್ತು ಚಿಕಿತ್ಸೆ ಕೊಡಿಸಲು ಕ್ರೀಡಾಂಗಣದ ಪಕ್ಕದಲ್ಲಿ ಇರುವ ಮೆಟ್ರೋ ಯುನೈಟೆಡ್ ಹೆಲ್ತ್‌ಕೇರ್ ಶಿವಮೊಗ್ಗ ಇಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದು, ಈ ಚಿಕಿತ್ಸೆಗಾಗಿ ಮಾಡಿರುವ ವೆಚ್ಚ ರೂ.51882/- ಗಳನ್ನು ಪಾವತಿಸುವಂತೆ ಪ್ರಾಂಶುಪಾಲರು ಕೋರಿರುತ್ತಾರೆ.

ಪ್ರತಿ ವಸತಿ ಶಾಲೆಗೆ ವೈದ್ಯಕೀಯ ವೆಚ್ಚಕ್ಕಾಗಿ ವಾರ್ಷಿಕ ರೂ.20,000/- ಗಳನ್ನು ಬಿಡುಗಡೆ ಮಾಡಲಾಗುತ್ತದೆ. ವಿದ್ಯಾರ್ಥಿಗಳ ಆರೋಗ್ಯದಲ್ಲಿ ಸಣ್ಣ-ಪುಟ್ಟ ತೊಂದರೆಗಳು ಅಂದರೆ ತಲೆನೋವು,ಶೀತ,ನೆಗಡಿ,ಕೆಮ್ಮು,ಜ್ವರ, ಮುಂತಾದ ತೊಂದರೆಗಳು ತಲೆದೋರಿದಲ್ಲಿ ಅವರಿಗೆ ಸೂಕ್ತ ಚಿಕಿತ್ಸೆಯನ್ನು ಕೊಡಿಸಿದ ವೆಚ್ಚವನ್ನು ಈ ಹಣದಲ್ಲಿ ಭರಿಸಬಹುದಾಗಿದೆ. ಆದರೆ ತೀವ್ರತೆರನಾದ ಅನಾರೋಗ್ಯ ಉಂಟಾದಲ್ಲಿ ಅಂತಹ ಮಕ್ಕಳನ್ನು ಆಸ್ಪತ್ರೆಗಳಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಿದಲ್ಲಿ ವೈದ್ಯಕೀಯ ವೆಚ್ಚವು ಹೆಚ್ಚಾಗುತ್ತದೆ. ಸರ್ಕಾರಿ ಆಸ್ಪತ್ರೆಗಳು ಇರದೇ ಇರುವ ಸಂದರ್ಭಗಳಲ್ಲಿ ಖಾಸಗಿ ಆಸ್ಪತ್ರೆಗೆ ವಿದ್ಯಾರ್ಥಿಗಳನ್ನು ದಾಖಲಿಸಿ ಚಿಕಿತ್ಸೆ ಕೊಡಿಸುವ ಸಂದರ್ಭ ಉಂಟಾಗುತ್ತದೆ. ಇಂತಹ ವೆಚ್ಚಗಳನ್ನು ಭರಿಸಲು ಸಂಘದಲ್ಲಿ ಇದುವರೆವಿಗೆ ಪ್ರತ್ಯೇಕವಾಗಿ ಯಾವುದೇ ಅನುದಾನವನ್ನು ನಿಗಧಿಪಡಿಸಿಕೊಂಡಿರುವುದಿಲ್ಲ.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿರುವ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಪ್ರತಿ ವರ್ಷ ವಿದ್ಯಾರ್ಥಿಗಳ ವಂತಿಕೆಯನ್ನು (ಪ್ರಾಥಮಿಕ 6 & 7ನೇ ತರಗತಿ ವಿದ್ಯಾಥಿಗಳಿಗೆ ವಾರ್ಷಿಕ ರೂ.2/- ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.5/- ಗಳ)ನ್ನು ಸಂಘದ ವತಿಯಿಂದ ಜಮಾ

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

ಮಾಡಲಾಗುತ್ತದೆ. ಈ ನಿಧಿಯಿಂದ ವಿದ್ಯಾರ್ಥಿಗಳ ಖಾಯಿಲೆಯ ತೀವ್ರತೆಯನ್ನು ಆಧರಿಸಿ ರೂ.3000/- ಗಳಿಂದ ರೂ.15000/- ವರೆಗೆ ವೈದ್ಯಕೀಯ ನೆರವು ದೊರೆಯುತ್ತದೆ. ಈ ಮೊತ್ತವನ್ನು ನಿಗಧಿತ ಕಾಲಮಿತಿಯೊಳಗೆ ಶಿಕ್ಷಣ ಇಲಾಖೆಯು ನಿಗಧಿಪಡಿಸಿದ ಅರ್ಜಿಯಲ್ಲಿ ಪ್ರಸ್ತಾವನೆ ಸಲ್ಲಿಸಿ ಪಡೆಯಬಹುದಾಗಿದೆ. ಈ ಮೊತ್ತವನ್ನು ವಿದ್ಯಾರ್ಥಿಯ ಪೋಷಕರಿಗೆ ನೀಡಲಾಗುತ್ತದೆ. ಆದರೆ ವಸತಿ ಶಾಲೆಯಲ್ಲಿರುವ ವಿದ್ಯಾಥಿಗಳಿಗೆ ಚಿಕಿತ್ಸೆ ಕೊಡಿಸಿದಲ್ಲಿ ಶಿಕ್ಷಣ ಇಲಾಖೆಯ ಮಕ್ಕಳ ಕಲ್ಯಾಣ ನಿಧಿಯಿಂದ ಶಾಲೆಯ ಪ್ರಾಂಶುಪಾಲರಿಗೆ ಹಣ ಪಾವತಿಯಾಗುವುದಿಲ್ಲ. ಬದಲಿಗೆ ವಿದ್ಯಾರ್ಥಿಯ ಪೋಷಕರಿಗೆ ಹಣ ಪಾವತಿಯಾಗುತ್ತದೆ. ಆದ್ದರಿಂದ ತುರ್ತು ಸಂದರ್ಭಗಳಲ್ಲಿ ತೀವ್ರತೆರನಾದ ಖಾಯಿಲೆಗಳಿಗೆ ಚಿಕಿತ್ಸೆ ಕೊಡಿಸಿದಲ್ಲಿ ಆಗುವ ವೆಚ್ಚದ ಬಿಲ್ಲಗಳನ್ನಾಧರಿಸಿ ಪಾವತಿಸುವ ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿ ಅನುಮೋದನೆ ಕೋರುತ್ತಾ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ,ಅಂಬರಕೊಪ್ಪ(ಎಸ್.ಸಿ) (ಕುಟ್ರಳ್ಳಿ), ಶಿಕಾರಿಪುರ ತಾ|| ಶಿವಮೊಗ್ಗ ಜಿ|| ಇಲ್ಲಿ ವ್ಯಾಸಂಗ ಮಾಡುತ್ತಿರುವ ದಿವ್ಯ ಜೆ.ಎಂ. ಎಂಬ ವಿದ್ಯಾರ್ಥಿನಿ ಕ್ರೀಡಾಕೂಟದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಬಿದ್ದು ತಲೆಯ ಹಿಂಭಾಗದಲ್ಲಿ ಅತೀ ತೀವ್ರ ತೆರನಾದ ಪೆಟ್ಟು ಬಿದ್ದು ಕೋಮಾ ಹಂತಕ್ಕೆ ತಲುಪಿದ ಸಂದರ್ಭದಲ್ಲಿ ತುರ್ತು ಚಿಕಿತ್ಸೆ ಕೊಡಿಸಿದ ಬಾಬ್ತು ರೂ.51,882/- ಗಳನ್ನು ಪಾವತಿಸಲು ಅನುಮೋದನೆ ಕೋರಿದೆ.

ತೀರ್ಮಾನ

**ಆಡಳಿತ ಮಂಡಳಿಯು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ,ಅಂಬರಕೊಪ್ಪ(ಎಸ್.ಸಿ) (ಕುಟ್ರಳ್ಳಿ), ಶಿಕಾರಿಪುರ ತಾ|| ಶಿವಮೊಗ್ಗ ಜಿ|| ಇಲ್ಲಿ ವ್ಯಾಸಂಗ ಮಾಡುತ್ತಿರುವ ದಿವ್ಯ ಜೆ.ಎಂ. ಎಂಬ ವಿದ್ಯಾರ್ಥಿನಿ ಕ್ರೀಡಾಕೂಟದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಬಿದ್ದು ತಲೆಯ ಹಿಂಭಾಗದಲ್ಲಿ ಅತೀ ತೀವ್ರ ತೆರನಾದ ಪೆಟ್ಟು ಬಿದ್ದು ಕೋಮಾ ಹಂತಕ್ಕೆ ತಲುಪಿರುವುದನ್ನು ಮನಗಂಡು, ಈ ವಿದ್ಯಾರ್ಥಿನಿಯ ತುರ್ತು ಚಿಕಿತ್ಸೆಗೆ ರೂ.51,882/- ಗಳನ್ನು ಪೋಷಕರುಗಳಿಗೆ ಸಂಘದ ಕಾರ್ಪಸ್ ಫಂಡಿನಿಂದ ನೀಡಲು ಅನುಮೋದಿಸಲಾಯಿತು. ಇನ್ನು ಮುಂದೆ ಇಂಥ ಪ್ರಕರಣಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳು ಸ್ವೀಕೃತವಾದಲ್ಲಿ ಸಂಘದ ಉಪಾಧ್ಯಕ್ಷರಿಗೆ ಕಡತವನ್ನು ಮಂಡಿಸಿ, ಉಪಾಧ್ಯಕ್ಷರ ತೀರ್ಮಾನದಂತೆ, ಸಂಘವು ಕ್ರಮವಹಿಸಲು ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ: 30

## ವಸತಿ ಶಾಲೆ/ಕಾಲೇಜುಗಳ ತಪಾಸಣೆಗೆ ವಸತಿ ಶಾಲೆಗಳ ಪ್ರಾಂಶುಪಾಲರುಗಳ ಮತ್ತು ಸಿಬ್ಬಂದಿಗಳ ತಂಡವನ್ನು ರಚಿಸುವ ಬಗ್ಗೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಮತ್ತು ಕಾಲೇಜುಗಳ ಆಡಳಿತ ಮತ್ತು ನಿರ್ವಹಣೆಯ ಬಗ್ಗೆ ಮತ್ತು ಶೈಕ್ಷಣಿಕ ಕಾರ್ಯಚಟುವಟಿಕೆಗಳು

**ಸದಸ್ಯ ಕಾರ್ಯದರ್ಶಿ** ಅಧ್ಯಕ್ಷರು

ಪರಿಣಾಮಕಾರಿಯಾಗಿ ಹಾಗೂ ಯಶಸ್ವೀಯಾಗಿ ನಡೆಯುತ್ತಿರುವ ಬಗ್ಗೆ ತಪಾಸಣೆ ನಡೆಸಿ ವರದಿ ಪಡೆಯಲು ಸಂಘದಲ್ಲಿ ಹಿರಿಯ ಅಧಿಕಾರಿಗಳ ಕೊರತೆಯಿದ್ದು, ಈ ಉದ್ದೇಶಕ್ಕಾಗಿ ವಸತಿ ಶಾಲೆಗಳ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳ ತಂಡವನ್ನು ರಚಿಸಿ ತಪಾಸಣೆ ನಡೆಸಿ ವರದಿ ಪಡೆಯುವುದು ಸೂಕ್ತವೆಂದು ಭಾವಿಸಲಾಗಿದೆ.

ವಸತಿ ಶಾಲೆ/ ಕಾಲೇಜುಗಳ ತಪಾಸಣೆ ಮಾಡಲು ಪ್ರತಿ ಕಂದಾಯ ವಿಭಾಗಕ್ಕೆ ರಾಜ್ಯ ಮಟ್ಟದ ಒಂದು ಖಾಯಂ ತಪಾಸಣಾ ತಂಡವನ್ನು ರಚಿಸಿ ಪ್ರತಿ ತಂಡದಲ್ಲಿ ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಇಂಗ್ಲೀಷ್ ಮತ್ತು ದೈಹಿಕ ಶಿಕ್ಷಣ ವಿಷಯಗಳಲ್ಲಿ ವಿಷಯ ಪರಿಣಿತರಾದ 5 ಜನ ಖಾಯಂ ಸಿಬ್ಬಂದಿಯನ್ನು ನೇಮಕ ಮಾಡುವುದು. ಪ್ರತಿ ತಂಡಕ್ಕೆ ಒಬ್ಬ ನುರಿತ, ದಕ್ಷ ಮತ್ತು ಪ್ರಾಮಾಣಿಕ ಪ್ರಾಂಶುಪಾಲರನ್ನು ತಂಡದ ಪ್ರಧಾನ ತಪಾಸಣಾ ಅಧಿಕಾರಿಯನ್ನಾಗಿ ನೇಮಿಸಿ, ಕೇಂದ್ರ ಕಛೇರಿಯ ನಿರ್ದೇಶನದಂತೆ ಹಾಗೂ ವಸತಿ ಶಾಲೆಯ ಕಾರ್ಯಚಟುವಟಿಕೆಗಳಿಗೆ ತೊಂದರೆಯಾಗದಂತೆ, ತಂಡವನ್ನು ರಚಿಸಿ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಿ ವರದಿ ಪಡೆಯಲು ಉದ್ದೇಶಿಸಿದೆ.

<u>ತಪಾಸಣಾ ತಂಡದ ರಚನೆಯ ಉದ್ದೇಶಗಳು:</u>

1. ಸಂಘದಿಂದ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ನೀಡಲಾದ ಸವಲತ್ತುಗಳು ಸಕಾಲದಲ್ಲಿ ವಿದ್ಯಾರ್ಥಿಗಳಿಗೆ ತಲುಪಿರುವ ಬಗ್ಗೆ
2. ವಸತಿ ಶಾಲೆಯ ಪ್ರಾಂಶುಪಾಲರ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ಬಗ್ಗೆ ಪರಿಶೀಲನೆ
3. ಶಿಕ್ಷಕರ ಬೋಧನಾ ಸಾಮಾರ್ಥ್ಯ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿರುವ ಬಗ್ಗೆ ಪರಿಶೀಲನೆ
4. ವಸತಿ ಶಾಲೆಯಲ್ಲಿ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳ ವಿತರಣೆ ಹಾಗೂ ನಿಲಯಪಾಲಕರ ಕರ್ತವ್ಯ ನಿರ್ವಹಣೆಯ ಬಗ್ಗೆ ಪರಿಶೀಲನೆ
5. ವಸತಿ ಶಾಲೆಯ ಸರ್ವ ಸಮಸ್ಯೆಗಳ ಬಗ್ಗೆ ವರದಿ ನೀಡುವುದು.
6. ವಸತಿ ಶಾಲೆಗಳ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯ ಬಗ್ಗೆ ವರದಿ
7. ವಸತಿ ಶಾಲೆಯ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ವಸತಿ ಶಾಲೆಯ ಸ್ಟಾಫ್ ನರ್ಸ್/ಸಿಬ್ಬಂದಿಗಳು ತೆಗೆದುಕೊಂಡ ಕ್ರಮದ ಪರಿಶೀಲನೆ
8. ಶೈಕ್ಷಣಿಕ, ಕ್ರೀಡೆ ಮತ್ತು ಸಾಂಸ್ಕೃತ ಚಟುವಟಿಕೆಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುತ್ತಿರುವ ಬಗ್ಗೆ
9. ವಸತಿ ಶಾಲೆಯ ಮೂಲಭೂತ ಸೌಲಭ್ಯಗಳು ಮತ್ತು ವಸತಿ ಶಾಲೆಯಲ್ಲಿ ನಿರ್ವಹಿಸುತ್ತಿರುವ ವಹಿಗಳನ್ನು ಪರಿಶೀಲಿಸಿ ವರದಿ ನೀಡುವ ಬಗ್ಗೆ.

ಪ್ರಸ್ತಾಪಿಸಿದ ಪ್ರಾಂಶುಪಾಲರು ಮತ್ತು ಸಿಬ್ಬಂದಿಗಳ ತಂಡ ರಚಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>**ತೀರ್ಮಾನ**</u>

**ಆಡಳಿತ ಮಂಡಳಿಯು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಬಗ್ಗೆ ಅಗತ್ಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಮಂಡಿಸಿ, ಅನುಮೋದನೆ ಪಡೆದು ಮುಂದಿನ ಕ್ರಮ ಜರುಗಿಸಬೇಕೆಂದು ತೀರ್ಮಾನಿಸಿತು.**

ಸದಸ್ಯ ಕಾರ್ಯದರ್ಶಿ

ಅಧ್ಯಕ್ಷರು

**ವಿಷಯ ಸಂಖ್ಯೆ: 31**
**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ಗೌರವಧನದ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 532 ಎಸ್ಇಡಬ್ಲ್ಯೂ 96, ದಿನಾಂಕ:06-10-1999ರಲ್ಲಿ ಮಂಜೂರು ಮಾಡಿ ಆದೇಶಿಸಿದೆ. ಸಂಘಗಳ ನೋಂದಣಿ ಕಾಯ್ದೆಯಡಿ ನೋಂದಣಿಯಾಗಿ ದಿನಾಂಕ: 02-02-2000 ದಿಂದ ಕಾರ್ಯಾರಂಭ ಮಾಡಿದೆ. ಪ್ರಸ್ತುತ ಸಂಘದ ವ್ಯಾಪ್ತಿಯಲ್ಲಿ 505 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ಆದೇಶದಲ್ಲಿ ಸಂಘದ ಕೇಂದ್ರ ಕಛೇರಿಗೆ 14 ಹುದ್ದೆಗಳನ್ನು ಸೃಜಿಸಿದೆ. (ಕಾರ್ಯನಿರ್ವಾಹಕ ನಿರ್ದೇಶಕರು-1, ಸಹಾಯಕ ನಿರ್ದೇಶಕರು-2, ಯೋಜನಾಧಿಕಾರಿಗಳು-3, ಯೋಜನಾ ನಿರ್ವಾಹಕರು-4, ವಾಹನ ಚಾಲಕರು-2, ಗ್ರೂಪ್ ಡಿ -2).

ಸಂಘದ ಪ್ರಾರಂಭದಲ್ಲಿ 112 ವಸತಿ ಶಾಲೆಗಳ ನಿರ್ಮಾಣಕ್ಕೆ ಸೀಮಿತವಾಗಿ ಕಾರ್ಯನಿರ್ವಹಿಸುತ್ತಿದ್ದು, 112 ವಸತಿ ಶಾಲೆಗಳು ಜಿಲ್ಲಾ ಪಂಚಾಯತ್ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ತದನಂತರ 2004-05ನೇ ಸಾಲಿನಿಂದ ವರ್ಷವಾರು ಈವರೆವಿಗೂ 505 ವಸತಿ ಶಾಲೆಗಳನ್ನು ಮಂಜೂರು ಮಾಡಿದೆ. ಸರ್ಕಾರವು ದಿನಾಂಕ:01-04-2011 ರಿಂದ ವಸತಿ ಶಾಲೆಗಳ ನಿರ್ವಹಣೆಯನ್ನು 2011-12ನೇ ಸಾಲಿನಿಂದ ಶಿಕ್ಷಣ ಸಂಸ್ಥೆಗಳ ಸಂಘದ ಆಡಳಿತ ವ್ಯಾಪ್ತಿಗೆ ಒಳಪಡಿಸಿ, ಆದೇಶಿಸಿದೆ. ವರ್ಷವಾರು ಶಾಲೆಗಳ ಮಂಜೂರಾತಿ ಮತ್ತು ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ತೋರಿಸಿದೆ. 2011-12ನೇ ಸಾಲಿನಲ್ಲಿ ಸಂಘದ ಆಯವ್ಯಯವು ರೂ.400.80 ಕೋಟಿಗಳಾಗಿದ್ದು, 2016-17ನೇ ಸಾಲಿನಲ್ಲಿ ಆಯವ್ಯಯವು ರೂ. 1157.36 ಕೋಟಿಗಳಾಗಿವೆ.

ಸರ್ಕಾರವು 2015-16ನೇ ಸಾಲಿನಲ್ಲಿ 13 ಗ್ರೂಪ್ ಎ ಮತ್ತು ಬಿ ವೃಂದದ ಅಧಿಕಾರಿಗಳ ಹುದ್ದೆಗಳನ್ನು ಮಂಜೂರು ಮಾಡಿದೆ. ಒಟ್ಟಾರೆ, ಸಂಘದ ಕೇಂದ್ರ ಕಛೇರಿಗೆ 19 ಅಧಿಕಾರಿ ಹುದ್ದೆಗಳನ್ನು ಸೃಜಿಸಲಾಗಿದ್ದು, ಈ ಪೈಕಿ 8 ಹುದ್ದೆಗಳು ಭರ್ತಿಯಾಗಿವೆ. 11 ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ. ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. ಸಂಘವು ವಿವಿಧ ಇಲಾಖೆಗಳಿಂದ ನಿಯೋಜನೆ ಮೇಲೆ ಖಾಯಂ ಅಧಿಕಾರಿಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮವಹಿಸಿದ್ದರೂ ಸಹ ಇಲಾಖೆಗಳಿಂದ ಅಧಿಕಾರಿಗಳನ್ನು ನಿಯೋಜಿಸಿರುವುದಿಲ್ಲ.

ಸಂಘದ ಕಾರ್ಯವ್ಯಾಪ್ತಿಯು ಆಡಳಿತಾತ್ಮಕ, ಶೈಕ್ಷಣಿಕ, ಆರ್ಥಿಕ ಮತ್ತು ತಾಂತ್ರಿಕವಾಗಿ ವಿಸ್ತಾರವಾಗಿದ್ದು, ಈ ಕಾರ್ಯವ್ಯಾಪ್ತಿಯನ್ನು ಸಮರ್ಪಕವಾಗಿ ನಿರ್ವಹಿಸಲು ವಿವಿಧ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿ, ನಿವೃತ್ತಿ ಹೊಂದಿದ ಅಧಿಕಾರಿಗಳನ್ನು ಆಡಳಿತ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

| ಕ್ರ. ಸಂ. | ಗೌರವಧನದ ಅಧಿಕಾರಿ/ ಸಿಬ್ಬಂದಿಯ ಹೆಸರು | ಪದನಾಮ | ಗೌರವಧನ |
|---|---|---|---|
| 1 | ಚಂಗಲರಾಯ್ಡು. ಪಿ | ಕಾನೂನು ಮಾಹಿತಿ ಅಧಿಕಾರಿ | 30,000/- |
| 2 | ವಿ.ಸಿ.ಸಾರಂಗಪಾಣಿ | ವಿದ್ಯುತ್ ಸಲಹೆಗಾರರು | 30,000/- |
| 3 | ಜಿ.ಕೆ.ರಾಮು | ಸಹಾಯಕ ಕಾರ್ಯಪಾಲಕ ಅಭಿಯಂತರರು(ನಿ) | 28,000/- |
| 4 | ಕೆ.ಜಿ.ನಾಗರಾಜ ರಾವ್ | ಯೋಜನಾಧಿಕಾರಿಗಳು(ಸಮನ್ವಯ) | 20,000/- |
| 5 | ಎ.ಎನ್.ಲಕ್ಷ್ಮಿನಾರಾಯಣಗೌಡ | ಪ್ರ.ದ.ಸ. | 10,000/- |
| 6 | ಡಾ.ಬಿ.ಚಿನ್ನಸ್ವಾಮಿ | ಆರ್ಥಿಕ ಸಲಹೆಗಾರರು | 50,000/- |
| 7 | ಕೇಶವಮೂರ್ತಿ.ಜಿ. | ಅಧೀಕ್ಷಕರು (ನಿವೃತ್ತ) | 20,000/- |
| 8 | ಎ.ಟಿ.ಚಾಮರಾಜ | ಸಂಯೋಜನಾಧಿಕಾರಿಗಳು | 30,000/- |
| 9 | ಹೆಚ್.ಆರ್.ಶಿವಗಂಗಯ್ಯ | ಸಂಯೋಜನಾಧಿಕಾರಿಗಳು (ಶಿಕ್ಷಣ) | 20,000/- |
| 10 | ಬಿ.ಆರ್.ಚಿಕ್ಕಪ್ಪ | ನಿವೃತ್ತ ಲೆಕ್ಕಪರಿಶೋಧನಾಧಿಕಾರಿಗಳು | 21,600/- |

ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸು 588 ಸೆನೆನಿ 2015 ದಿನಾಂಕ:29.02.2016 ರಲ್ಲಿ ಅದೇ ಇಲಾಖೆಯಲ್ಲಿ ನಿವೃತ್ತಿ ಹೊಂದಿದ ಅಧಿಕಾರಿ/ಸಿಬ್ಬಂದಿಗಳನ್ನು ಗೌರವಧನದ ಆಧಾರದ ಮೇಲೆ ಮರುನೇಮಕ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಬಿಡುಗಡೆ ಮಾಡಲು ತಿಳಿಸಲಾಗಿದೆ.

ಕೇಂದ್ರ ಕಛೇರಿಯ ಅಧೀನದಲ್ಲಿ 505 ವಸತಿ ಶಾಲೆಗಳ ನಿರ್ವಹಣೆ ಮತ್ತು ಕಟ್ಟಡ ಕಾಮಗಾರಿ ಸಂಬಂಧಿಸಿದಂತೆ ಮೇಲೆ ಹೇಳಲಾದ ಕಾರ್ಯ ಒತ್ತಡವನ್ನು ನಿಭಾಯಿಸಲು ನುರಿತ ಅನುಭವಿ ಗೌರವಧನದ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವುದು ಅನಿವಾರ್ಯವಾಗಿದೆ. ಸರ್ಕಾರವು ಸೃಜಿಸಿ, ಖಾಲಿ ಇರುವ 11 ಹುದ್ದೆಗಳಿಗೆ ನಿಯೋಜನೆ ಮೇಲೆ ಖಾಯಂ ಅಧಿಕಾರಿಗಳು ಭರ್ತಿಯಾಗಿದ್ದಲ್ಲಿ ವಾರ್ಷಿಕ 87.59 ಲಕ್ಷಗಳಾಗುತ್ತಿತ್ತು. ಆದರೆ, ಸಂಘವು 10 ನಿವೃತ್ತ ಅಧಿಕಾರಿಗಳಿಗೆ ವಾರ್ಷಿಕವಾಗಿ ರೂ.31.15 ಲಕ್ಷಗಳ ವೆಚ್ಚ ಭರಿಸುತ್ತಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನೊಂದಾಯಿತ ಸಂಸ್ಥೆಯಾಗಿದ್ದು, ಸಂಘದ ಕಾರ್ಯ ಒತ್ತಡವನ್ನು ಪರಿಗಣಿಸಿ ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ 10 ನಿವೃತ್ತ ಅಧಿಕಾರಿಗಳ ಸೇವೆಯನ್ನು ಮುಂದಿನ ಒಂದು ವರ್ಷಕ್ಕೆ ಅಥವಾ ಖಾಯಂ ಅಧಿಕಾರಿಗಳು ನೇಮಕವಾಗುವವರೆಗೆ ಮುಂದುವರೆಸಲು ಆಡಳಿತ ಮಂಡಳಿ ಅನುಮೋದನೆ ಕೋರಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ವಿಷಯದ ಬಗ್ಗೆ ಚರ್ಚಿಸಿತು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿ/ಸಿಬ್ಬಂದಿಗಳನ್ನು ಮುಂದಿನ ಒಂದು ವರ್ಷಕ್ಕೆ ಅಥವಾ ಖಾಯಂ ಅಧಿಕಾರಿಗಳು ನೇಮಕವಾಗುವವರೆಗೆ ಮುಂದುವರೆಸಲು ತೀರ್ಮಾನಿಸಲಾಯಿತು.**

**ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು**

**ವಿಷಯ ಸಂಖ್ಯೆ: 32**

**ವಸತಿ ಶಾಲೆ/ಕಾಲೇಜುಗಳ ಕಟ್ಟಡ ಕಾಮಗಾರಿಗಳ ಹಾಗೂ ವಿದ್ಯಾರ್ಥಿನಿಲಯಗಳ ಕಟ್ಟಡಗಳ ಕಾಮಗಾರಿಗಳ ಪರಿಷ್ಕೃತ ಪರಿಮಾಣವನ್ನು ಅನುಮೋದಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ 44ನೇ ಆಡಳಿತ ಮಂಡಳಿ ಸಭೆಯಲ್ಲಿ ಕಾಮಗಾರಿಗಳ ಅನುಮೋದಿತ ಪರಿಮಾಣವು ಹೆಚ್ಚಾಗಿ, ಅನುಮೋದಿತ ಮೊತ್ತಕ್ಕಿಂತ ಶೇ.5 ರಷ್ಟು ಕಾಮಗಾರಿಯ ಮೊತ್ತವು ಹೆಚ್ಚಾದಲ್ಲಿ ಕಾಮಗಾರಿಯ ಮೊತ್ತವನ್ನು ಅನುಮೋದಿತ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಶೇ.5ರಷ್ಟು ಮೊತ್ತಕ್ಕೆ ಪರಿಷ್ಕೃತ ಬಿ.ಓ.ಕ್ಯೂ ಅನುಮೋದಿಸುವ ಅಧಿಕಾರವನ್ನು ಸಂಘದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು 5 ಕಾಮಗಾರಿಗಳ ಪರಿಷ್ಕೃತ ಪರಿಮಾಣವನ್ನು (Revised BOQ) ಅನುಮೋದಿಸಿರುತ್ತಾರೆ. ಮುಂದುವರಿದು, ಧಾರವಾಡ ಜಿಲ್ಲೆಯ ಬೆಟ್ಟದೂರು ಮೊರಾರ್ಜಿ ದೇಸಾಯಿ ವಸತಿ ಶಾಲಾ ಕಾಮಗಾರಿಯ ಶೇ.5ಕ್ಕಿಂತ ಹೆಚ್ಚಾದ ಪರಿಷ್ಕೃತ ಪರಿಮಾಣವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರು ಅನುಮೋದಿಸಿರುತ್ತಾರೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿ ಸಭೆಯು ವಿಷಯವನ್ನು ಅವಗಾಹಿಸಿತು. ದೀರ್ಘ ಚರ್ಚೆಯ ನಂತರ, ಇನ್ನು ಮುಂದೆ ಯಾವುದೇ ವಸತಿ ಶಾಲೆ/ಕಾಲೇಜುಗಳ ಕಟ್ಟಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ಪರಿಮಾಣವನ್ನು ಲೋಕೋಪಯೋಗಿ ಇಲಾಖೆಯ ನಿಯಮಾವಳಿಯಂತೆ, ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಾರ್ಯಪಾಲಕ ಅಭಿಯಂತರರ ದೃಢೀಕೃತ ಪರಿವೀಕ್ಷಣಾ ವರದಿಯನ್ನು ಸಂಘದ ಅಧೀಕ್ಷಕ ಅಭಿಯಂತರರ ಶಿಫಾರಸ್ಸಿನೊಂದಿಗೆ ಸಂಘದ ಉಪಾಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು ಅವರವರ ಅಧಿಕಾರ ಪ್ರತ್ಯಾಯೋಜನೆಗನುಸಾರವಾಗಿ ಅನುಮೋದನೆ ನೀಡಬೇಕೆಂದು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 33**

**ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಅವಗಾಹನೆಗೆ ಸಲ್ಲಿಸುವ ಬಗ್ಗೆ**

ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಪದವಿ ಪೂರ್ವ ವಸತಿ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ನಿರ್ಮಾಣ ಕಾಮಗಾರಿ ಹಾಗೂ ಹೆಚ್ಚುವರಿ ವಸತಿ ಗೃಹಗಳ ನಿರ್ಮಾಣಕ್ಕೆ ವಿವಿಧ ದಿನಾಂಕಗಳಂದು ಇ-ಪೋರ್ಟಲ್‌ನಡಿ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರರು ಅನುಮೋದಿಸಿರುವ ದರಗಳನ್ನು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಂಘದ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್

**ಸದಸ್ಯ ಕಾರ್ಯದರ್ಶಿ** **ಅಧ್ಯಕ್ಷರು**

ಅಂಗೀಕಾರ ಸಮಿತಿ ಸಭೆಯ ದಿನಾಂಕ:11-02-2016 ರಂದು ಅನುಮೋದಿಸಲಾಗಿದೆ. ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. ನಡವಳಿಯ ಪ್ರತಿಯನ್ನು ಪ್ರತ್ಯೇಕವಾಗಿ ನೀಡಲಾಗಿದೆ.

| ಕ್ರ. ಸಂ | ಟೆಂಡರ್ ಕಾಮಗಾರಿ ವಿವರಗಳು | ಅನುಮೋದಿಸಿದ ಕಾಮಗಾರಿಗಳ ವಿವರಗಳು |
|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜು | 3 |
| 2 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | 1 |
| 3 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು | 3 |
| 4 | ಮುಸ್ಲಿಂ ವಸತಿ ಶಾಲೆ/ಕಾಲೇಜು | 1 |
| 5 | ವಿದ್ಯಾರ್ಥಿನಿಲಯ ಕಟ್ಟಡಗಳ ಕಾಮಗಾರಿ | 1 |
| 6 | ಡಾ|| ಬಾಬು ಜಗಜೀವನರಾಂ ಭವನ ನಿರ್ಮಾಣ | 1 |
| 7 | ಹೆಚ್ಚುವರಿ ವಸತಿ ಗೃಹ ನಿರ್ಮಾಣ | 3 |
| 8 | ವಸತಿ ಶಾಲೆಗಳಿಗೆ ದುರಸ್ತಿ ಕಾಮಗಾರಿಗಳು | 10 |
| | ಒಟ್ಟು | 23 |

ಮೇಲೆ ಹೇಳಲಾದ ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸಿದೆ.

**ತೀರ್ಮಾನ:**

**ಆಡಳಿತ ಮಂಡಳಿಯು ಟೆಂಡರ್ ಅನುಮೋದನಾ ಸಮಿತಿ ನಡವಳಿಗಳನ್ನು ಅವಗಾಹಿಸಿತು.**

**ವಿಷಯ ಸಂಖ್ಯೆ: 33**

**ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಕಾಮಗಾರಿಗಳ ಪ್ರಗತಿ ವಿವರಗಳನ್ನು ಸಲ್ಲಿಸುವ ಬಗ್ಗೆ.**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಸಂಕೀರ್ಣ ನಿರ್ಮಾಣ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಸದರಿ ಕಾಮಗಾರಿಗಳ ಪ್ರಗತಿಯ ಘೋಶ್ವಾರೆಗಳನ್ನು ಕ್ರಮವಾಗಿ ಅನುಬಂಧಗಳಲ್ಲಿ ನೀಡಲಾಗಿದೆ. ವಿಷಯವನ್ನು ಸಭೆಯ ಅವಗಾಹನೆಗೆ ಮಂಡಿಸಿದೆ.

**ಸದಸ್ಯ ಕಾರ್ಯದರ್ಶಿ** | **ಅಧ್ಯಕ್ಷರು**

**ತೀರ್ಮಾನ:**

ಆಡಳಿತ ಮಂಡಳಿಯು ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಿಗೆ ಸಂಕೀರ್ಣ ನಿರ್ಮಾಣ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡ ಕಾಮಗಾರಿಗಳ ಪ್ರಗತಿಯನ್ನು ಅವಗಾಹಿಸಿತು.

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳ ಮೇಲೆ ತೀರ್ಮಾನ**

ಮಾನ್ಯ ಅಧ್ಯಕ್ಷರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಆಡಳಿತ ಮಂಡಳಿ ಸದಸ್ಯರ ಪಟ್ಟಿಯನ್ನು ಅವಲೋಕಿಸಿ, ಸಂಘದ ಆಡಳಿತ ವ್ಯಾಪ್ತಿಯಿಂದ ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆಯನ್ನು ಸರ್ಕಾರವು ವಾಪಾಸ್ ಪಡೆದಿರುವ ಹಿನ್ನೆಲೆಯಲ್ಲಿ ಸಂಘದ ಆಡಳಿತ ಮಂಡಳಿಯ ಸದಸ್ಯತ್ವ ಹೊಂದಿರುವ ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರುಗಳ ಸದಸ್ಯತ್ವನ್ನು ರದ್ದುಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ತಿದ್ದಪಡಿ ಆದೇಶ ಪಡೆಯಲು ತೀರ್ಮಾನಿಸಿತು ಹಾಗೂ ಸರ್ಕಾರದ ತಿದ್ದುಪಡಿಯನ್ನು ಸಂಘದ ಮುಂದಿನ ಸರ್ವಸಾಮಾನ್ಯ ಸದಸ್ಯರ ಮಹಾಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ಸಂಘದ ಬೈಲಾದಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

ಸಭೆಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

(ಹೆಚ್.ಆಂಜನೇಯ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು ಹಾಗೂ ಅಧ್ಯಕ್ಷರು,
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು